TEXT PROBLEM WITHIN THE BOOK ONLY

UNIVERSAL
LIBRARY
OU_200033
UNIVERSAL
LIBRARY

◁ಜಯಕರ್ನಾಟಕ ಗ್ರಂಥಮಾಲೆಯ ೧೪ ನೆಯ ಪುಷ್ಪ ▷

# ಮಾವಿನ ತೋಪು

ಶ್ರೀ. ಹಣಮಂತ ಪೀತಾಂಬರ ಜೋಶಿ, ಬಿ. ಎ.

ಮೊದಲನೆಯ ಮುದ್ರಣ]

ಬೆಲೆ ಹತ್ತು ಆಣೆಗಳು

೧೯೩೩

**ಮುದ್ರಕರು:**

[illegible]ಂತ ನಾರಾಯಣ ಬಾಗಲವಾಡಿ,
ಮೋಹನ ಮುದ್ರಣಾಲಯ, ಧಾರವಾಡ.

**ಪ್ರಕಾಶಕರು:**

ರಾಮಚಂದ್ರ ಪಾಂಡುರಂಗ ಬೆಳಗಾಂವಕರ,
ಜಯಕರ್ನಾಟಕ ಕಾರ್ಯಾಲಯ, ರೈಟರ ಓಣಿ
ಧಾರವಾಡ.

# ಪೂರ್ವರಂಗ

ಸ್ತ್ರೀಪುರುಷರ ಸಂಬಂಧದಲ್ಲಿಯದೊಂದು ಅತಿಸೂಕ್ಷ್ಮ ಸಮಸ್ಯೆಯನ್ನು ನಾನು ಈಗ ಇಲ್ಲಿ ಎತ್ತಿದ್ದೇನೆ. ಅದು ಕಾಯಿಕ ಸಹವಾಸ. ಈ ಸಹವಾಸವು ದೈಹಿಕ ದುರ್ಬಲತೆಯ ಮೂಲಕ ಅಶಕ್ಯವಾಗಿರಲಿ, ಅಥವಾ ಜುಗುಪ್ಸೆ-ಹೇಸಿಗೆಯಿಂದ ಮನಸ್ಸಿನಲ್ಲಿ ಅದರ ಬಗ್ಗೆ ಅನಾಸ್ಥೆ ಹುಟ್ಟಿರಲಿ, ಗಂಡಹೆಂಡಿರು ಆ ಮೇಲೆ ಒಂದೇ ಮನೆಯಲ್ಲಿ ಇರುವ ಕಾರಣವೇನು! ನಮ್ಮ ಹಿಂದೂ ಸಮಾಜದಲ್ಲಿ —ಉಚ್ಚವರ್ಗದವರಲ್ಲಿ ಎಂದು ಹೇಳೋಣ— ಇದ ಮದುವೆಯಿಂದ ಬಿಡುಗಡೆ ಅಥವಾ ಘಟಸ್ಫೋಟವಿಲ್ಲ. ಈ ಸ್ವಾತಂತ್ರ್ಯವಿದ್ದ ಸಮಾಜಗಳಲ್ಲೂ ಗಂಡಹೆಂಡಿರು ಸ್ವಾತಂತ್ರ್ಯದ ಲಾಭ ತೆಗೆದುಕೊಳ್ಳದೆ ಸುಳ್ಳೇ ಬಳಲುತ್ತ ಕಾಲ ಕಳೆಯುವರು. ಬಿಡುಗಡೆಯಾದರೆ ಇಬ್ಬರಿಗೂ ಹೊಸ ಹುರುಪಿನ ಸಂಸಾರ ಹೂಡುವುದಕ್ಕೆ ವ್ಯತ್ಯಯವೆಲ್ಲಿ! ಇಬ್ಬರಿಗೂ ಹೊಸಜೋಡಿಯು ಎದುರು. ಆದರೂ ಏಕೆ ಹೀಗಾಗುವುದಿಲ್ಲ!.... ಮನಸ್ಸಿನಲ್ಲಿ ಒಮ್ಮೆ ಹುಟ್ಟಿದ ಅನಾಸ್ಥೆ ಹೋಗುವುದೇ? ಮಾನಸಶಾಸ್ತ್ರ ಬಲ್ಲವರ ವಿಷಯವಿದು!

ಮಾಳಮಡ್ಡಿ, ಧಾರವಾಡ

**ಗ್ರಂಥಕರ್ತ**

# ಎರಡು ನುಡಿ

ಅಂತೂ ಇಂತೂ, ನಮ್ಮ ಗ್ರಂಥಮಾಲೆಯ ಮೂರನೆಯ ವರ್ಷವನ್ನು 'ಮಾವಿನ ತೋಪಿ'ನಿಂದ ಮೊದಲು ಮಾಡಿದೆವು. ಉಳಿದ ಐದು ಪುಸ್ತಕಗಳನ್ನು ಏಪ್ರಿಲ್‌ದೊಳಗಾಗಿ ಕೊಡುತ್ತೇವೆಂತ ಈ ಮೊದಲೇ ಮಾತುಕೊಟ್ಟಿದ್ದೇವೆ. ಭಾರವೇನೋ ದೊಡ್ಡದು. ಹೇಗೆ ನೀಗಬಹುದು? ಯಾವುದೋ ಪರಿಸ್ಥಿತಿವಿಶೇಷವು ಇಲ್ಲಿಯ ವರೆಗೆ ತಂದು ಮುಟ್ಟಿಸಿದೆ. ಮುಂದೆ ಏಕೆ ಒಯ್ಯಲಿಕ್ಕಿಲ್ಲ ಎಂಬುದೇ ಭರವಸೆ ನಮಗೆ.

ಮುಂದಿನ ಪುಷ್ಪವು, ಶ್ರೀ. ಟೇಂಗ್ಸೆ ಗೋವಿಂದರಾಯರ ಲೇಖನಿಯಿಂದ ಬಂದ **'ತರಂಗಿಣಿ'** ಎಂಬ ಜಗನ್ನಾಥಪಂಡಿತರ ಅದ್ಭುತರಮ್ಯ ಜೀವನಕಥೆಯನ್ನು ಆಧರಿಸಿ ಬರೆದ ಕಾವ್ಯಮಯ ನಾಟಕ. ಓದುಗರು ಈ ಸವಿಯೂಟವನ್ನು ಎದುರು ನೋಡಲಿ ಯೆಂದು ಹಾರಯ್ಕೆ.

**ಪ್ರಕಾಶಕರು**

| ಪರಿಚ್ಛೇದ | | ಪುಟ |
|---|---|---|
| ೧ | ಅಕ್ಕವ್ವ ಮನೆಗೆ ಬಂದಳು. | ೧ |
| ೨ | ಮನೆಯ ಸಮಾಚಾರ. | ೪ |
| ೩ | ಭೆಟ್ಟಿಯ ಪರಿಷ್ಕಾರ. | ೬ |
| ೪ | ಆಗಿ ಹೋದದ್ದು. | ೮ |
| ೫ | ಇನ್ನೂ ಕೆಲ ಪರಿಚಯದವರು. | ೧೦ |
| ೬ | ತಾಯಿ ಮಗಳ ಭೆಟ್ಟಿ. | ೧೫ |
| ೭ | ವೆಂಕಯ್ಯನ ಅಂಗಡಿ. | ೧೮ |
| ೮ | ಗೆಳತಿಯರು. | ೨೩ |
| ೯ | ಅಕ್ಕವ್ವ ನೋಡಿದ ದೃಶ್ಯ. | ೨೮ |
| ೧೦ | ಮದುವೆಯ ಒಗಟು. | ೩೦ |
| ೧೧ | ಪ್ರತಿಜ್ಞೆ. | ೩೩ |
| ೧೨ | ಬಭ್ರುವಾಹನ ನಾಟಕ. | ೩೫ |
| ೧೩ | ಮಾವಿನ ತೋಪಿನಲ್ಲಿ ದೀವಿಗೆ. | ೪೩ |
| ೧೪ | ಭುಜಂಗರಾಯರು ಸಣ್ಣ ಡಾಕ್ಟರರಾದರು. | ೪೭ |
| ೧೫ | " ಇನ್ನೂ ಎಷ್ಟ ದಿನಽ ಮಡಿವ್ಯಾಗಿರಽ ಬೇಕಂತೀಽ !" | ೪೯ |
| ೧೬ | " ನನ್ನಾಣೆ ಅದಽ ಸಿಸಗಽ. " | ೫೧ |
| ೧೭ | ಮನಶ್ಚಾಂಚಲ್ಯ. | ೫೩ |
| ೧೮ | ತಕ್ಕ ವರ. | ೫೫ |
| ೧೯ | ಅಪಘಾತ. | ೫೭ |
| ೨೦ | ಭುಜಂಗರಾಯರ ಧನವಂತ ರೋಗಿಗಳು. | ೬೧ |

| | | |
|---|---|---|
| ೨೧ | ತಿಳಿಯಬಾರದ್ದು. | ೬೩ |
| ೨೨ | ಅಂಗಾರರಾಯರು ತೋಪಿಗೆ ಹೋಗುವರು. | ೬೫ |
| ೨೩ | ಮತಿಗೆಟ್ಟರೆ ಮಂಗನ ಬಾಯಿ. | ೬೯ |
| ೨೪ | ಸ್ತ್ರೀಸ್ವಭಾವದ ಸೂಕ್ಷ್ಮತರಂಗ. | ೭೩ |
| ೨೫ | ಪಲಾಯನ. | ೭೮ |
| ೨೬ | ಗಂಪ ಬಿಟ್ಟ ಗೈಯಾಳಿ! | ೮೧ |
| ೨೭ | ಅತ್ಯವಸ್ಥೆ. | ೮೫ |
| ೨೮ | ಪುನರಾಗಮನಾಯ ಚ! | ೮೬ |
| ೨೯ | "ನನ್ನ ಬಿಟ್ಟು ಹೋಗಬಾರದು." | ೮೯ |
| ೩೦ | "ನೀಗಿದ್ದೊಮ್ಮೆ!" | ೯೧ |
| ೩೧ | ಓಂ ಸ್ವಸ್ತಿ! | ೯೪ |

# ಮಾವಿನ ತೋಪು

## ೧

### ಅಕ್ಕವ್ವ ಮನೆಗೆ ಬಂದಳು

ರಾತ್ರಿಯ ೯॥ ಯ ಸಮಯ. ಸ್ಟೇಶನ್ನಿನ ಆವಾರದಲ್ಲಿ ಒಂದು ಮೋಟರು ವೇಗದಿಂದ ಬಂದು ನಿಂತಿತು. ಇನ್ನೊಂದು ಕ್ಷಣ. ಅಪಘಾತ ಘಟ್ಟಿಟ್ಟ ಹಾಗೇ. ಏನೋ ಗುರುಹಿರಿಯರ ಪುಣ್ಯವೇ ಉಳಿದು ಬಂತೆನ್ನಬೇಕು. ಮೋಟರಿನಿಂದ ಒಬ್ಬ ಮಧ್ಯಮ ವಯಸ್ಕನಾದ ಗೃಹಸ್ಥ ಇಳಿದ. ಆತನಿಗೆ ತಾನು ಪಾರಾದ ಕುತ್ತಿನ ಅರಿವು ಸಹ ಇದ್ದಂತೆ ತೋರಲಿಲ್ಲ. ಕೆಳಗಿಳಿದ ಕೂಡಲೆ ತನ್ನ ಜೇಬಿನಲ್ಲಿದ್ದ ಗಡಿಯಾರವನ್ನು ತೆಗೆದು ನೋಡುತ್ತ, "ಗಾಡಿಗೆ ಇನ್ನೊಂದೇ ಮಿನಿಟು ಇದೆ —" ಇಷ್ಟೇ ತನ್ನಷ್ಟಕ್ಕೆ ತಾನೇ ನುಡಿದುಕೊಂಡು ಪ್ಲಾಟ್‌ಫಾರ್ಮದ ದಾರಿ ಹಿಡಿದ. ಗಾಡಿಯ ಕೂಗು ಕೇಳಿಬಂತು. ಪ್ಲಾಟ್‌ಫಾರ್ಮಿನ ಮೇಲೆ ಹೋಗಿ ನೋಡುತ್ತಾನೆ, ಗಾಡಿ ಬಂದದ್ದು ಮಾಲ ಗಾಡಿ. ಗೃಹಸ್ಥನ ಮೋರೆ ನೋಡುವಂತಾಯಿತು. ಬೆಪ್ಪನಾಗಿ ಒಂದೊಂದೇ ಡಬ್ಬಿಯನ್ನೆಣಿಸಹತ್ತಿದ. ಮೂವತ್ನಾಲ್ಕು—ಮೂವತ್ತೈದು, ಮೂವತ್ತಾರು—ಈವೊತ್ತು ಕಂಪನಿಯವರು ತಮ್ಮ ಎಲ್ಲ ಡಬ್ಬಿಗಳನ್ನು ಇದೇ ಗಾಡಿಗೆ ಜೋಡಿಸಿದ್ದರೋ ಏನೋ! ಇದಂತೂ ಮಾಲಗಾಡಿ. ದಿನದ ೯॥ ಗಾಡಿ ಎಲ್ಲಿ ಹೋಯಿತು ಹಾಗಾದರೆ! ಮಾಸ್ತರರನ್ನೇ ಕೇಳಿ ನೋಡಬೇಕೆಂದು ನಮ್ಮ ಗೃಹಸ್ಥ ಆಫೀಸಿನ ಕಡೆಗೆ ನಡೆದ.

ಮಾಸ್ತರರು Telephone—(ಧ್ವನಿವಾಹಕ ಯಂತ್ರ) ದ ಕೂಡ ಮಾತಾಡುತ್ತಿದ್ದರು. "ಹೂಂs—ನಾಳೆ ಎರಡು ಕಾಯಿ ಬಡಸ್ತೇನಿ ಮಹಾರಾಯರಾs – ನೋಡಬೇಕು – ಅದs – ಆ ಇನ್ಸ್‌ಪೆಕ್ಟ ಚಾಕೀ ಬಂದು ಬರಬೇಕಲ್ಲ – ಹೌದು – ನಾಳೆ ಸಂಜೆಗೆ ರಜಾ ಸಿಕ್ಕರs –" ಅಷ್ಟರಲ್ಲಿ ನಮ್ಮ ಗೃಹಸ್ಥ ಬಂದು "ಮಾಸ್ತರs ೯॥ ರ ಗಾಡಿ ಬಂತೇನ್ರೀ!" ಎಂದು ಕೇಳಿದ. ಆಯಿತು. ಮಾಸ್ತರರು ರೇಗಿ ಬಿಟ್ಟರು. "ಇದಲ್ಲೇನು ಮತ್ತ ಈಗ ಬಂದದ್ದು !" ಮಾಸ್ತರರು ತಮ್ಮ ಕೆಲಸಕ್ಕೆ ಹತ್ತಿದರು. ನಮ್ಮ ಗೃಹಸ್ಥ ಹಟಮಾರಿ. ಮತ್ತೆ ಕೇಳಿದ. "ಅಲ್ರಿ, ಮುಂದಿ ಕೂಡ್ರುವ ಗಾಡಿ ಕೇಳಿದೆ."

"ನೀವು ಕೂಡ್ರಿ. ತಾಸs ಆಗತsದ ಇದs ಮುಂದಿ ಕೂಡ್ರುವ ಗಾಡಿ."

"ನೀವು ಕೂತರಂತೂ ಆಗೋದಿಲ್ಲ." ಎಂದು ಗುಣಗುಟ್ಟುತ್ತ ಗೃಹಸ್ಥ ಹೊರಟ. ಮಾಸ್ತರರಿಗೀಗ ಎಚ್ಚರಾಯಿತು. ಮೋರೆಯನ್ನು ಮೇಲಕ್ಕೆತ್ತಿ ನೋಡಿದರು. ಗುರ್ತು ಹತ್ತಿತು.

"ಓಹೋ ! ಅಂಣಾರಾವ, ನೀವು ಯಾವಾಗ ಬಂದ್ರಿs! — ನಾನು ನೋಡಿದ್ದೇ ಇಲ್ಲ ಬಿಡ್ರಿ." ನಮ್ಮ ಗೃಹಸ್ಥನ ಕೆಲಸವಾಯಿತು. ಅದೂ ಇದೂ ಮಾತಾಡುತ್ತ ಮಾತಾಡುತ್ತ ತನಗೆ ಬೇಕಾದ ಸಂಗತಿಯನ್ನು ಮಾಸ್ತರರ ಬಾಯಿಂದ ಕೇಳಿಕೊಂಡ. ದಿನದ ೯॥ ಯ ಗಾಡಿಗೆ ಯಾವುದೋ ಒಂದು ಸ್ಟೇಶನ್ನದ ಹತ್ತಿರ ಅಪಘಾತವಾಗಿತ್ತಂತೆ. ಅಪಘಾತವೇನೂ ಮಹತ್ವದ್ದಾಗಿರಲಿಲ್ಲ. ಆದರೆ ಈ ಸ್ಟೇಶನ್ನಿಗೆ ಬಂದು ಹತ್ತಬೇಕಾದರೆ ಇನ್ನೂ ಮೂರು ತಾಸುಗಳ ಅವಕಾಶವಿತ್ತು. ಇತರ ಕೆಲವೊಂದು ಮಳಿಬೆಳಿಯ ಮಾತಾಡಿ ನಮ್ಮ ಗೃಹಸ್ಥ—ಅಂದರೆ ಅಂಣಾರಾಯರು ವೇಟಿಂಗರೂಮಿಗೆ ಬಂದು ಅಲ್ಲಿಯ ಆರಾಮ ಖುರ್ಚಿಯ ಮೇಲೆ ಬಿದ್ದುಕೊಂಡರು. ಆರಾಮಖುರ್ಚಿಗೆ ಒರಗಿಕೊಂಡಿದ್ದೇ ತಡ, ಗಾಢನಿದ್ರೆ ಹತ್ತಿತು.

೨–೨॥ ಯ ಸುಮಾರಕ್ಕೆ ಗಾಡಿಯು ಕರ್ಕಶವಾದ ಕೂಗು

ಕೇಳಿ ಒಮ್ಮೆಲೆ ಎಚ್ಚರಾಯಿತು. ಎದ್ದು ನೋಡುತ್ತಾರೆ, ಗಾಡಿಯು ಹೊರಟು ನಿಂತಿತ್ತು. ಏನೋ ಒಬ್ಬಿಬ್ಬರು ಪ್ರವಾಸಿಕರು ಈ ಸ್ಟೇಶನ್ನಿಗಿಳಿದಿದ್ದರೆ ಅವರೂ ಹೊರಟು ಹೋಗಿದ್ದರು. ದೀಪ ತೋರಿಸುವ ಪೋರ್ಟರನನ್ನು ಬಿಟ್ಟು ಉಳಿದವರು ತಮ್ಮ ತಮ್ಮ ದೀಪಗಳನ್ನು ತಲೆಗಿಂಬಾಗಿಟ್ಟುಕೊಂಡು ಮೊದಲಿನಿಂದ ಮಲಗುವ ಸಂಧಾನದಲ್ಲಿದ್ದರು. ಎಷ್ಟೋ ದೀಪಗಳ ಕೆಂಪು ಕಾಜುಗಳು ಇನ್ನೂ ಹಾಗೇ ಇದ್ದವು.

ಅಂಗಾರರಾಯರು ಒಂದೊಂದು ಡಬ್ಬಿಯ ಹತ್ತಿರ ಹೋಗಿ ನೋಡಿದರು. ಅವರಿಗೆ ಬೇಕಾದ ವ್ಯಕ್ತಿಯು ಬಂದಂತೆ ತೋರಲಿಲ್ಲ. "ಹುಂ: ! ಯಾವ ಗಾಡಿಗೆ ಕೂತನೋ ಏನೋ—" ಎಂದು ನುಡಿದು ಬಹು ವ್ಯಥೆಯಿಂದ ಪ್ಲಾಟ್‌ಫಾರ್ಮಿನಿಂದ ಹೊರಬಿದ್ದು ಮೋಟರ ಹತ್ತಿರ ಬಂದು "ಕೃಷ್ಣಾಽ-ಕೃಷ್ಣಾಽ—" ಎಂದು ಕೂಗಿದರು. ಕೃಷ್ಣನು ಯಾವ ರಾಮನ ಬೆನ್ನ ಹತ್ತಿ ಹೋಗಿದ್ದನೋ ! "ಓ" ಕೊಡಲಿಲ್ಲ.

ಅಂಗಾರರಾಯರು ಹತಾಶರಾಗಿ ಮೋಟರಿನೊಳಗೆ ಕೂಡ ಹೋಗುವಷ್ಟರಲ್ಲಿ ಒಳಗಿನಿಂದೊಂದು ನಗೆಯ ಸ್ಫೋಟವು ಕೇಳಿ ಬಂತು. ರಾಯರು ಬೆದರಿ "ಯಾರು !" ಎಂದು ಅಸ್ಪಷ್ಟ ದನಿಯಿಂದ ಕೇಳಿದರು.

"ಅಂಣಾ, ಎಲ್ಲಿ ಹೋಗಿದ್ರಿ !"

"ಅಕ್ಕವ್ವಽ! ನೀ ಬಂದಿಲ್ಲಽ ಅಂತ ಮಾಡಿದ್ದೆ."

"ಗಾಡಿಯಿಂದಽನ ನಾ ಕೃಷ್ಣಾನ್ನ ನೋಡಿದೆ. ನಿಮ್ಮನ್ನ ಕಾಣಲಿಲ್ಲ. ಕೇಳಿದೆ ಕೃಷ್ಣಾನ್ನಽ—ಬಂದಾರಽ ಅಂತ ಹೇಳಿದ—ಎಲ್ಲಿ ಹೋಗಿದ್ರಿ !"

"ನಾ ನಿನ್ನ ಹುಡುಕತಿದ್ದೆ."

ವೇಟಿಂಗರೂಮಿನಲ್ಲಿ ತಮಗೆ ನಿದ್ದೆ ಹತ್ತಿದ ಸುದ್ದಿಯನ್ನು ಮಾತ್ರ ಅಂಗಾರರಾಯರು ಬಚ್ಚಿಟ್ಟರು.

ಕೃಷ್ಣ ಬಂದ. ಮೋಟರು ಹೊರಟಿತು.

## ೨

## ಮನೆಯ ಸಮಾಚಾರ

ಈಗ ಮೋಟರು ಸೋಮನಾಥಪುರದ ದಾರಿ ಹಿಡಿದಿತ್ತು. ತಗ್ಗು ದಿಣ್ಣೆಯ ದಾರಿ. ನಡುನಡುವೆ ಸಣ್ಣ ಸಣ್ಣ ಹಳ್ಳಸರುವುಗಳು. ಮೋಟರು ಹೇಗೋ ನಡೆದಿತ್ತು.

ಇದುವರೆಗೆ ಅಕ್ಕವ್ವ ಆಯಿತು ಅಂಣಾರಾಯರಾಯಿತು ವಿಶೇಷ ಮಾತಾಡಿದ್ದಿಲ್ಲ. ಮೋಟರು ಸಮುದಾರಿಗೆ ಹತ್ತಿ ಗಾಳಿಯ ಸುಳಿವೂ ಸ್ವಲ್ಪ ಕಡಿಮೆಯಾದ ಮೇಲೆ ಅಕ್ಕವ್ವನೇ ಪ್ರಾರಂಭ ಮಾಡಿದಳು.

"ಅಂಣಾ, ಇನ್ನೂ ಹಾಂಗೆ ನಡದದ !"

"ಹಂ—" ಅಂಣಾರಾಯರು ಜಡವಾದ ದನಿಯಿಂದ ಉತ್ತರ ಕೊಟ್ಟರು – ಅಥವಾ ಉತ್ತರ ಕೊಟ್ಟಂತೆ ಮಾಡಿದರು.

"ಡಾಕ್ತರರಾದರೂ ಏನ ಅಂತಾರೆ."

"ಅನ್ನೋ ಮಾತು ಮುಗದದ. ದಿವಸ ಎಣಸೋದಷ್ಟೆ ಉಳದದ."

"ಯಾವದಾರೆ ದೇವಸ್ಥಾನಕ್ಕಾರೆ ಕರಕೊಂಡು ಹೋಗಬೇಕು ಅವ್ವನ್ನೆ—" ಈ ಮಾತು ಕೇಳಬೇಕಾದರೆ ಅಕ್ಕವ್ವನಿಗೆ ಬ್ರಹ್ಮಾಂಡವೇ ನೆನಪಾಗಿತ್ತು. ಅಂಣಾರಾಯರ ಕಣ್ಣುಗಳೂ ತುಂಬಿ ಹೋಗಿದ್ದುವು. ತುಸು ಹೊತ್ತು ಯಾರೂ ಮಾತಾಡಲಿಲ್ಲ.

"ಶೀನೀಕಾಕಾನೆ ಬ್ಯಾಡಾ ಅಂತಾನ. ಎಲ್ಲಿ ಹೋದರೇನು ! ಅನುಭೋಗಸೋದೇನಾರೆ ಬಿಡಸ್ತೇವೆ—!" "ಶೀನೀಕಾಕಾ" ಅಂದರೆ, ಅಂಣಾರಾಯರಿಗೆ ತಮ್ಮನಂತಿದ್ದ ಡಾಕ್ಟರ ಶ್ರೀನಿವಾಸರಾಯರು, ಅಕ್ಕವ್ವನ "ಶೀನೀಕಾಕಾ."

"ಚುಚ್ಚೋದು ನಡದಿದ್ದೀತು."

"ಅದಂತೂ ವರ್ತನಿಯದು. ಒಂದು ಹೊತ್ತಿನ ಊಟ ಬಿಟ್ಟೇತು. ಅದು ಬೇಕೇಬೇಕು."

ಮನೆಯ ಸಮಾಚಾರವನ್ನು ಕೇಳಿದ್ದಾಯಿತು. ಕೇಳಿದಷ್ಟು ಅಸಮಾಧಾನಕ್ಕೇ ಕಾರಣ. ದುಃಖದಿಂದ ಮನಸ್ಸು ತುಂಬಿ ಅಕ್ಕವ್ವ ಏನೂ ಮಾತಾಡದೆ ಕುಳಿತುಕೊಂಡಳು. ಅಂಗಾಳಿಗೆ ಕಣ್ಣೀರು ಆರುತ್ತಿದ್ದುವು. ಆದರೆ ಕಣ್ಣುಗಳು ಮಾತ್ರ ಹಾಗೇ ಉರಿಯುತ್ತಲಿದ್ದುವು ಅವಳಿಗೆ ನಿದ್ರೆ ಹತ್ತಿರಬಹುದೆಂದು ಅಂಣಾರಾಯರ ಕಲ್ಪನೆಯಾಯಿತು. ಅವರವಳನ್ನೆಬ್ಬಿಸಲಿಲ್ಲ. ಮೋಟರು ಗಾಳಿಗೆ ಎದುರಾಗಿ ನಡೆದಿತ್ತು.

ಸೋಮನಾಥಪುರದ ಅಗಸೆಗೆ ಬಂದಾಗ ಅಂಣಾರಾಯರೇನೊ ಚೇತರಿಸಿಗೊಂಡೆದ್ದಂತೆ ಮಾಡಿದರು. ಅಕ್ಕವ್ವ ಹಾಗೇ ಬಿದ್ದುಕೊಂಡಿದ್ದಳು.

ಊರೊಳಗೆ ಇನ್ನೂ ಯಾರೂ ಎದ್ದಂತೆ ಕಾಣಲಿಲ್ಲ. ಏನೋ ಒಂದೆರಡು ಓಣಿಯಲ್ಲಿ ಒಕ್ಕಲತನದ ಬಂಡಿಗಳು ಹೊರಟಿದ್ದರೆ ಹೊರಟಿರಬೇಕು. ಅಂಣಾರಾಯರ ಬಂಗ್ಲೆ ಊರಹೊರಗೇ ಇತ್ತು.

ಮನೆಗೆ ಮುಟ್ಟಿದಾಗ ೫ ರ ಸುಮಾರಾಗಿರಬಹುದು.

"ಅಕ್ಕವ್ವ, ಏಳಿನ್ನು ಮನಿ ಬಂತು" ಅಂಣಾರಾಯರು ತಾವಿಳಿದ ಕೂಡಲೆ ಅಂದರು. ಅಕ್ಕವ್ವನಿಗೆ ನಿದ್ದೆ ಹತ್ತಿದ್ದೇ ಇಲ್ಲ. ಅವಳು ಏನೂ ಮಾತಾಡದೇ ಕೆಳಗಿಳಿದು ಮನೆಯೊಳಗೇ ಹೋದಳು.

ಅಡಿಗೆಯ ರಂಗವ್ವ ಇನ್ನೂ ಮಲಗಿದ್ದಿಲ್ಲ. ಅಥವಾ ಈಗ ಎದ್ದಿದ್ದರೂ ಎದ್ದಿರಬಹುದು. ಅಕ್ಕವ್ವ ಏನೋ ಕಳಕೊಂಡಂತೆ ಅತ್ತಿತ್ತ ನೋಡಿ ರಂಗವ್ವನಿಗೆ ನಮಸ್ಕಾರ ಮಾಡಿದಳು. ಅವಳು ಬಾಯಿ ತುಂಬ ಆಶೀರ್ವಾದ ಕೊಟ್ಟಳು. ಅಷ್ಟರಲ್ಲಿ ಅಂಣಾರಾಯರೂ ಬಂದರು. ಅವರೆದುರಿಗೆ ರಾತ್ರಿಯ ಸೂಕ್ತವಾಯಿತು. ಬಾಯಿಯವರಿಗೆ ಪುನಃ "ಫಿಟ್" ಬಂದಿತ್ತು, ಡಾಕ್ಟರರು ಬಂದು ಔಷಧ ಚುಚ್ಚಿ ಹೋದರು; ಈಗ ಬಾಯಿಯವರು ಮಲಗಿಕೊಂಡಿರುವರು;- ಇದೇ ಆ ಸೂಕ್ತದ ಇತ್ಯರ್ಥ. ಅಂಣಾರಾಯರಿಗೆ ಇದರಲ್ಲಿ ಯಾವುದೂ ಹೊಸದಿ

ದ್ದಿಲ್ಲ. ಅಕ್ಕವ್ವನಿಗೆ ಮಾತ್ರ ಏನೇನೋ ಕಲ್ಪನೆ ಬರುತ್ತಿತ್ತು. ಆ ದಿನ ಅವಳು ತನ್ನ ಮನೆಯಲ್ಲಿಯೇ ಮಲಗಿಕೊಂಡಿದ್ದರೂ ಯಾವುದೋ ಒಂದು ನಿರ್ಜನ ಅರಣ್ಯದಲ್ಲಿ ಮಲಗಿಕೊಂಡ ಕನಸೇ ಹತ್ತಿದ್ದವು.

---

೩

## ಭೆಟ್ಟಿಯ ಸಂಸ್ಕಾರ

ಎದ್ದು ಪ್ರಾತರ್ವಿಧಿ ಎಲ್ಲ ಮುಗಿಯಬೇಕಾದರೆ ಹೊತ್ತೇ ಏರಿತು. ಅಂಗಾರರಾಯರು ಅಡ್ಡಾಡಲಿಕ್ಕೆ ಹೋಗಿದ್ದರು. ಹಾಸಿಗೆಗೆ ಬೆನ್ನು ಆದರೂ ಹಚ್ಚಿದ್ದರೋ ಇಲ್ಲವೋ. ಅಕ್ಕವ್ವನಿಗೆ ಸಿಟ್ಟು ಬಂತು. ಮನೆಯಲ್ಲಿ ಅವಳ ತಾಯಿ ಇನ್ನೂ ಅತ್ಯವಸ್ಥಳಾಗಿ ಬಿದ್ದಿದ್ದಳು. ಮನೆಗೆ ಬಂದ ಕೂಡಲೇ ತಿಳಿದ ಸಂಗತಿಗಳನ್ನು ನೋಡಿದರೆ ಈಗಲೋ ಇನ್ನೊಂದು ಗಳಿಗೆಯೋ ಇಷ್ಟೇ ಇತ್ತು. ನಿತ್ಯದ ನೇಮ ಈಗ ಬಿಟ್ಟಿದ್ದರೆ ಸಾಗುತ್ತಿತ್ತು. ಹೋದ ಮೋರೆಗಳು ನೋಡಲಿಕ್ಕೆ ಸಹ ಸಿಗುವುದಿಲ್ಲ.

ರಂಗವ್ವನ ಬಾಯಿಂದ ಕೇಳಿದ್ದರ ಮೇಲಿಂದ ಅವಳ ತಾಯಿ ಬೆಳಗಾದರೂ ಕಾಣುವಳೋ ಇಲ್ಲವೋ ಎಂದು ಅಕ್ಕವ್ವನಿಗನಿಸಿತ್ತು. ಮಲಗಿಕೊಂಡಾಗ ಒಂದೆರಡು ಸಾರೆ ಏನೋ ಚೀರಿದ ದನಿಯೂ ಕೇಳ ಬಂದಂತಾಗಿತ್ತು. ಕ್ಷಣಕ್ಷಣಕ್ಕೆ ಇನ್ನೂ ಏನೂ ಆಗಿಲ್ಲ ಎಂದು ಹೇಳಿ ಮನಸ್ಸು ಧೈರ್ಯ ಕೊಡುತ್ತಿತ್ತು. ಎಡಗಂಣೂ ಬಲಗಂಣೂ ಹಾರಿ ಹಾರಿ ಆಶೆ ನಿರಾಶೆಗಳ ಜೋಕಾಲಿಯನ್ನು ಜೀಕುತ್ತಿದ್ದವು. ಅಕ್ಕವ್ವನ ಕಂಣೆದುರಿಗೆ ಕಟ್ಟಿದ ಚಿತ್ರಗಳೆಲ್ಲ ಅವಳ ಎದೆ ನಡುಗಿಸುವಂಥವೇ ಇದ್ದವು. ಒಂದು ಚಿತ್ರದಲ್ಲಿ ಅವಳ ತಾಯಿಯ ಪ್ರೇತವೇ ಕಂಣಿಗೆ ಬಿತ್ತು. ಮನಸ್ಸು ಬೆದರಿತು. ಮತ್ತೊಂದು ಚಿತ್ರವನ್ನು ಹಿಡಿದು ನೋಡಿದಳು. ಇದರಲ್ಲಿ ಅಷ್ಟೇ ಒಂದೆರಡು ಕ್ಷಣ ಹಿಂದಿನ ಸ್ಥಿತಿ. ಬಾಯಿಂದ ಅಸ್ಪಷ್ಟ ದನಿಯಿಂದ ಒಂದೆರಡು ಶಬ್ದಗಳೂ,—ಅಕ್ಕ

ಮ್ಮನ ಹೆಸರೇ ಇದ್ದೀತು,—ಕೇಳ ಬಂದುವು. ಏನು ಮಾಡಿದರೂ ಮನೆಯಲ್ಲಿ ಓಡಾಡಿಕೊಂಡಿದ್ದ ಸುಮೃಷ್ಟ ತಾಯಿಯ ಚಿತ್ರವು ಅವಳ ಕಣ್ಣಿಗೇನು ಬೀಳಲಿಲ್ಲ. ಹಾಗೂ ಹೀಗೂ ಮಾಡಿ ಒಮ್ಮೆ ತಾನೇ ನೋಡಿ ಬರಬೇಕೆಂದು ನಿಶ್ಚಯಿಸಿ ತಾಯಿಯನ್ನು ಮಲಗಿಸಿದ ಕೋಣೆಯ ಬಾಗಿಲಿಗೆ ಹೋಗಿ ನಿಂತಳು. ಒಳಗೆ ನಿಃಶಬ್ದವಿತ್ತು. ನರಳುವುದೇನೂ ಕೇಳಿಬರಲಿಲ್ಲ. ಅಷ್ಟೇ ಸಮಾಧಾನ.

ಧೈರ್ಯಮಾಡಿ ಬಾಗಿಲ ಮುಟ್ಟಿದಳು. ಒಳಗಿನಿಂದ ಹಾಕಿತ್ತು. ಒಂದೆರಡು ಸಾರೆ ಬಡಿದಳು ಬಾಗಿಲು ತೆರೆಯಿತು. ಒಳಗಿನಿಂದ ಸುಮಾರು ೨೩—೨೪ ವಯಸ್ಸಿನ ಹೆಣ್ಣುಮಗಳು ಬಂದಳು. ಅವಳು ಅಕ್ಕಮ್ಮನನ್ನು ಇದೇ ನೋಡುತ್ತಿದ್ದಳು. ಆದರೂ ಮೋರೆಯ ಮೇಲೆ ಆಶ್ಚರ್ಯವನ್ನೇನೂ ತೋರಿಸಲಿಲ್ಲ.

'ಯಾರು ಬಂದಾರs—'' ಒಳಗಿನಿಂದ ಸ್ಪಷ್ಟವಾಗಿ ಕೇಳ ಬಂತು.

''ಅಕ್ಕಮ್ಮನವರು''

''ಇನ್ನೊಂದು ತಾಸಿಗೆ ಬರಲಿಕ್ಕೆ ಹೇಳ್ರಿ.''

ತನ್ನದೇನೂ ತಪ್ಪಿಲ್ಲ. ತಾನು ಕೇವಲ ಪರಿಚಾರಕಳು ಎಂದು ಸೂಚಿಸುವ ದೃಷ್ಟಿಯಿಂದೊಮ್ಮೆ ನೋಡಿ ಆ ಹೆಣ್ಣುಮಗಳು ಬಾಗಿಲು ಮುಚ್ಚಿಕೊಂಡಳು. ಮತ್ತೆ ನಿಃಶಬ್ದ. ಅಕ್ಕಮ್ಮನ ಮನಸ್ಸಿನಲ್ಲಿ ಆಶ್ಚರ್ಯ ಭಯ ಸಿಟ್ಟು ಮುಂತಾದ ಅನೇಕ ವಿಕಾರಗಳ ಗೊಂದಲವೆದ್ದಿತು. ಸಿಟ್ಟಿನ ಭರ ಬಂದ ಕೂಡಲೆ ಅಲ್ಲಿ ನಿಲ್ಲದೆ ತನ್ನ ಕೋಣೆಗೆ ಬಂದು ಬಿಟ್ಟಳು.

ಕೋಣೆಯೊಳಗಿನಿಂದ ಬಂದ ದನಿಯು ತಮ್ಮ ತಾಯಿಯದೇ ಎಂದು ಗುರ್ತಿಸಿದ್ದಳು. ಈ ದನಿಯುಳ್ಳವಳು ಅತ್ಯವಸ್ಥ ಸ್ಥಿತಿಯಲ್ಲಿರಬಹುದೆಂದಾದರೂ ಹೇಗೆ ನಂಬಬೇಕು! ಅಂಣಾರಾಯರು ರಂಗವ್ವ ಇವರಿಬ್ಬರ ಬಾಯಿಂದ ಕೇಳಿದ್ದೆಲ್ಲ ವಿಪರೀತ. ದನಿಯ ಮೇಲೆ ವಿಶ್ವಾಸವಿಟ್ಟರೆ ಚಿಂತೆಗೇನೂ ಕಾರಣವಿಲ್ಲ. ಆದರೂ ಭೆಟ್ಟಿಯಾಗಬೇಕಾದರೆ ಈ ನಾಟಕೀಯ ಬಗೆ ಶಿಸ್ತಿನ ಅರ್ಥವಾಗಲಿಲ್ಲ.

ಒಂಬತ್ತು ಹೊಡೆಯಿತು. ಇನ್ನೂ ಅರ್ಧಗಂಟೆ.

೪

## ಆಗಿ ಹೋದದ್ದು

ಸೋಮನಾಥಪುರವೇನೂ ಇತಿಹಾಸ ಪ್ರಸಿದ್ಧ ಸ್ಥಳವಲ್ಲ. ಇದ್ದರೆ ಭೂಗೋಲದಲ್ಲಿ ಒಂದು ಸಂಣ ಚುಕ್ಕೆ. ಅಂಣಾರಾಯರಾದರೂ ಅಲ್ಲಿಯ ಮೂಲ ನಿವಾಸಿಗಳಲ್ಲ.

ಚಿಕ್ಕ ವಯಸ್ಸಿನಲ್ಲಿ ತಂದೆತಾಯಿಗಳನ್ನಿಬ್ಬರನ್ನೂ ಕಳೆದುಕೊಂಡು ಮುಂದಿನ ಜೀವನಪ್ರವಾಹದಲ್ಲಿ ಆಪ್ತ–ಹೃದಯಗಳ ಆ ಕಲ್ಲಿಗೊಮ್ಮೆ ಈ ಕಲ್ಲಿಗೊಮ್ಮೆ ಕೈಚಾಚುತ್ತ, ತೇಲುತ್ತ ತೇಲುತ್ತ ಕೊನೆಗೊಮ್ಮೆ ಮ್ಯಾಟ್ರಿಕ್ ಪರೀಕ್ಷೆಯ ತೀರಕ್ಕೆ ಬಂದು ಹತ್ತಿದರು. ಬಿಸಿಲಿಗೆ ಮೈಯೊಣಗಿಸಿಕೊಳ್ಳುವವನಿಗೆ ಬದಲ–ಬಟ್ಟೆಯ ಸುಖವೆಲ್ಲಿಯದು. ಕಾಲೇಜದ ವಿಚಾರವಿದ್ದಿದ್ದೇ ಇಲ್ಲ, ನೋಕರಿಗಾಗಿ ಕೋರಾಣ್ಯ ಮಾಡಿದರೂ ಜೋಳಿಗೆಯಲ್ಲೇನೂ ಬೀಳಲಿಲ್ಲ. ಅಗತಿಕನಿಗೆ ಇದಕ್ಕೂ ಹೆಚ್ಚು ಗತಿಗೆಡುವ ಚಿಂತೆಯೇಕೆ!

ಅಂಣಾರಾಯರ ದೂರದ ಆಪ್ತಳೊಬ್ಬಳಿಗೆ,— ಒಂಟಿಗೆ ಮುದಿಕೆ!— ಕನಿಕರ ಹುಟ್ಟಿತ್ತು. ಯಾವ ಸಂಸಾರವೂ ಅವಳನ್ನೆಳೆಯುತ್ತಿದ್ದಿಲ್ಲ. ಇವರನ್ನೇ ತನ್ನ ಮಗನೆಂದು ಭಾವಿಸಿ ತಾನು ಸಂಣಾದಳು. ಬಿಸಿಲುಗುದುರೆಯ ಬೆನ್ನು ಹತ್ತಿದವನಿಗೆ ಗೋಮುಖದಿಂದ ಅಮೃತವನ್ನುಣಿಸಿದಂತಾಯಿತು. ಒಂದು ದಿನ ಮುದಿಕೆಯು ತನ್ನ ಎಲ್ಲ ಸಂಪತ್ತನ್ನು ಅಂಣಾರಾಯರಿಗೇ ಕೊಟ್ಟು ನಡೆದಳು. ಜೀವನದ ಬಗ್ಗೆ ನಿಶ್ಚಿಂತೆಯಾದದ್ದೇನೋ ನಿಜ, ಮುಂದಿನ ಆಯುಷ್ಯವನ್ನು ಹೇಗೆ ಸಾಗಿಸಬೇಕು!

ಕೆಲ ದಿನ ಅವರ ಮನಸ್ಸು ಕಾಲೇಜದಲ್ಲಿಯ ಶಿಕ್ಷಣದ ಕಡೆಗೆ ಹರಿದಾಡಿತು, ಶಾಂತಿ ಸಿಗಲಿಲ್ಲ. ಈ ಸುಮಾರಕ್ಕೆ ಅವರು ಒಬ್ಬ ಸುಸ್ವರೂಪಿಯಾದ ಬಡ ಹುಡಿಗೆಯನ್ನು ಮದುವೆಯಾದರು. ಮಧ್ಯ ವಯಸ್ಸಿನಲ್ಲಿ ಈ ಪ್ರವಾಹವು ಒಂದು ಕೂಡಿ ಅವರ ಜೀವನನದಿಯು ಶಾಂತವಾಗಿಯೂ ಗಂಭೀರವಾಗಿಯೂ ನಡೆದಿತ್ತು.

ಮದುವೆಯಾದಾಗ ರಾಧಾಬಾಯಿರು- ಅಂಗಾರರಾಯರ ಹೆಂಡತಿಯ ಹೆಸರು,- ಕೇವಲ ಹದಿನಾರು ವಯಸ್ಸಿನವರಿರಬಹುದು. ಮುಗ್ಧತ್ವ ಮುಗಿದು ಯೌವನಕ್ಕೆ ಅದೇ ಪ್ರಾರಂಭವಾಗಿರಬಹುದಷ್ಟೇ. ಈ ಹೊಸದಾದ ತಿಳಿಯಾದ ಭಾವಪ್ರವಾಹದಲ್ಲಿ ಮೈಮರೆತು ಬೆರತು ಹೋಗುವುದು ಅಂಗಾರರಾಯರಿಂದಾಗಲಿಲ್ಲ. ಅವರ ವಯಸ್ಸಿಗನುರೂಪವಾದ ಈ ತಟಸ್ಥವೃತ್ತಿಯು ಸ್ವಭಾವದಲ್ಲಿ ತಲೆದೋರಿದರೂ ಬಾಹ್ಯದಲ್ಲಿ ತೋರಗೊಡದೇ ರಾಧಾಬಾಯರ ಜೀವನದಲ್ಲಾಗುವ ಬದಲನ್ನು ನೋಡಿ ಕೌತುಕಮಾಡಿ ತಮ್ಮ ಜೀವನದ ಸ್ವರಮಾಲಿಕೆಯಲ್ಲಿ ಒಂದೊಂದು ಸ್ವರ ಕೂಡಿಸುತ್ತಿದ್ದರು. ಒಂದೆರಡು ವರ್ಷಗಳಲ್ಲಿಯೆ ಶಾಂತಿ ಅಥವಾ ಅಕ್ಕವ್ವ ಹುಟ್ಟಿದಳು.

ಎರಡನೆಯದಾದದ್ದೊಂದು ಹುಡುಗ. ಮರುದಿನವೇ ತನ್ನ ಜೀವನಯಾತ್ರೆಯನ್ನು ಮುಗಿಸಿತು. ರಾಧಾಬಾಯರು ಆಗೇನು ಹಾಸಿಗೆಗೆ ಹತ್ತಿದರು ಅದೇ. ಕೇವಲ ಅಸ್ಥಿಪಂಜರವಾಗಿ ಶರಪಂಜರದ ಮೇಲೆ ಮರಣದ ದಾರಿ ಕಾಯುತ್ತ ಬಿದ್ದು ಇದೀಗ ಎಷ್ಟೋ ವರ್ಷಗಳಾಗಿದ್ದುವು.

ಅಕ್ಕವನಿಗೇನು ! ಪಾಪ ಕೂಸು. ಏನೊ ರಾಧಾಬಾಯರ ಮೈಯಲ್ಲಿ ನೆಟ್ಟಗಿದ್ದು ಹತ್ತಿರ ಕರೆದರೇ ಸರಿ. ಇಲ್ಲವಾದರೆ ಪರದೇಶಿಯಾಗಿ ಯಾರ ಕೈಗೂ ಹತ್ತದೇ ಅತ್ತಿತ್ತ ಉಂಡಾಡಿ ತನ್ನ ಬಾಲ್ಯ ಕಳೆಯಬೇಕಾಯಿತು. ಅವಳಿಗೆ ೧೦-೧೧ ವಯಸ್ಸಾದಾಗ ರಾಧಾಬಾಯರ ಮನಸ್ಸಿನಲ್ಲೇನೋ ಒಂದು ವಿಚಿತ್ರ ಕಲ್ಪನೆ ಬರಹತ್ತಿತು. ತಮ್ಮ ಜಡ್ಡು ಜನ್ಮದ ಗಂಟು. ದಿನವೊಂದಕ್ಕೆ ತಮ್ಮ ಯಾತನೆಯನ್ನು ನೋಡಿ ನೋಡಿ ಅಕ್ಕವ್ವನ ಮನಸ್ಸು ಹುದುಗಿಕೊಂಡು, ಬೆಳಿಗೆ ಕುಗ್ಗೀತು ಇದೇ ಭೀತಿ. ಯಾವುದಾದರೊಂದು ವಸತಿಗೃಹದಲ್ಲಿ ಅವಳನ್ನಿಟ್ಟು ಉಚ್ಚ ಶಿಕ್ಷಣ ಕೊಡಿಸಬೇಕೆಂದವರ ಸೂಚನೆ. ಮೊದಮೊದಲು ಅಂಗಾರರಾಯರು ಈ ಸೂಚನೆಯ ಕಡೆಗೆ ಅಲಕ್ಷ ಮಾಡಿದರು. ಆದರೆ ರಾಧಾಬಾಯರ ಹಟಮಾರಿತನದ ಜಳ ಬಡಿಯಲಿಕ್ಕೆ ಹತ್ತಿದ್ದರಿಂದ ಅವರಿಗೂ ಆ ಮಾತಿಗೊಪ್ಪಬೇಕಾಯಿತು.

ಅಕ್ಕಮ್ಮನನ್ನು ಮೈಸೂರಿಗೆ ಕಳಿಸಿದರು. ಈಗ ೬-೭ ವರ್ಷ ಅಲ್ಲಿಯೇ ಇದ್ದಳು. ದೀಪಾವಳಿಯ ಸೂಟಿಗೆ ಸಹ ಬಂದಿದ್ದಿಲ್ಲ. ಇತ್ತೀಚೆಗೆ ರಾಧಾಬಾಯರಿಗೆ ತಮ್ಮ ಬಗ್ಗೆ ನಿರಾಶೆ ಹುಟ್ಟಿ ಮಗಳನ್ನು ಕಾಣಬೇಕೆಂದಪೇಕ್ಷಿಸಿದರು. ಅಂಗಾರರಾಯರು ತಂತಿಯಿಂದ ತಿಳಿಸಿದರು.

ಇದೀಗ ಅಕ್ಕಮ್ಮ ೬-೭ ವರ್ಷಗಳ ನಂತರ ಮನೆಗೆ ಬಂದದ್ದು.

---

೫

## ಇನ್ನೂ ಕೆಲ ಪರಿಚಯದವರು.

ಮನುಷ್ಯನೊಮ್ಮೆ ವ್ಯಸನಾಧೀನನಾದನೆಂದರೆ ಆತನ ಗುಣಗಳೆಲ್ಲ ಮಣ್ಣು ಪಾಲಾಗುವುವು. ಸುಂಕದ ಕಟ್ಟೆ ಸಾಂಬಪ್ಪನದೆಲ್ಲ ಹೀಗೇ ಆಗಿತ್ತು.

ಒಬ್ಬ ಜಹಾಗಿರದಾರರ ಮನೆಯಲ್ಲಿ ಆಶ್ರಿತನಾಗಿದ್ದ. ಸಾಂಬನ ಹೊರ್ತು ಜಹಾಗಿರದಾರರ ಗಾಡಿಯೇ ಸಾಗುತ್ತಿದ್ದಿಲ್ಲ. ಬೆಳಗಿನಿಂದ ಮಧ್ಯರಾತ್ರಿಯ ವರೆಗೆ ನಡೆಯುತ್ತಿರುವ ಪ್ರತಿಯೊಂದು ತಂತ್ರದ ಕೀಲ ಸಾಂಬನ ಕೈಯಲ್ಲಿ. ಮನೆಯಲ್ಲಿ ಚಹಾಪಾರ್ಟಿ ಆದರೆ ಸಾಂಬ. ತದಿತರ ಪಾರ್ಟಿ ಆದರೂ ಸಾಂಬನೇ.. ರಾಯರಿಗೆ ತಂಬಾಕ ಬೇಕಾದರೆ ಸಾಂಬ. ಏನೋ ಒಂದೊಂದು ರಾತ್ರಿ ನರ್ಮವಿನೋದಕ್ಕಾಗಿ "ಪ್ರಿಯಜನ"ರನ್ನು ಮನೆಗೆ ಕರೆತರುವುದಿದ್ದರೆ ಸಾಂಬನೇ ಬೇಕಾಗುತ್ತಿತ್ತು. ಏವಂಗುಣವಿಶಿಷ್ಟ ಸಾಂಬ ಜಹಾಗಿರದಾರರ ಬಲಗೈ ಆಗಿದ್ದ.

ಜಹಾಗಿರದಾರರು ಶ್ರೀ ಶಕ್ತಿದೇವಿಯ ಮಹೋಪಾಸಕರು. ಒಮ್ಮೊಮ್ಮೆ ಅವರು ತಮ್ಮ ಬಲಗೈ ಮೇಲೆ ವಿಶೇಷ ಪ್ರಸನ್ನರಾಗಿ ಅದಕ್ಕೂ ದೇವಿಯ ಪ್ರಸಾದವನ್ನು ಹಂಚುತ್ತಿದ್ದರು. ಬರಬರುತ್ತ ಸಾಂಬನೂ ಆದಿಪೂಜೆಯ ನಿಷ್ಠಾವಂತ ಭಕ್ತನಾದ. ಆದರೂ ಹುಡುಗನ ಬುದ್ಧಿ ಬಲು ಚುರುಕು. ಈ ನಿರಂಕುಶ ದಿನಚರಿಯಲ್ಲಿ ಸಹ

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಯಶಸ್ವಿಯಾದ. ಜಹಾಗೀರದಾರರು ಆತನ ಮದುವೆಮಾಡಿದರು. ತಾವೇ ಬಾಯಿಹಾಕಿ ಪೋಸ್ಟಿನಲ್ಲೊಂದು ನೌಕರಿ ಕೊಡಿಸಿದರು. ತುಸು ದಿನದಲ್ಲಿಯೇ ಅವರ ಕಾಲವಾಯಿತು.

ಜಹಾಗೀರದಾರರಿರುವವರೆಗೆ ಸಾಂಬಪ್ಪನಿಗೆ ಯಾತಕ್ಕೂ ಕಡಿಮೆಯಿದ್ದಿಲ್ಲ. ಬಾಟಲಿಯ ಖರ್ಚು ಪರಸ್ಪರ ನಡೆಯುತ್ತಿತ್ತು. ಈ ಮುಂದೆ ಆ ಬಿಳಿ ಆನೆಯನ್ನು ಕಟ್ಟಿ ಸಂಸಾರ ಸಾಗಿಸುವುದು ಹೇಗೆ! ಕೈಲಾಸನಾಥನೇ ಗತಿ. ಸಾಂಬನ ಹೆಂಡತಿ ಪಾರವ್ವ ಇದ್ದೊಬ್ಬ ಮಗಳನ್ನು ಬಿಟ್ಟುಕೊಟ್ಟು ಸಂಸಾರಪಾಶದಿಂದ ಮುಕ್ತಳಾದಳು. ಆಯಿತು. ನಿಃಸಂಗವೃತ್ತಿಯ ಸಿದ್ದನಿಗೆ ಹಾಸಿಗೆಯನ್ನೇ ಹಾಸಿಕೊಟ್ಟಂತಾಯಿತು.

ಪದ್ದಕ್ಕ ಬಲು ಜಾಣೆ. ತಂದೆಗೆ ಎರಡೂ ಹೊತ್ತೂ ಅನ್ನ ತೋರಿಸುವವಳು ಅವಳೇ. ಮನೆಯಲ್ಲಿ ಅಕ್ಕಿ ಇದ್ದರೆ ಬೇಳೆ ಇಲ್ಲ. ಬಾಟಲಕ್ಕನ ಜೀಗತನಕ್ಕೆ ಮಾತ್ರ ಎಂದೂ ಕಡಿಮೆಯಿರಲಿಲ್ಲ. ಎಷ್ಟೋ ಸಾರೆ ಪದ್ದಕ್ಕನೇ ಪಾರಶಿಯ ಅಂಗಡಿಗೆ ಹೋಗಿ ಅಪ್ಪನ "ಕೆಮ್ಮಿನ ಔಷಧ" ತೆಗೆದುಕೊಂಡು ಬಂದಿದ್ದಳು.

ಹುಡಿಗೆ ಕಾಲುಪ್ಪದ. ದೊಡ್ಡವಳಾಗಲಿಕ್ಕೆಷ್ಟು ತಡ. ಸಾಂಬಪ್ಪನಿಗೊಂದು ಚಿಂತೆ ಪ್ರಾರಂಭಿಸಿತು. ಕುಡುಕನ ಮಗಳನ್ನು ಮದುವೆಯಾಗುವವರಾದರೂ ಯಾರು! ಹೆಂಡದಾಶೆಗೆ ಯಾವುದಾದರೊಂದು ಹೆಣದ ಪಾಲು ಮಾಡಿದರೇ! ತಾನು ಕುಡುಕ. ಪ್ರತಿ ರಾತ್ರಿಯೂ ಕೇವಲ ಪಶು. ಪದ್ದಕ್ಕನ ಶೀಲಕ್ಕೆ ಬಾಧೆ ಬಂದರೆ!– ಸಾಂಬಪ್ಪನಿಗೆ ಮೀರಿದ ವಿಚಾರ. ಯಾರಿಲ್ಲದವರೂ ದೇವರೇ ಮೊಕ್ಕು ಈ ಚಿಂತೆಯಿಂದ ಪಾರುಮಾಡಬೇಕು. ಆದದ್ದೂ ಹಾಗೇ. ಯಾವನೋ ಒಬ್ಬ ತರುಣ ಎಲ್ಲಿಂದಲೋ ಬಂದು ಪದ್ದಕ್ಕನನ್ನು ನೋಡಿದ, ಮದುವೆಯಾದ, ತನ್ನ ಹೆಂಡತಿಯನ್ನು ಕರಕೊಂಡು ನಡೆಯುತ್ತಿದ್ದ.

ಸಾಂಬಪ್ಪನ ಮನೆ ಬರಿದಾಗಿ ಭಣಭಣ ಕಾಣಹತ್ತಿತು. ಅವಳ ನೆನಪು ಹಾರುವಂತೆ ಈಗ ಮೂಲೆ ಮೂಲೆಗೆ ಬಾಟಲಗಳೇ ಕಾಣಹತ್ತಿದುವು.

ಆಫೀಸಿನಲ್ಲಿ ಎಲ್ಲರಿಗೂ ಸಾಂಬಪ್ಪನ ಐಬು ಗೊತ್ತಾಗಿತ್ತು. ಕೆಲಸಕ್ಕೆ ಅಡ್ಡ ಬಾರದಿದ್ದರೆ ಯಾರು ಯಾಕೆ ಮಾತಾಡುತ್ತಾರೆ. ಇತ್ತೀಚೆಗೆ ಸಾಂಬಪ್ಪನು ಪಾರಮ್ಮನ ನೆನಪು ತೆಗೆದು ಕಣ್ಣೀರು ಸುರಿಸುತ್ತ ತಾಸುತಾಸು ಕುಳಿತದ್ದನ್ನು ಅವರು ನೋಡಹತ್ತಿದರು. ವಿರಹವೆಂಬುದು ಕೆಟ್ಟದ್ದು. ಆದರೂ ಆಫೀಸಿನ ಕೆಲಸ ಸಾಗಿಸಲೇ ಬೇಕು. ಒಂದು ದಿನ ಸಾಹೇಬರು ಸಾಂಬಪ್ಪನಿಗೆ ಏನೋ ಕೆಲಸ ತಿಳಿಸಿ ಹೇಳತೊಡಗಿದ್ದರು. ಈ ದಿನ ಯಾಕೋ ಏನೋ ಸಾಂಬಪ್ಪನಿಗೆ ಸಾಹೇಬರ ಮಾತೇ ತಿಳಿಯದಾಯಿತು. ತಮಗೆ ತಿಳಿಯದಿದ್ದರೆ– ಅಷ್ಟರಲ್ಲಿ ಸಾಂಬಪ್ಪನ ತಲೆಯಲ್ಲೊಂದು ವಿಚಾರ ಮಿಂಚಿನಂತೆ ಹೊಳೆಯಿತು. ಸಾಹೇಬರ ಕಿವಿಗೆ ಹತ್ತಿ ಮುಗುಳ್ನಗೆ ನಗುತ್ತ “ಇಲ್ಲೇ ತಗೊಂಬವರೋಽ– ಮನಿಗೆ ಒಯ್ಯಾಲಿಕ್ಕೆ ಬೇಕೋ!” ಎಂದು ಕೇಳಿಬಿಟ್ಟ. ಸಾಹೇಬರು ಬೆರಗಾಗಿ ನೋಡಹತ್ತಿದರು. ಸ್ವಲ್ಪ ವಿಚಾರ ಮಾಡಿದ ಕೂಡಲೆ ಅವರಿಗೂ ಮಾತಿನ ಅರ್ಥವು ಹೊಳೆಯಿತು. ಇದೆಲ್ಲದರ ಪರಿಣಾಮ ಇಷ್ಟೇ ಆಯಿತು. ಅದೇ ದಿನ ಆತನ “ಸರ್ವಿಸಿ”ನ ಮೂವತ್ತು ವರ್ಷಗಳು ಮುಗಿದು “ಸನ್ಮಾನ್ಯ” ಪೆನ್‌ಶನದಾರನಾದ.

ಇತ್ತ ಪದ್ದಕ್ಕನ ದೈವವಾದರೂ ಹೇಳಿ ಮಾಡಿಸಿದ್ದು. ಆಕೆಯ ಗಂಡ-ಗಂಟುಬೇನೆಯಿಂದ ಒದ್ದು ಒದ್ದು ಆಕೆಯ ಹಣೆಯ ಮೇಲಿನ ಕುಂಕುಮದ ಬೊಟ್ಟಿನಷ್ಟು ಸಹ ಆಸ್ತಿಯಿಡದೆ ಹೊರಟು ಹೋದ. ಪದ್ದಕ್ಕನಿಗೆ ತಿರುಗುಪ್ಪಾಯಿತು. ಬಂದ ದಾರಿಗಿಲ್ಲದಿದ್ದರೂ ಹೋದ ದಾರಿಗೆ ಸುಂಕವಿದ್ದೀತು.

ಆ ಮೇಲೆ ಸಾಂಬಪ್ಪನ ಮನೆಯಲ್ಲಿ ಪುನಃ ಮೊದಲಿನ ಶಿಸ್ತು ನಡೆಯಿತು. ಪೆನ್‌ಶನ ಬರುವುದು ಹತ್ತು ರೂಪಾಯಿ. ಏನೊ ಒಂದೆರಡು ಮನೆಗಳಲ್ಲಿ ಹುಡುಗರಿಗೆ ಓದು ಹೇಳಿ ಆರೇಳು ರೂಪಾಯಿ ತೆಗೆಯುತ್ತಿದ್ದ ಅಷ್ಟೇ. ಪದ್ದಕ್ಕನಿಗೂ ತುಸು ಹೊಲಿಯುವ ಕೆಲಸ ಬರುತ್ತಿತ್ತು. ಅಂತೂ ಸಾಗುತ್ತಿತ್ತು. ಸರಿ.

ಜನರದೊಂದು ಕಾಟ. ಪದ್ದಕ್ಕ ಜಾತ್ಯಾ ಕುರೂಪಿಯಲ್ಲ.

ಅವಳ ಕಡೆಗೆ ದಿನಾ ಪತ್ರಗಳ ಹೊತ್ತಿಗೆಯೆ ಬರಹತ್ತಿತು. ಎಲ್ಲರದೂ ಒಂದೇ ಅರ್ಥ; ಒಂದೇ ವಾಕ್ಯ. ಬೇಕಾದದ್ದು ಅವಳ ದೇಹ. ಯಾಚನೆಯ ಪರ್ಯಾಯವೆ ಶಬ್ದಗಳಷ್ಟು ಬೇರೆ. ಒಬ್ಬ ತನ್ನ ಮಗಳಿಗೆ ಓದು ಹೊಲಿಗೆ ಹೇಳಲಿಕ್ಕೆ ಕರೆಯುತ್ತಿದ್ದ. ಮತ್ತೊಬ್ಬ ವಿಧುರ ತನ್ನ ಪರದೇಶಿಯಾದ ಮಕ್ಕಳ ದುಃಸ್ಥಿತಿಯ ವರ್ಣನೆ ಮಾಡಿ ಕನಿಕರ ಹುಟ್ಟುವಂತೆ ಅಂಗಲಾಚಿ ಬೇಡಿಕೊಳ್ಳುತ್ತಿದ್ದ. ಇನ್ನೊಬ್ಬ ಕವಿ. ಪ್ರೇಮದ ಮಾಹಾತ್ಮ್ಯವನ್ನು ಹಾಡಿ ತನ್ನ ಕೂಡ ದನಿಗೂಡಿಸ ಹೇಳುತ್ತಿದ್ದ. ಪದ್ಮಕ್ಕನಿಗೆ ಬೇಜಾರಾಯಿತು. ಊರು ಬಿಟ್ಟರೆ ಸಾಕು ಎಂದೆನಿಸಿತು. ಸುಸಂಧಿ ಬಂತು.

ಸೋಮನಾಥಪುರದಿಂದ ೫-೬ ಮೈಲು ದೂರ "ಮಾವಿನ ತೋಪು" ಎಂದು ಪ್ರಸಿದ್ಧವಿದ್ದದ್ದೊಂದು ತೋಟವಿತ್ತು. ಅಲ್ಲಿಯ ಬಾಯರು ಇದೀಗ ಎಷ್ಟೋ ವರ್ಷ ಪುಣೆಯಲ್ಲಿಯೇ ಇರುತ್ತಿದ್ದರು ಈಗವರ ಮನಸ್ಸಿನಲ್ಲಿ ತೋಪಿನಲ್ಲಿ ಬಂದು ಇರಬೇಕೆಂದು ಬಂದಿತ್ತು. ಅವರಿಗೊಬ್ಬ ಗೆಳತಿ – ಸಹಚರಿಯು ಬೇಕಾಗಿದ್ದಳು. ಆದಕ್ಕಾಗಿ ಅವರು ವೃತ್ತಪತ್ರಿಕೆಗಳಲ್ಲಿ ಜಾಹಿರಾತ ಕೊಟ್ಟಿದ್ದರು. ಪದ್ಮಕ್ಕ ಅವರಿಗೆ ಪತ್ರ ಬರೆದಳು. ಅವರಿಂದ ಅನುಕೂಲ ಉತ್ತರವೂ ಬಂತು. ಸೋಮನಾಥ ಪುರದಲ್ಲಿ ಅವರ ಕಾರಕೂನರಿದ್ದರು. ಅವರಿಗೇ ಭೆಟ್ಟಿಯಾಗಲಿಕ್ಕೆ ಹೇಳಿದ್ದರು.

ಪದ್ಮಕ್ಕ ಸೋಮನಾಥಪುರಕ್ಕೆ ಹೋದಾಗ ತನ್ನ ದುರ್ದೈವವನ್ನೂ ಕಟ್ಟಿಕೊಂಡು ಹೋಗಿದ್ದಳೋ ಏನೋ. ಬಾಯರು ತೋಪಿಗೆ ಬಂದು ಇರುವ ವಿಚಾರ ಮುಂದೆ ಬಿತ್ತೆಂದು ಕಾರಕೂನರು ಹೇಳಿದರು. ಪದ್ಮಕ್ಕ ನಿರಾಶಳಾಗದೇ ಅಂಣಾರಾಯರಿಗೆ ಭೆಟ್ಟಿಯಾದಳು. ಅವರಿಗೂ ರಾಧಾಬಾಯರ ಶುಶ್ರೂಷೆಗಾಗಿ ಒಬ್ಬ ಹೆಂಣುಮಗಳು ಬೇಕಾಗಿಯೇ ಇದ್ದಳು. ಸಂಬಳ ಗೊತ್ತಾಯಿತು. ಬಂಗಲಿಯಲ್ಲಿಯೇ ಇರಲಿಕ್ಕೆ ಅಂಣಾರಾಯರು ಹೇಳಿದರು. ಪದ್ಮಕ್ಕ ಬೇರೆ ಮನೆಯನ್ನೇ ಮಾಡಿದಳು. ಸಾಂಬಪ್ಪನ ಗುಟ್ಟು ತಿಳಿದೀತು; ಇದೇ ಭೀತಿ – ಸಾಂಬ

ಪ್ಪನಿಗೆ ಅಡಿಗೆ ಮಾಡಿಹಾಕಿ ಬೆಳಿಗ್ಗೆ ಸಂಜೆಗೆ ಕೆಲಸಕ್ಕೆ ಹೋಗುತ್ತಿದ್ದಳು.

ಒಂದು ದಿನ ಸಾಂಬಪ್ಪ ಮಾತಾಡುತ್ತ ಕುಳಿತುಕೊಂಡಾಗ ಒಮ್ಮೆಲೇ ಸ್ಮೃತಿ ತಪ್ಪಿ ನೆಲಕ್ಕುರುಳಿದ. ಪದ್ದಕ್ಕ ಚೀರಿದಳು. ನೆರೆ ಹೊರೆಯವರು ಡಾಕ್ಟರರನ್ನು ಕರೆತಂದರು. ಡಾಕ್ಟರ ಭುಜಂಗರಾಯರು ಹೊಸಬರೇ ಇದ್ದರು.

ಎಷ್ಟೋ ಹೊತ್ತಿನ ನಂತರ ಮೈಮೇಲೆ ಸ್ಮೃತಿ ಬಂದು ಸಾಂಬಪ್ಪ ಕಣ್ಣು ತೆರೆದ. ಬಾಯಿ ಹೋಗಿತ್ತು. ಪದ್ದಕ್ಕ ಹತ್ತಿರ ಹೋಗಿ, "ಇವರು ಡಾಕ್ಟರ ಬಂದಾರs – ಅಪ್ಪಾ, – ಈಗ ಹ್ಯಾಂಗ ಅನಸ್ತsದs – !" ಸಾಂಬಪ್ಪನಿಗೆ ತಿಳಿಯಿತೋ ಇಲ್ಲೋ. ಕಣ್ಣು ಮುಚ್ಚಿ ಮಲಗಿಕೊಂಡಿದ್ದ. ಅರ್ಧಾಂಗವಾಯುವಿನ Stroke ಎಂದು ಡಾಕ್ಟರರ ಮತ. ಗಂಟಲದಿಂದ ಔಷಧ ಹಾಲೂ ಇವು ಯಾವೂ ಇಳಿಯಲಿಲ್ಲ. ಡಾಕ್ಟರರು ಏನೋ ಒಂದು ಔಷಧ ಮೈಯಲ್ಲಿ ಚುಚ್ಚಿ ಹೋದರು. ಮರುದಿನ ಅದೇ ಅನುಭವ. ಮೂರನೆಯ ದಿನ ಡಾಕ್ಟರರ ಮನಸ್ಸಿನಲ್ಲಿ ಒಂದು ವಿಚಿತ್ರ ಕಲ್ಪನೆ ಹುಟ್ಟಿತು. ಅವರು ಪದ್ದಕ್ಕನ ಕಡೆಗೆ ಒಂದು ವಿಚಿತ್ರ ನೋಟದಿಂದ ನೋಡಿದರು. ತಮ್ಮ ತಂದೆಯ ವ್ಯಸನದ ಸುದ್ದಿ ಇನ್ನು ಮುಚ್ಚುವುದು ಶಕ್ಯವಿಲ್ಲೆಂದು ತಿಳಿಯಿತು.

"ಆಗತsದೇನು ಅದರಿಂದೇನಾರs ಉಪಾಯs !"

"ಇನ್ನ ಮ್ಯಾಲ ಅದs ಒಂದುಪಾಯ. ದಿನದ ಚಟ ಇದ್ದರs ಗಂಟಲದಾಗ ಇಳಿಸಲಿಕ್ಕೇ ಬೇಕು. ಈಗೆಲ್ಲಿ ಸಿಗಬೇಕು !" ಪದ್ದಕ್ಕ ಒಳಗಿನಿಂದ ಬ್ರಾಂಡಿ ಬಾಟಲಿ ತಂದೇ ಬಿಟ್ಟಳು. ಈ ಹೆಣ್ಣುಮಗಳ ಧೈರ್ಯ ನೋಡಿ ಡಾಕ್ಟರರು ಚಕಿತರಾದರು.

ಗ್ಲಾಸಿನಲ್ಲಿ ಒಂದು ಪೂರಾ ಡೋಜು ಸುರವಿ ಸಾಂಬಪ್ಪನ ಬಾಯಿಗೆ ಹಿಡಿದರು. ಅವರ ಕಲ್ಪನೆಯಂತೆ ಆ ಇಡೀ ಡೋಜು ಗಂಟ

ಬಿಳಿಚಿಕೊಳ್ಳಿಯಿತು. ಡಾಕ್ಟರರ ಮೋರೆಯ ಮೇಲೆ ನಗೆ ಮಿಂಚಿತು, ಮಿಂಚಿತು, ಅಲ್ಲಿಯೇ ಅಡಗಿತು. ಮತ್ತೊಂದು ಕ್ಷಣಕ್ಕೆ ಆ ದೇಹದಲ್ಲಿ ಸಾಂಬಪ್ಪಸಿದ್ದಿಲ್ಲ. "ಅಯ್ಯೋ – ಇದೇನು ಮಾಡಿದೆ" ಎಂದು ಡಾಕ್ಟರರು ಅಸ್ಪಷ್ಟವಾಗಿ ನುಡಿದರು.

ಪದ್ಮಕ್ಕನ ಶೋಕ ಮಿತಿಮೀರಿದ್ದಾಯಿತು. ಅವರೂ ಇವರೂ ಕೂಡಿ ಅಂತ್ಯವಿಧಿಯನ್ನು ತೀರಿಸಿದರು. ಔರ್ಧ್ವದೇಹಿಕವೆಲ್ಲ ಮುಗಿದ ನಂತರ ಅವಳು ಮನೆಯನ್ನೇ ಮುರಿದು ಬಂಗ್ಲೆಯಲ್ಲಿ ಇರಹತ್ತಿದಳು.

---

## ೬

## ತಾಯಿ ಮಗಳ ಭೆಟ್ಟಿ

ಹೊತ್ತಾದ ಕೂಡಲೆ ಅಕ್ಕವ್ವ ರಾಧಾಬಾಯರ ಕೋಣೆಯ ಬಾಗಿಲಿಗೆ ನಿಂತಳು. ತೆರದೇ ಇತ್ತು. ಒಳಗೆ ಹೋದ ಕೂಡಲೆ, " "ಯಾರು! ಅಕ್ಕಾ, ಏನು. ಬಾ. ನಿನ್ನ ಹಾದಿಯನ್ನ ನೋಡತಿದ್ದೆ." ರಾಧಾಬಾಯರು ಅಕ್ಕರೆಯಿಂದ ಅಂದರು.

ಕೋಣೆಯಲ್ಲಿ ಅಲ್ಲಿಗೆ ಇಲ್ಲಿಗೆ ಸ್ವಚ್ಛತೆಯಿತ್ತು. ಒಂದು ಹಿತ್ತಾಳಿಯ ಪಲ್ಲಂಗಿನ ಮೇಲೆ ಬೆಳ್ಳಗಿನ ಮಗ್ಗಲ ಹಾಸಿಗೆ ಹಾಸಿ ಅದರ ಮೇಲೆ ರಾಧಾಬಾಯರನ್ನು ಮಲಗಿಸಿದ್ದರು. ಮೈಮೇಲೊಂದು ಜರತಾರಿ ಶಾಲು ಕುತ್ತಿಗೆಯ ವರೆಗೆ ಹೊದಿಸಿತ್ತು. ಮೋರೆಯಷ್ಟೇ ಹೊರಗೆ ಕಾಣುತ್ತಿತ್ತು. ಮೋರೆಯ ಮೇಲೆ ಒಡ್ಡಿನ ಚಿನ್ಹವೇನೂ ಕಾಣುತ್ತಿದ್ದಿಲ್ಲ. ಸೌಂದರ್ಯದ ಮೇಲಾಟದಲ್ಲಿ ರಾಧಾಬಾಯರಿಗೆ ಇನ್ನೂ ಸ್ಥಾನ ಸಿಗಬಹುದಾಗಿತ್ತು.

ಅಕ್ಕವ್ವ ಹತ್ತಿರ ಬಂದು ನಿಂತದ್ದನ್ನು ಕಂಡು ರಾಧಾಬಾಯರು ಮೊದಲು ಅವಳನ್ನೊಮ್ಮೆ ತಿಂದುಬಿಡುವಂತೆ ನೋಡಿದರು. ನಂತರ ನಾಚಿಕೆ ಎನಿಸಿ ಮುಗುಳ್ನಗೆ ನಕ್ಕು " ಆ ಖುರ್ಚಿಯೆಳಕೋ ಅಲ್ಲ. ಪದ್ಮಕ್ಕಾ, ನೀವು ಹೋಗರಿನ್ನ ಮೈ ತೊಳಕೊಳ್ಳಲಿಕ್ಕೆ – ಇರತಾಳ

ಅನಕs ಅಕ್ಕು s '' ಪದ್ದಕ್ಕ ಹೋದಳು. ಕ್ಷಣ ಹೊತ್ತು ಪದ್ದಕ್ಕನ ಕೆಲಸ ತನಗೆ ಸಿಕ್ಕಿತೆಂಬ ಹಿಗ್ಗು ಅಕ್ಕವ್ವನಿಗೆ.

'' ಗಾಡಿ ತಡs ಮಾಡಿ ಬಂತಂತs ಕೃಷ್ಣಾ ಅಂತಿದ್ದಂತs, ಪದ್ದಕ್ಕ ಹೇಳಿದಳೀಗs '' ರಾಧಾಬಾಯರು ಪ್ರಾರಂಭ ಮಾಡಿದರು. ಬಲು ದಿನ ಮಾತು ಬಿಟ್ಟು ಒಂದು ದಿನ ಒಬ್ಬರನ್ನೊಬ್ಬರು ಮಾತಾಡಿಸಬೇಕೆಂದು ಬಂದಾಗ ಆ ಇಬ್ಬರ ಸ್ಥಿತಿಯಿದ್ದಂತೆ ಈಗ ಇವರಿಬ್ಬರ ಸ್ಥಿತಿಯಾಗಿತ್ತು. ಮಾತಾಡಲಿಕ್ಕೆ ವಿಷಯದ ಕೊರತೆ. ರಾಧಾಬಾಯರು ಮಾತಾಡಿದ್ದಕ್ಕೆ ಉತ್ತರದ ಅವಶ್ಯಕತೆ ಇದ್ದಿಲ್ಲ. ಅಕ್ಕವ್ವ ಸುಮ್ಮನೇ ಇದ್ದಳು. ರಾಧಾಬಾಯರೇ ಮತ್ತೆ ಮಾತಿಗೆ ಪ್ರಾರಂಭ ಮಾಡಿದರು.

'' ಎಷ್ಟು ದೊಡ್ಡಾಕೆ ಕಾಣಸ್ತೀಯs, ನೀ ಕಳಿಸಿದ ಫೋಟೊ ನೋಡದಿದ್ದರs ಗುರ್ತ ಹತ್ತತಿದ್ದಿಲ್ಲ ಬಿಡು. '' ಮುಂದಿನ ಕ್ಷಣವೇ ತಾವು ಈ ಮಾತು ಆಡಬಾರದಾಗಿತ್ತೆಂದು ರಾಧಾಬಾಯರ ಲಕ್ಷ್ಯದಲ್ಲಿ ಬಂತು. ಇದ್ದೊಬ್ಬ ಮಗಳನ್ನು ಚಿಕ್ಕವಳಿದ್ದಾಗ ದೂರ ಕಳಿಸಿ ದೊಡ್ಡವಳಾಗುವವರೆಗೆ ದೂರಿಟ್ಟು, ಈಗ ನೋಡಿದಾಗ ದೊಡ್ಡವಳಾದದ್ದಕ್ಕೆ ಆಶ್ಚರ್ಯ ಪಡುವುದು. ಬೆಳಗೆಯ ಹುಡಿಗೆ ಬೆಳೆಯುವುದನ್ನು ನೋಡಿ ಅಕ್ಕರೆ ಪಡುವವರು ಯಾರೂ ಇರಬಾರದೇ. ಮತ್ತೆ ತುಸು ಹೊತ್ತು ಸ್ತಬ್ಧತೆಯೇ ಸಾಗಿತು.

'' ಬಾಳಾs ಆ ಗುಳಿಗಿs ಡಬ್ಬಿ ತಗೋತಿs ಅಲ್ಲೆ ಕಪಾಟಿನ ಮ್ಯಾಲs ಅದs '' ರಾಧಾಬಾಯರದಿದು ಮೂರನೆಯ ಪ್ರಯತ್ನ. ಅಕ್ಕವ್ವ ಚಟ್ಟನೇ ಎದ್ದು ಅವರು ಹೇಳಿದ ಗುಳಿಗೆಯ ಡಬ್ಬಿಯನ್ನು ತಂದಳು. '' ಹೂಂs – ಒಂದs ತಗಿ. ಬಾಯಾಗಿಡು ಒಂದ ನಾಕ್ಕಾಕ್ನೀರ ಹಾಕುs ತೀರಿತು. '' ರಾಧಾಬಾಯರು ನೀರು ಕುಡಿಯುವಾಗ ತುಸು ಎದ್ದು ಕುಳಿತರು. ಆಗ ಅವರ ಕೈಗಳು ಹೊರಬಿದ್ದುವು. ನೋಡಿ ಅಕ್ಕವ್ವನ ಎದೆ ಒಡೆದು ನೀರಾಯಿತು. '' ಅವ್ವs – '' ಎಂದು

ಕೂಗಿ ಆ ಎರಡೂ ಕೈಗಳನ್ನು ಹಿಡಿದು ತನ್ನ ಗಲ್ಲಕ್ಕೆ ಹಚ್ಚಿಕೊಂಡು ಅಳಹತ್ತಿದಳು.

"ಹೂಂಽ – ಅಕ್ಕು, ಅಕ್ಕೂ, ಸುಮ್ಮನಾಗು – ದಿನದ ಸಾವು. ಎಷ್ಟಂತಽ ಅಳತೀ – ಹೋದ ಜನ್ಮದಾಗಽ ಮಾಡಿದ್ದ ಪಾಪಽ ಈಗ ನಭೋಗಸ್ತೇನಿ. ಒಂದಽ ಜನ್ಮದಾಗ ತೀರಿ ಹೋಗಲಿ ಎಲ್ಲಽ –" ರಾಧಾಬಾಯರು ಅಕ್ಕವ್ವನ ಸಮಾಧಾನ ಮಾಡುತ್ತ ಅಂದರು.

"ಅವ್ವಽ ನಾ ಬರಲೇನಽ ಈ ಪದ್ದಕ್ಕನ ಜೋಡಿಗೆ ನಿನ್ನ ಹತ್ತರ ಕೂಡಲಿಕ್ಕೆಽ!" ಅಕ್ಕವ್ವ ಕೇಳಿದಳು.

"ನೀ ಯಾಕೆ ಮತ್ತಽ. ಪದ್ದಕ್ಕಿದ್ದಾಳಽ ಸಾಕು. ಪ್ರಾಣಿ ಗುಣವಂತಿ. ನಾ ಇಷ್ಟ ಹರಿಹಾಯ್ತೇನಿ ಆಕಿಽ ಮ್ಯಾಲಽ – ಪಿಟ್ ಅಂತ ಮಾತಾಡೊದಿಲ್ಲ. ಇನ್ನಽ ನಿನ್ನದೂ ಉಪಯೋಗ ಆಗಲಿಕ್ಕಿಲ್ಲಽ ಅಂತ ತಿಳೀಬ್ಯಾಡಽ. ಅವರಿಲ್ಲದಾಗಽ ನೀ ಇದ್ದೀ ಅಲ್ಲ ಮತ್ತಽ –" "ರಾಧಾಬಾಯರು ನಕ್ಕರು. ಅಕ್ಕವ್ವನಿಗೆ ಹಿಡಿ ಮಾಂಸ ಬಂದಂತಾಯಿತು.

ಪದ್ದಕ್ಕ ಮೈತೊಳಕೊಂಡು ಬಂದಳು. ಅಕ್ಕವ್ವನೂ ತುಸು ಹೊತ್ತಿನ ಮೇಲೆ ಎದ್ದಳು. ಆ ಮುಂದೆ ಇದೇ ಪ್ರಕಾರ ಮುಂಜಾನೆ ೧೦ ರ ಸುಮಾರಕ್ಕೆ ಅವಳಿಗೆ ರಾಧಾಬಾಯರ ಭೆಟ್ಟಿಯಾಗುತ್ತಿತ್ತು. ವೇಳೆ ತಪ್ಪಿತೆಂದರೆ ಭೆಟ್ಟಿ ಮರುದಿಸಕ್ಕೇ ಬೀಳುತ್ತಿತ್ತು.

## ೭

## ವೆಂಕಯ್ಯನ ಅಂಗಡಿ

ಊರೊಳಗಿನ್ನೂ ಯಾರೂ ಎದ್ದಿದ್ದಿಲ್ಲ. ಗುರುಭಟ್ಟ ಆಗಲೇ ವೆಂಕಯ್ಯನ ಅಂಗಡಿಯ ಬಾಗಿಲ ತಟ್ಟಿದ. "ವೆಂಕಪ್ಪಾಽ ವೆಂಕುಽ" ಒಳಗಿನಿಂದ ಯಾರೂ 'ಓ' ಕೊಡಲಿಲ್ಲ. ವೆಂಕೂಽಽ— ಬಾಗಿಲ ತಗಿ ಬಾಳಾಽ." 'ಹಾಂ' ಇಲ್ಲ, 'ಹೂಂ' ಇಲ್ಲ.

"ವೆಂಕಟರಮಣಾಽ — ವೆಂಕಣಮುರಿಽ — " ಗುರುಭಟ್ಟರ ಸಹಸ್ರನಾಮ ನಡೆದೇ ಇತ್ತು. ಕೊನೆಗೊಮ್ಮೆ "ಯಾರವರು!" ಎಂದು ಒಳಗಿನಿಂದ ಕೇಳಬಂತು. ಬಾಗಿಲು ತೆರೆಯಲಿಲ್ಲ. "ಬಾಗಲಽ-ಬಾಗಲಽ" ಎಂದು ಒಂದೇ ಸವನೇ ನಡೆಯಿತು. ಯಾರೋ ಕೆಮ್ಮಿದ್ದು ಕೇಳ ಬಂತು. ವೆಂಕಯ್ಯನಂತೂ ಅಲ್ಲ. ಪೆಟಿಗೆ ತಪ್ಪಿತೋ ಏನು ಮತ್ತೆ! — ಇದೇ ಆ ಜೋಡುಕಟ್ಟೆಯ ಮನೆ — 'ಸ್ವಚ್ಛ ಟೀ ಕ್ಲಬ್' ಅಂತ ಬರೆದಿರುವ ಬೋರ್ಡು— ಇದರ ಮೇಲೇ 'ಅ' ಬರೆದದ್ದಕ್ಕಾಗಿ ವೆಂಕಯ್ಯ ಭಟ್ಟರಿಗೆ ಹಿಂದಿನ ಲೆಕ್ಕ ಕೇಳಿದ್ದ. ಅಥವಾ ಯಾರಿಗೆ ಗೊತ್ತು — ಮಾಘಮಾಸ ಬೇರೆ ತೀರಿತ್ತು. ಆದರೂ ಭಟ್ಟರು ಕಣ್ಣು ಮುಚ್ಚಿ ಬಾಗಿಲ ಬಡಿಯಲಿಕ್ಕೇ ಹತ್ತಿದರು. "ಭಟ್ಟರೇನು! ನಿದ್ದಿ ಗಿದ್ದಿ ಇಲ್ಲಽ ಇಲ್ಲಽ ನಿಮಗ." ಈಗ ಮಾತಾಡಿದವ ವೆಂಕಯ್ಯ.

"ಹಾಂಗ್ಯಾಕಂತಿಯಪ್ಪೋ — ಈಗ ಬಂದದ್ದಽ ನಿದ್ಯಾಗ ಮತ್ತಽ." ಅಷ್ಟರಲ್ಲಿ ಬಾಗಿಲ ತೆರೆದ ಸಪ್ಪಳ ಕೇಳಬಂತು. ಆದರೆ ಅದು ಹಿತ್ತಲ ಬಾಗಿಲು. ಭಟ್ಟರಿಗೆ ಸಿಟ್ಟು ಬಂತು. "ಹೇಳುವದಕ್ಕೇ ಕೇಳುವದಕ್ಕೇ ಇದುಽ ಸಮಯವಲ್ಲ" ಎಂಬ ಪ್ರೋಕ್ತ ವಿಚಾರ ಮಾಡಿ ತಮ್ಮ ಸಿಟ್ಟಿಗೆ ಬುದ್ಧಿ ಹೇಳಿದರು. ಹಾಗೂ ಹೀಗೂ ಆಗಿ ಒಮ್ಮೆ ಮುಂದಿನ ಬಾಗಿಲು ತೆರೆಯಿತು. ಭಟ್ಟರು ಒಳಗಂತೂ ಹೊಕ್ಕರು. ಒಳಗೆ ವೆಂಕಯ್ಯನ ಹೊರ್ತು ಯಾರಿರಬಹುದೆಂದು

ನೋಡಿದರು ! ಯಾರೂ ಇದ್ದಿಲ್ಲ. ಸುಳ್ಳೇ ಭಾಸವಾಗಿರಬಹುದು. ಆದರೂ ಯಾರೋ ಇದ್ದಿರಬೇಕೆಂಬ ಕಲ್ಪನೆ ಹೋಗಲಿಲ್ಲ. ನಡುಮನೆ ದಾಟಿ ಹೋಗುವಾಗ ಅಡಕಲ ಕೋಣೆಯಿಂದ ಮತ್ತೆ ಕೆಮ್ಮಿದ್ದು ಕೇಳ ಬಂತು. ಇದ್ದಿರಬಹುದು ವೆಂಕಯ್ಯನ ಮನೆಯವರು ಎಂದು ಸಮಾಧಾನ ಹೇಳಿಕೊಂಡರು. ಆದರೂ ಈ ಮನೆಯವರು ಯಾರು ಎಂಥವರು ಎಂಬದು ತಿಳಿದಿದ್ದರೆ ನೆಟ್ಟಗಾಗುತ್ತಿತ್ತೋ ಏನೋ.

ಭಟ್ಟರು ಅಡಿಗೆಯ ಮನೆಯನ್ನು ಸುಲಿಗೆಯ ಆವೇಶದಲ್ಲಿಯೇ ಹೊಕ್ಕರು. ಆಡ ಮಾಡ ನೆಲವು ಒಂದನ್ನೂ ಬಿಡಲಿಲ್ಲ. ಎಲ್ಲಾ ತಿರಿವಿ ಹಾಕಿದರು. "ಏನಽರಽ ಬೇಕಾಗೇದ ನಿಮಗಽ?" ವೆಂಕಯ್ಯ ಒಲೆಗೆ ಉರಿ ಚಾಚುತ್ತ ಒದರಿಕೊಂಡ.

"ಏನು ಬೇಡಲಿ ನಿನ್ನ ಬಳಿಗೆ ಬಂದಽ ನೀನಿತ್ತ ಸೌಭಾಗ್ಯ ನಿಬಿಡವಾಗಿರಲಿಕ್ಕಽ ಎಽಽಽಽ" ಎಂದು ಹಾಡುತ್ತ ಮತ್ತೆ ಮಾಡದ ತಳ ಕಿತ್ತ ಹತ್ತಿದರು.

"ನೀವು ಒಂದ ಕಡೆ ಸುಮ್ಮನಽ ಕೂಡ್ರಿ ನೋಡೋಣಽ ನಾ ಎಲ್ಲಽ ಕೊಡತೇನಿ" ವೆಂಕಯ್ಯ ಒಮ್ಮೆ ಒಡನುಡಿದ. ಭಟ್ಟರ ಸಮಾಧಾನವಾಯಿತು. ಅವರು ಒಂದು ಮಣೆಯ ಮೇಲೆ ದೇವರಂತೆ ಕೈ ಜೋಡಿಸಿ ಕುಳಿತುಕೊಂಡು "ಬಿಸೇತ್ — ಚ - ಚ - ಚ - ಹಾ—" ಎಂದು ಬೇಡಿಕೊಂಡರು.

"ಕೊಡತೇನಿನ್ನಽ ಮಾತಾಡಬ್ಯಾಡರಿ." ಎಂದು ವೆಂಕಯ್ಯ ಪಾತೇಲಿಯಲ್ಲಿ ಎರಡು ಕಪ್ಪಿನಷ್ಟು ಎಸರು ಸುರಿದಿದ. ಚಹಾ ಸವಿಹಾಚೀನ ಆಗಿತ್ತು. ಚಹಾ ಕುಡಿಯುವಾಗ ಭಟ್ಟರು ವೆಂಕಯ್ಯನ ಕಿವಿಗೆ ಹತ್ತಿದರು. "ಎಲ್ಲಿಽದೊ ಸಂಸಾರ ಹೂಡೀಯಲ್ಲೋ ಮತ್ತಽ !" ವೆಂಕಯ್ಯ ಮಾತು ಹಾರಿಸಿ "ನಮ್ಮೂರವರೇಳ್ರಿ. ಇಲ್ಲೆ ಮಾಮಲೇದಾರ ಕಚೇರ್ಯಾಗಽ ಕೆಲಸದಽ ಅಂತ ಬಂದಾರ." ಭಟ್ಟರ ಸಮಾಧಾನವಾಗಲಿಲ್ಲ. ಆದರೂ ವೆಂಕಯ್ಯನ ಸಂಗತಿ.

ಬೆಳಗಾಯಿತು. ಗವಳಿಗರ ಗಂಗೆ ಬಂದಳು. ಭಟ್ಟರು ಹಾಲಳೆಯಿಸಲಿಕ್ಕೆ ಪಾತ್ರೇಲಿ ತೆಗೆದುಕೊಂಡು ಅವಳ ಮುಂದೆ ಒಂದು ಕುಳಿತುಕೊಂಡರು. ಹಾಲಳೆಯುವದಾಯಿತು. ಬುಟ್ಟಿಯಲ್ಲಿ ಕೈಹಾಕಿ, ಭಟ್ಟರು ಒಂದೊಂದು ಸಾನಾಸು – ಪಲ್ಲೆಕಾಯಿ ಹೊರಗೆ ತೆಗೆದಿಡ ಹತ್ತಿದರು. ಗಂಗೆ ರೇಗಿದಳು.

"ತಗೀರಿ ತಗೀರಿ. ಹಾಳ ಹಪರಲೆಽ ಕೈ ಹಾಕಬ್ಯಾಡ್ರಿ"

"ಏಽಽ ನಾವು ಪೋಲೀಸರು. ಕಳವಿನ ಮಾಲ ನೋಡತೀವಿ"

"ನಾ ಕಳ್ಳಿ ಅಲ್ಲ ತರ್ರಿಽ ತರ್ರಿ ನಮ್ಮ ಪಾವಲ್ರೊಕ್ಕಽಸಽ"

"ಪಾವಲಿಽ! ಸಾಕೇನ ಪಾವಲಿಽ! ಅದೆಲ್ಲ ನುಳ್ಳು. ಫೊದು ತಡ ಮಾಡಿ ಹಾಲ ತಂದದ್ದಕ್ಕಽ ಎರಡ ವರ್ಷ ಫಾಶಿ ಶಿಕ್ಷಾ ಕೊಡತೀವಿ ನಿಂದ್ರು"

"ಅವ್ವ! ಫಾಶಿ ಕೊಡಾಕಽ ನಾ ಏನ ಮಾಡಿದ್ದು! ರೊಕ್ಕಽ ಬೇಡಿದ್ನಿಽ ಅಂದ್ರ ಏನಾರ ಒಳಗಽ ತಗದ್ರಽ"

"ರೊಕ್ಕ ಎಲ್ಲ್ಯೋಡಿ ಹೋಗತಾವು! ಬೇಕಽ! ಇದು ತೊಗೊ ಕೀಲೀ ಕೈ."

"ಹೂಂಽ! ಊರೆಲ್ಲಽ ನಾಪಂದುಽ ನೆರಿ ಇಲ್ಲಽ ಯಾಪಂದು! ಬಾಯಿ ಮಾತ್ ಹೇಳಾಕ ಏನಾಗತೈತಿ! ತರ್ರಿ ತರ್ರಿ. ಬಳಿ ಇಟಗೊಂತೀನಿ!"

"ಆ ಪರದೇಶಿ ಬಳಿ ತಗೊಂಡೇನ ಸುಟ್ಟಿ! ನಾನಽ ಮುಂಬೈಗ ಹೋದಾಗ ತರತೇನಿ ಎಂತಾವು ಬೇಕಾದಂತಾವು." ಗಂಗೆ ಭಟ್ಟರನ್ನು ಕೇಳುವವಳಲ್ಲ. ಭಟ್ಟರಾದರೂ ಕಡಿಮೆಯಲ್ಲ. ನಡೆಯುತ್ತಿತ್ತು ದಿನ ಹೀಗೆ. ಅಷ್ಟರಲ್ಲಿ ಭಟ್ಟರ ಗೆಳೆಯರಲ್ಲಿ ಒಬ್ಬೊಬ್ಬ ಬರಹತ್ತಿದ. ಗಂಗಿ ಗಡಬಡಿಸಿಗೊಂಡು ಹೋದಳು.

"ಓಹೋ! ಗುರುಗಳೇನು! ಬಂದೀರಲ್ಲ! ಒಂದು ದಿನ ಬಿಡಬೇಕು ಇಲ್ಲಿ ಬರೋದುಽ! ಸಾವಿರ ಕೆಲಸಕ್ಕ ಹೋಂಟಿರತಾರ

ಜನರು; ಇಟ್ನ ಮಗಽ ತನ್ನ ಮಾರಿ ಅವರೆದುರಿಗೆ ಶಕಣಾ ಕೊಡಲ್ರಿಕ್ಕೆ ''

'' ಏನ ಸರಿ ಮಾರಿ ಮಕ್ಕಳಽ ಹೇಳೋ ಹಾಂಗಿಲ್ಲ '' ಭಟ್ಟರು ಅಂದರು. ಇನ್ನೂ ಮೂರು ನಾಲ್ಕು ಜನ ಬಂದೇ ಬಿಟ್ಟಿತ್ತು. ಯಾರಿಗೇನು ತಿಳಿಯಿತು ಅದನ್ನಂದುಕೊಂಡರು. ಭಟ್ಟರು ಶಾಂತವಾಗಿ ಕುಳಿತಿದ್ದರು. '' ತೀರಿತಽ ಒಮ್ಮೆ ಎಲ್ಲಽ ಅಂದುಕೊಳ್ಳೋದು ! ಈಗಽ ತೀರಿಸಿಕೊಳ್ರಿ ಮತ್ತ ಹಾಂಗ ಹೀಂಗ ಅಂದೀರಿ !

'' ರಾಮಣ್ಣಾ, ಈ ಭಟ್ಟನ್ನ ಕಳಸಬಾರದಽ ಸುಡಗಾಡ ಗಟ್ಟಿಗೆ ! ಮಾಡಸಪರ್ಯ್ಯಾರು ಇಲ್ಲ ನಮ್ಮ ಚಿನಂಭಟ್ಟರು ಹೋದಾಗಿನಿಂದ. ''

'' ಈಗಽ ಕಳಸ್ತೀರ್ಯಾ ! ಅಲ್ಲರ್ಯೋ ಒಬ್ಬನಽ ಮಗಽ ನಾನು ನಮ್ಮಪ್ಪಗ. ಸಂಸಾರದಿಂದಽ ಎಬ್ಬಿಸೇ ಬಿಡಬೇಕಂತೀರ್ಯಾ ! ''

'' ಮಸ್ತ ಸಂಸಾರ ಆಳತಽದ !

'' ಈಗಿಲ್ಲ ಮುದಿವ್ಯಾತಂದ್ರಽ ! ''

'' ಸ್ಥಳ ಸೆಟ್ಟಗದ ಹುಡಿಗೆ ಸುಖಾ ಬಡತಾಳ. ''

'' ಅಲ್ಲಲಾ ಅಂಣಾರಾಯರ ಮಗಳ್ನ್ಯಾಕ ಮಾಡಿಕೊಳ್ಳೋದಿಲ್ಲ ! ಕೇಳಿ ನೋಡಬೇಕು ! ''

'' ಕಲಿತ ಹುಡುಗೇರನ ಯಾವ ಮಾಡಿಕೊಂಡಾನಲ ! ಜಾತಿ ಗೀತಿ ನೋಡೋದಿಲ್ಲವರು. ನಾ ಸುಧಾರಕ ಇದ್ದೇನಿ – ''

'' ಹಾಂಗಾರ ಆ ಪದ್ದಿನ್ನ ಮಾಡಿಕೋ ''

'' ಅಯ್ಯೋ ಯಪ್ಪಾ ? ರಾಯರೇನು ಮಾಡಬೇಕು ! ''

ಎಲ್ಲರೂ ಖೊಳ್ಳೆಂದು ನಕ್ಕರು. ಮಾತು ರಂಗಿಗೆ ಬಂತು. ಊರೊಳಗಿನ ಹೊಲಗೇರಿ ಗಟಾರ ಎಲ್ಲ ತೊಳೆದದ್ದಾಯಿತು. ಹೀಗೆ ನಡೆಯುತ್ತಿತ್ತು. ಅಷ್ಟರಲ್ಲಿ ಇವರೆಲ್ಲರ ಪ್ರಮುಖ ರಂಗಣ್ಣಾ ಬಂದ.

ಆತನಿಗೆ ಈ ಜನರ ಉಪದ್ವ್ಯಾಪಿತನ ಸರಿ ಬರುತ್ತಿದ್ದಿಲ್ಲ. ಈ ಸಿದು ದ್ಯೋಗೀ ಜನರನ್ನು ಒಟ್ಟುಹಾಕಿ ಒಂದು "ಕ್ಲಬ್" ತೆಗೆದಿದ್ದ. ಒಂದು ವಾಚನಾಲಯ ನಡೆಸಿದ್ದ. ಊರೊಳಗಿನ ರಾಮನವಮಿ, ನವರಾತ್ರಿ ಮುಂತಾದ ಉತ್ಸವಗಳು ಈ ಕ್ಲಬ್ಬಿನ ಪರವಾಗಿಯೇ ನಡೆ ಯುತ್ತಿದ್ದವು. ವರ್ಷಾ ಒಂದೆರಡು ನಾಟಕಗಳನ್ನೂ ಆಡಿ ತೋರಿ ಸುತ್ತಿದ್ದರು. ಈ ವರ್ಷ ರಂಗಣ್ಣನೇ ಬರೆದ "ಬಭ್ರುವಾಹನ" ನಾಟಕವನ್ನಾಡಿ ತೋರಿಸುವವರಿದ್ದರು. ತಾಲೀಮು ಸುರು ಆಗಿತ್ತು. ಆದರೆ ಇವರ ಕ್ಲಬ್ಬಿನ ಮನೆ ಡಾ. ಭುಜಂಗರಾಯರು ಬಾಡಿಗೆಯಿಂದ ಹಿಡಿದಿದ್ದರಿಂದ ಆ ಮನೆ ಖಾಲಿಬೇಕಾಗಿತ್ತು. ಮತ್ತೊಂದು ನೋಡಿ ದ್ದರು. ರಂಗಣ್ಣ ಬಂದಕೂಡಲೆ ಎಲ್ಲರೂ ಆತನ ಸುತ್ತಲೂ ಮುತ್ತಿ ದರು.

"ಯಾಕ ರಂಗಣ್ಣಾ! ಮನೀದು ಗೊತ್ತು ಮಾಡಿದ್ಯಾs! ಬಾಡಿಗೇನು?"

"ನಾವು ಕೊಟ್ಟಷ್ಟು ಅವರು ತಗೊಂಡದ್ದು. ಕೀಲೀಕೈ ಯಂತೂ ತಂದೇನಿ."

"ಅಲ್ಲ ರಂಗಣ್ಣಾ ಅದು. ನೀ ಹೇಳ ಮತ್ತs. ಆ ಬಾಟಲೀಕಾ ಬೂಚನ್ನs ಓಡಸದಿದ್ದರ – ಮನೀ ತೆರವ ಮಾಡಸೋದೆಷ್ಟೋತ್ತೋ! ಮಾವಿನ ತೋಪು ತೆರವ ಮಾಡಸಲ್ಯಾ!" ಭಟ್ಟರು ಉತ್ತೇಜಿತರಾಗಿ ಅಂದರು. ರಂಗಣ್ಣ ಬರಿ ನಕ್ಕು ಬಿಟ್ಟ. ಭಟ್ಟರಿಗೆ ಈ "ನೇಮಸ್ತ" ಪಕ್ಷ ಸೇರುತ್ತಿದ್ದಿಲ್ಲ.

"ಅಂಣಾರಾಯರು ನಮ್ಮ ನಾಟಕಕ್ಕs ಅಂತ ಹತ್ತು ರೂಪಾಯಿ ಪಟ್ಟಿ ಕೊಟ್ಟಾರ. ವಾಚನಾಲಯಕ್ಕs ನೂರು ರೂಪಾಯಿ ಕೊಡತೇವಿ ಅಂತ ಹೇಳ್ಯಾರ" ರಂಗಣ್ಣ ಹೇಳಿದ.

"ಏನs ಅನ್ನು ರಾಯರು ದೊಡ್ಡ ಮನಸ್ಸಿನವರು ನೋಡು" ಭಟ್ಟರು ಮುಕ್ತಕಂಠದಿಂದ ಸ್ತುತಿಸಿದರು.

ಆ ಮಾತೂ ಈ ಮಾತೂ ನಡೆದವು. ಚಹಾ ಮುಗಿಯಿತು. ಒಬ್ಬೊಬ್ಬರೇ ಸ್ನಾನಕ್ಕೆಂದು ನದಿಯ ದಾರಿ ಹಿಡಿದರು.

## ೮

## ಗೆಳತಿಯರು

ಅಕ್ಕವ್ವ ಮನೆಗೆ ಒಂದು ೮-೧೦ ದಿನ ಆಗಿದ್ದವು. ಕೋಣೆ ಯಲ್ಲಿ ಕುಳಿತುಕೊಳ್ಳುವುದೇ ಒಂದು ಉದ್ಯೋಗ. ಮೈಸೂರಲ್ಲಿಯ ವಸತಿಗೃಹದ ಜೀವನವೆಲ್ಲಿ ಈ ಜೀವನವೆಲ್ಲಿ! ಅಲ್ಲಿ ಅದೇ ಮನೆಯಾ ಗಿತ್ತು. ಇಲ್ಲಿ ತನ್ನ ಸ್ವಂತದ ಮನೆಯು ತನ್ನದಲ್ಲವಾಗಿತ್ತು.

ವಸತಿಗೃಹದ ಜೀವನವೆಂದರೆ ಒಂದು ಹೂವಿನಿಂದ ಮತ್ತೊಂದು ಹೂವಿಗೆ ಹಾರಾಡುವ ಒಂಣಒಂಣದ ಜೀವನ. ನಿಯಮಿತ ಊಟ, ಉಡಿಗೆ, ವ್ಯಾಯಾಮ, ಅಭ್ಯಾಸ ಇವುಗಳೇ ಆ ಜೀವನಮಂದಿರದ ಮೆಟ್ಟಿಲುಗಳು.

ಮಾತೃಸುಖವೇ ಇಲ್ಲದಾಗ ಏನಿದ್ದೇನು ಫಲ! ರಾಧಾಬಾ ಯರು ಅಕ್ಕವ್ವನನ್ನು ತಮ್ಮ ಹತ್ತಿರ ಯಾವ ನೆವದಿಂದೂ ಬರಗೊ ಡುತ್ತಿದ್ದಿಲ್ಲ. ಸ್ವಭಾವ ಮೊದಲಿನಿಂದ ಸ್ವಲ್ಪ ದೂರ ದೂರಾಗಿರುವುದೇ. ಊರಲ್ಲಿಯೂ ಯಾರನ್ನೂ ಹಚ್ಚಿಗೊಂಡಿದ್ದಿಲ್ಲ. ಈಗಂತೂ ಜಡ್ಡಿನ ಸೀಡಕತನ. ಅಕ್ಕವ್ವನಿಗೆ ಶುಶ್ರೂಷೆ ಮಾಡಬೇಕೆಂಬ ಹಂಬಲ. ರಾಧಾಬಾಯರ ಹಟವೇ ಬೇರೆ. ಯಾವ ಮಾತಿಗೂ ಪದ್ದಕ್ಕ ಬೇಕೇ ಬೇಕು. ಏನೋ ಹುರುಪಿನಿಂದ ರಾಧಾಬಾಯರ ಹತ್ತಿರ ಕುಳಿತು ಏನಾದರೂ ಕೆಲಸ ಮಾಡಹೋದರೆ ಅವರು ಹರಿಹಾಯುತ್ತ " ಬಡ ಆ ಕೆಲಸಽ- ಪದ್ದಕ್ಕನ್ನ ಛಂದಕ್ಕಿಟ್ಟೆಲ್ಲಽ " ಅಂತೆ ಅನ್ನುತ್ತಿದ್ದರು. ಅಕ್ಕವ್ವ ಖತಿಗೊಂಡು ತನ್ನ ಕೋಣೆಯ ಹಾದಿ ಹಿಡಿಯುತ್ತಿದ್ದಳು. ಅಲ್ಲಿ ಒಮ್ಮೆ ಮುಕ್ತಕಂಠದಿಂದ ಅತ್ತರೆ ಅವಳ ದುಃಖದ ಭಾರ ಅಷ್ಟೇ ಕಡಿಮೆಯಾಗುತ್ತಿತ್ತು. ರಾಧಾಬಾಯರ ಕೋಣೆಯಿಂದ ಹೊರ ಬಿದ್ದ ಪದ್ದಕ್ಕನನ್ನು ನೋಡಿ ಒಮ್ಮೊಮ್ಮೆ ಮೈ ಉಬ್ಬಿ ಅವಳನ್ನೆಷ್ಟು ನೋಡಿದರೂ ಸಾಲದಾಗಿ, ಅಕ್ಕವ್ವ ಅವಳನ್ನು ತನ್ನ ಕೋಣೆಗೊಯ್ದು ತಾಸುತಾಸು ಮಾತಾಡುತ್ತ ಕುಳಿತುಕೊಳ್ಳುತ್ತಿದ್ದಳು. ಪದ್ದಕ್ಕ

ಸೆಳವಿಗೆ ಸಿಗದಿದ್ದರೆ ಪುಸ್ತಕಗಳಿದ್ದವು. ಏನೂ ಇಲ್ಲದಾಗ ಇತ್ತೀ ಇತ್ತ ಗಡಿಯಾರದ ಮುಳ್ಳಿನ ಬೆಸ್ನು ಹತ್ತುವುದು.

ಅಕ್ಕವ್ವ ಊರಿಗೆ ಬಂದ ಮೇಲೆ ಇನ್ನೂ ಯಾವ ಗೆಳತಿಯರ ಭೆಟ್ಟಿಗೂ ಹೋಗಿದ್ದಿಲ್ಲ. ಅವಳ ಗೆಳತಿಯರಲ್ಲಿ ಎಲ್ಲರೂ ಬಹುಶಃ ಮದುವೆಯಾಗಿ ಸಂಸಾರದಲ್ಲಿ ತೊಡಗಿದ್ದಿರಬೇಕು. ಕೆಲವರು ಅತ್ತೆ ಮನೆಗೆ ಹೋಗಿದ್ದರು. ಕೆಲವರ ಮನೆ ಅಲ್ಲಿಯೇ ಇತ್ತು. ಸರಸೂ ಜೀವದ ಗೆಳತಿ. ಅವಳ ಗಂಡ ಬಾಬಣ್ಣಾ ಅಲ್ಲಿಯೆ ಇಂಗ್ರೇಜೀ ಶಾಲೆಯಲ್ಲಿ ಮಾಸ್ತರನಾಗಿದ್ದ. ಆತನು ಒಂಭತ್ತು ತಾಸಿಗೆ ಮನೆ ಯೊಳಗಿರುತ್ತಿದ್ದಿಲ್ಲ. ಅಕ್ಕವ್ವ ಕೃಷ್ಣನ ಕೂಡ ಹೇಳಿಕಳಿಸಿದಳು. ಮತ್ತಿಬ್ಬರು ಗೆಳತಿಯರು ಸರಸುವಿನ ಮನೆಗೇ ಬರಬೇಕೆಂದು ಗೊತ್ತಾಯಿತು.

ಅಕ್ಕವ್ವ ಊಟ ಮುಗಿಸಿಕೊಂಡು ಮೋಟರಿನ ದಾರಿ ನೋಡದೇ ಸರಸುವಿನ ಮನೆಗೆ ಬಂದು ಬಿಟ್ಟಳು. ಅವಳ ಮತ್ತಿಬ್ಬ ಗೆಳತಿಯರೂ ಬಂದೇ ಬಿಟ್ಟಿದ್ದರು. ಅಕ್ಕವ್ವ ಮನೆಯೊಳಗೆ ಕಾಲಿಟ್ಟ ಕೂಡಲೆ ನೋಡುತ್ತಾಳೆ, ಅವರು ಮೂವರೂ ಒಂದೊಂದು ದೊಡ್ಡ ಪುಸ್ತಕವನ್ನು ತೆಗೆದುಕೊಂಡು ವಾಚಸದಲ್ಲಿ ಒಳ್ಳೇ ಮಗ್ನರಾಗಿ ದ್ದರು. ಸರಸು '' ಬಂದ್ಯಾs – ಬಾ. '' ಇಷ್ಟೇ ಅಂದು ತನ್ನ ಓದಿ ನಲ್ಲಿ ತೊಡಗಿದಳು. ಐದು ನಿಮಿಷಗಳಾದರೂ ಯಾರೂ ಮಾತಾಡಿ ಸಲಿಲ್ಲ. ಅಕ್ಕವ್ವನಿಗೆ ಈ ವಿಕ್ಷಿಪ್ತತನದ ಅರ್ಥವೇ ಆಗಲಿಲ್ಲ. ಸಿಟ್ಟು ಬಂತು. ಹಾಗೇ ಹಿಂತಿರುಗಿ ಮನೆಗೆ ಬಂದುಬಿಡಬೇಕೆಂದೆನಿಸಿತು. ಅಷ್ಟರಲ್ಲಿ ಏನೋ ಹೊಳೆದಂತಾಯಿತು. ಈ ನಾಟಕದ ಗುರಿ ತನ್ನ ಕಲಿಯುವಿಕೆ ಇದ್ದಿರಬಹುದೆಂದೆನಿಸಿತು. ಅವರ ಈ ಟೀಕೆಗೆ ಅಷ್ಟೇ ತೀಕ್ಷ್ಣವಾದ ಪ್ರತ್ಯುತ್ತರ ಕೊಡಬೇಕೆಂದು ಒಂದು ಕಾಗದ ತೆಗೆದು ಕೊಂಡು ಟಾಕಿನಿಂದ ಒಂದು ಚಿತ್ರ ಬರೆಯತೊಡಗಿದಳು. ಇಷ್ಟೊತ್ತಿನವರೆಗೆ ಹಿಡಿದಿಟ್ಟ ನಗೆ ಒಡೆದು ಮನೆ ಅದುರಿತು. ಅಕ್ಕವ್ವನ ಚಿತ್ರ ಮುಗಿಯುತ್ತ ಬಂತು. ಮೂವರೂ ನೋಡಿ ಚಕಿತರಾದರು.

ಚಿತ್ರ ಮುಗಿಯಿತು. ಅಕ್ಕವ್ವ ಅದನ್ನು ಸರಸುವಿನ ಕೈಯಲ್ಲಿ ಕೊಟ್ಟಳು.

ಈ ಚಿತ್ರದಲ್ಲಿ ನಾಲ್ಕು ಹೆಣ್ಣು ಸಿಂಹಗಳಿದ್ದವು. ಒಂದು ಸಣ್ಣ ಕಿವಿಯದು. ಉಳಿದ ಮೂರರ ಕಿವಿಗಳು ಉದ್ದಾಗಿದ್ದವು. ಕೆಳಗೆ "ನಾಲ್ಕು ಹೆಣ್ಣು ಸಿಂಹಗಳ ಸರ್ಕಸ್!" ಎಂದು ಬರೆದಿತ್ತು. ಚಿತ್ರದ ವ್ಯಂಗ್ಯಾರ್ಥ ತಿಳಿಯುದಷ್ಟು ಅವರೇನು ಮುಗ್ಧರಿದ್ದಿಲ್ಲ. ಹಾಂ ಹಾಂ ಅನ್ನುವಷ್ಟರಲ್ಲಿ ಅಕ್ಕವ್ವ ತಮ್ಮನ್ನು ಒಂದು ಪ್ರಸಿದ್ಧ ಪ್ರಾಣಿಗೆ ಹೋಲಿಸಿದ್ದನ್ನು ಕಂಡು ತಾವು ಇದೆಲ್ಲ ಇಲ್ಲದ ಪೇಚಿನಲ್ಲಿ ಬಿದ್ದೆ ವೆಂದು ಅವರಿಗೆನಿಸಿತು. ಮೋರೆ ಕಪ್ಪಿಟ್ಟಿತು. ಆದರೂ ದ್ವಾರಿ ಜಾಣಾ ಕ್ಷಳು; ಚಟ್ಟನೆ "ಅಯ್ಯ ಸಣ್ಣ ಕಿವಿ ಸಿಂಹದ ಪಾಲಿಗೂ ಸರ್ಕ ಸೇನು ತಪ್ಪಲಿಲ್ಲ." ಎಂದು ಅಂದುಬಿಟ್ಟಳು. ಮಾತಿಗೆ ಮಾತು. ಗೆಳತಿಯರೂ ನಕ್ಕು ಬಿಟ್ಟರು.

ತನ್ನ ಚಿತ್ರದ ಉರಲು ತನ್ನನ್ನೇ ಹೀಗೆ ಸುತ್ತಿಕೊಂಡೀತೆಂಬ ದರ ಕಲ್ಪನೆ ಅಕ್ಕವ್ವನಿಗಿದ್ದಿಲ್ಲ. ಆಯಿತು. ಅವಳ ಕಣ್ಣುಗಳಿಂದ ಅಶ್ರು ತೀರ್ಥಗಳೂ ಹರಿಯಲಾರಂಭಿಸಿದುವು. ಇಂಥ ಮಳೆಯು ಮುಹೂ ರ್ತವನ್ನು ಸಾಧಿಸಿಯೇ ಸರಿಯು ಮುದುವೆಯಾಗುವದಂತೆ! ಕೂಡಿದ ಮುಸಗಳು ವ್ಯೆಮುರೆಯುವದಕ್ಕೆಷ್ಟು ತಡ.

ಆದರೂ ಅಕ್ಕವ್ವ "ನಾ ಹೋಗೇ ಬರತೇನ್ರೆವ್ವ ಮುಸ್ಕಗೆ" ಎಂದು ಹೊರಟೇ ಬಿಟ್ಟಳು.

"ಇಷ್ಟ್ಯಾಕ ಹೇಳಬೇಕಂತ ಬಂದಿದ್ದೇನು!" ದ್ವಾರಿ ಕೇಳಿದಳು.

"ಬಿಡ್ರೇ. ಯಾಕ ಕಾಡತೀರಿ ಅಕಿನ್ನ" ಸರಸೂ ಅಂದಳು.

"ಹೋಗಲಿ ಬಿಡೆ. ಚಕ್ಕಂದ ಎಂದೂ ಹೊತ್ತೊ ಸಿಗತದ ಮನ್ಯಾಗ. ಅತ್ತಿ ಮನಿ ಸರ್ಕಸ ಕಂಡಿಲ್ಲಿನ್ನೂ." ಚಿತ್ರದ ಸೇಡು ಯಮುನಿಗಿನ್ನೂ ಸಾಕಾಗಿದ್ದಿಲ್ಲ.

"ಸುಮ್ಮನಿರ ಕೂಡ ಚದುರ. ಮನ್ನೆ ಹತ್ತಿದ ಅರಿಷಣಾ

ಇನ್ನೂ ಆರಿಲ್ಲ. ಬಂದಾಳ ಮಾತಾಡಲಿಕ್ಕೆ ಅಜ್ಜಿ ಹಾಂಗ." ಯಮುನಿ ಯಾರಿಗೂ ಅಂಜದಿದ್ದರೂ ಸರಸೂಗೆ ಅಂಜುತ್ತಿದ್ದಳು. ಅವಳು ಹೆಚ್ಚಿಗೆ ಮಾತಾಡಲಿಲ್ಲ. ಒಪ್ಪಂದವಾಯಿತು. ಅಕ್ಕವ್ವನೂ ಎಲ್ಲವನ್ನು ಮರೆತುಬಿಟ್ಟು ಗೆಳತಿಯರಲ್ಲೊಮ್ಮ ಕೂಡಿಕೊಂಡಳು.

ಸುಖದುಃಖದ ಮಾತುಕಥೆಗಳು ನಡೆದವು. ಅವರು ಸಂಸಾರವೊಂದಿಗೆಯರು. ಹೆಜ್ಜೆ ಹೆಜ್ಜೆಗೆ ಹೊಸ ಅನುಭವ. ಗೆಳತಿಯರಲ್ಲಿ ಕೆಲಜನರು ದ್ರಾಷ್ಟ ಅತ್ತೆಂದರ ಕೈಯಲ್ಲಿ ಉರಿಯುತ್ತಿದ್ದರು. ಕೆಲವರು ಬಂಗಾರದ ಗೆಜ್ಜೆಕಟ್ಟಿ ನಲಿಯುತ್ತಿದ್ದರು. ಸರಸುವಿನ ಎರಡು ಮಕ್ಕಳು ಹೋಗಿದ್ದವು. ದ್ವಾರಿಗೀಗ ಐದರೊಳಗೆ; ಅದೂ ಚೊಚ್ಚಲ. ಯಮುನಿಯಂತೂ ಮೊದಲಗಿತ್ತಿ. ಮಾತಿಗೆ ಮೊದಲೇ! ಅಕ್ಕವ್ವನಿಗಾದರೂ ಈ ಐದಾರು ವರ್ಷಗಳಲ್ಲಿ ಹೊಸ ಗುರ್ತುಗಳಾಗಿದ್ದವು. ವಸತಿಗೃಹದಲ್ಲೂ ಇಡೀ ಆಯುಷ್ಯದಲ್ಲಿ ನೆನಪಿಡುವಂಥ ಸಂಗತಿಗಳಾಗುತ್ತವೆ. ಈಗ ಮನೆಯಲ್ಲಾದರೂ ಅಕ್ಕವ್ವನಿಗೆ ಸುಖವಿದ್ದಿಲ್ಲ. ಅವರದೊಂದು ಪರಿ. ಆದರೆ ಇವಳದೂ ಒಂದು ಪರಿ.

ನಾಲ್ಕೂವರೆಯಾಯಿತು. ಸರಸೂ ಚಹಾ ಮಾಡಲಿಕ್ಕೆಂದು ಎದ್ದಳು. ಯಮುನಿಯೂ ಎದ್ದುಬಿಟ್ಟಳು. ಅಕ್ಕವ್ವನಿಗೆ ಆಶ್ಚರ್ಯವೆನಿಸಿ "ಕೂಡ್ರ ಹೋದಿಽ ಅಂತ" ಎಂದನ್ನುತ್ತ ಯಮುನಿಯನ್ನು ಕೈಹಿಡಿದು ಕೂಡಿಸಿದಳು. ದ್ವಾರಿ ಯಮುನಿಯ ಕಡೆಗೆ ನೋಡಿ, ನಕ್ಕು "ಹೋಗಲೆವ್ವ ಆಕಿಽ. ಮೊನ್ನೆ ನಾಗರಪಂಚಮಿಗೆ ಕಾಲೇಜ ಇಲ್ಲಿಗೆ ಬಂದಽದ" ಎಂದು ಅಂದಳು.

"ಹೋಗ್ರೆ" ಎಂದು ಯಮುನಕ್ಕ ಸಿಟ್ಟಿನಿಂದ ನೋಡಿದಳು. ಕಿಡಿಗೇಡಿ ಅರೆನಗೆ! ಅವಳಿಗೆ ಸಿಟ್ಟೇ ಬಂದಿಲ್ಲವೆಂದು ಹೇಳಿಬಿಟ್ಟಿತು. ತುಟಿಯಮೇಲಿನ ಕೆಂಪು ಉಕ್ಕೇರಿ ಎರಡೂ ಗಲ್ಲತುಂಬ ಸೂರಿಯಾಯಿತು. ಈ ದೃಶ್ಯ ನೋಡಿ ಅಕ್ಕವ್ವ ಕ್ಷಣಹೊತ್ತು ಮುಗ್ಧಳಾದಳು. ಅವಳ ಹೃದಯದಲ್ಲಿ ಒಂದು ತೆರಿ ಏನೋ ಅಲ್ಲಾಡಿ ಎಲ್ಲಿಯೋ ಇಲ್ಲದಂತಾಯಿತು.

ಚಹಾ ಮುಗಿಯಿತು. ಯಮುಸಿಯನ್ನು ಹೋಗಗೊಡಬಾರದೆಂಬ ಒಳಸಂಚೇ ಆಗಿತ್ತೆಂದು ತೋರುತ್ತದೆ. ಇಲ್ಲವಾದರೆ ಹರಟೆಗಳಿಗೆ ಮುಗಿಯದಿರಲಿಕ್ಕೇನಾಗಿತ್ತು!

ಸಂಜೆಯಾಯಿತು. ದ್ವಾರಿ ತವರುಮನೆಗೆ ಬಂದವಳಾದರೂ ಚೊಚ್ಚಲ ಬಸರು. ಯಮುಸಿಯಂತೂ ಹೊರಡಲೇ ಬೇಕಾಗಿತ್ತು. ತಮ್ಮ ಮನೆಗೂ ಒಮ್ಮೆ ಬಂದು ಹೋಗಲಿಕ್ಕೆ ಅಕ್ಕವ್ವನಿಗೆ ಹೇಳಿ ಇಬ್ಬರೂ ಪೋದರು. ತುಸು ಹೊತ್ತು ಕುಳಿತುಕೊಂಡು ಅಕ್ಕವ್ವನೂ ಹೊರಟಳು. ಕುಂಕುಮ ಹಚ್ಚುವಾಗ ನರಸೂ ಅಂದಳು, "ಅಕ್ಕು, ಹ್ಯಾಂಗ ಅದs ಹೊಸs ಅವ್ವನ ಆಳಕಿ!"

"ಹೊಸ ಅವ್ವs! ಆಕಿನ್ನ ಎಲ್ಲಿಂದ ತಂದಿ ಮತ್ತs?"

"ನಿಮ್ಮ ಪದ್ದಕ್ಕಾs! ನಾ ಅನ್ನೊದಿಲ್ಲಪ್ಪs, ಮತ್ತs ಮನ್ನೆ ಪುರಾಣದಾಗ ನಡದಿತ್ತs ಮಾತು, ನನ್ನ ಕಿವಿಗೂ ಬಿತ್ತು."

"ಪುರಾಣದಾಗ ಇದನ್ನs ಹೇಳತಾರ ಕಾಣಸ್ತದ ಆಚಾರ್ರು! ಬಾಯಿ ಅದs ಭಕಾಸ್ತ್ರಾರs, ತೀರಿತು. ಹಾಂಗೇನಾರ ಇದ್ದರs ನಾ ಇದ್ದೇನಲ್ಲ ಕೇಳಲಿಕ್ಕೆ ಅಂಣಾನ"

ಅಕ್ಕವ್ವನಿಗೆ ಸಿಟ್ಟು ಬಂದಿತ್ತು. ಆದರೂ ನರಸೂ ಹಾಗೇ ಏನಾದರೂ ಹುಟ್ಟಿಸಿಕೊಂಡು ಹೇಳುವವಳಲ್ಲವೆಂಬದೂ ಗೊತ್ತಿತ್ತು. ಮುಂದೇನೂ ಮಾತಾಡದೇ ಹೊರಟಳು.

ಮನೆಗೆ ಹೋಗುವಾಗ ಮನಸ್ಸು ಸ್ಥಿರವಿದ್ದಿಲ್ಲ. ಮನೆ ಬಂದದ್ದು ಗೊತ್ತಾಗಲಿಲ್ಲ.

## ೯

## ಅಕ್ಕವ್ವ ನೋಡಿದ ದೃಶ್ಯ

ಮನೆಯಲ್ಲಿ ಅಲ್ಲಿಗೆ ಇಲ್ಲಿಗೆ ಸಾಮುಸೂಮು ಇತ್ತು. ದೀಪ ಹಚ್ಚಿದ್ದಿಲ್ಲ. ಅಡಿಗೆಯ ಮನೆಯೊಳಗೆ ರಂಗವ್ವನೂ ಇದ್ದಿಲ್ಲ. ಅಕ್ಕವ್ವ ತನ್ನ ಕೋಣೆಗೆ ಹೋಗಿ ಬಾಗಿಲು ಮುಚ್ಚಿಕೊಂಡು ಪಲಂಗಿನ ಮೇಲೆ ಬಿದ್ದುಕೊಂಡಳು. ವಿಚಾರಕ್ಕೆ ಮೊದಲಿಲ್ಲ ಕಡೆಯಿಲ್ಲ.

“ನರಸೂ ಹೇಳಿದ್ದು ಸುಳ್ಳಿದ್ದೀತು. ಅಂಣಾ ಹೀಂಗಿದ್ದಿದ್ದಾರs! ಛೀ! – ಉಪಾಳ ಮುಂದಿಗೆ ಉದ್ಯೋಗsನs ಇಲ್ಲ. ಯಾರಿಗೇನು ಹೆಸರಿಟ್ಟಾರು ನೋಡುದಿಲ್ಲ. ಪದ್ದಕ್ಕಾ. ಪಾಪ ಒಡಿವಿ, ಗಂಡ ಸತ್ತಾಕೆ. ಒಂದು ಪಕ್ಷ ಕಡಿಮಿ. ಪಸಂದರೂ ಯಾರ ಕೈ ಹಿಡಿಯುವರಿಲ್ಲ. ಮಾಡಿದರs ಇಲ್ಲದ ತರ್ಕsನs. ರಸ್ತೇದ ಮ್ಯಾಲ ಬಿದ್ದಾಳs! ಹುಟ್ಟಿಶಾರ ಏನಾರs! ಪಾಪ ಅವ್ವನ ತಲಿಗಂಬು ಬಿಟ್ಟಿರುದಿಲ್ಲs. ಅವ್ವನೂ ಆಕಿ ಮ್ಯಾಲ ವಸವಸ ಮಾಡತಿರತಾಳs. ಸುಮ್ಮನಿರತಾಳ ಪಾಪs. ಇದುs – ಇದು ಅವ್ವಗ ಗೊತ್ತಾಗದs ಇರೋ ಮಾತಲ್ಲ, ಉಳಿತಿದ್ದಿಲ್ಲ. ಅಪ್ಪ, ಎಲ್ಲ ಸುಳ್ಳ ಅದs–”

ವಿಚಾರಮಾಡುತ್ತ ಹಾಗೆ ಎಷ್ಟೊತ್ತು ಕುಳಿತುಕೊಳ್ಳುತ್ತಿದ್ದಳೋ. ಇಷ್ಟೊತ್ತು ಕತ್ತಲಲ್ಲಿಯೇ ಕುಳಿತುಕೊಂಡದ್ದು ಈಗ ಅವಳ ಲಕ್ಷ್ಯಕ್ಕೆ ಬಂತು. ಸುಳ್ಳೇ ವಿಚಾರ ಮಾಡಿ ಹೆಣಗಾಡಬಾರದೆಂದು ನಿಶ್ಚಯಿಸಿ ಊಟಕ್ಕೆಂದು ಅಡಿಗೆಯ ಮನೆಗೆ ಹೊರಟಳು. ಅಂಣಾರಾಯರದು ಒಪ್ಪತ್ತೇ ಊಟ. ಅಕ್ಕವ್ವನಿಗಾದರೂ ಊಟದ ಅವಸರವಿರುತ್ತಿದ್ದಿಲ್ಲ. ರಂಗವ್ವನ ಅಡಿಗೆ ಮೆರವಣಿಗೆಯ ಹೆಜ್ಜೆ ಹಾಕುತ್ತ ನಡೆದೇ ಇರುತ್ತಿತ್ತು. ಅಡಿಗೆಯದಿನ್ನೂ ಸದ್ದು ಕಾಣಲಿಲ್ಲ. ರಂಗವ್ವನೂ ಬಂದಂತೆ ತೋರಲಿಲ್ಲ. ಕೋಣೆಗೆ ಹೋಗಿ ರಂಗವ್ವ ಊಟಕ್ಕೆ ಎಬ್ಬಿಸುವ ವರೆಗೆ ಏನಾದರೂ ಓದುತ್ತ ಬೀಳಬೇಕೆಂದು ಮಾಡಿದಳು. ತಿರುಗಿ ಬರುವಾಗ ಏನೋ ಅಂಣಾರಾಯರ ಕೋಣೆಯ ಕಡೆಗೆ

ದೃಷ್ಟಿ ಹೋಯಿತು. ಕೋಣೆಯಲ್ಲಿ ದೀಪ ಹತ್ತಿತ್ತು. ಹೊರಗಿನಿಂದ ಬಂದಿರಬಹುದು. ಯಾವುದಾದರೊಂದು ಪುಸ್ತಕ ತರಬೇಕೆಂದು ಅತ್ತ ಹೊರಟಳು.

ಕೋಣೆಯ ಬಾಗಿಲು ಮುಚ್ಚಿತ್ತು. ಬಾಗಿಲಿಗೆ ಗಾಜು ಕೂಡಿಸಿದ್ದು ಒಳಗಿನಿಂದ ಪರದೇ ಇಳಿಬಿಟ್ಟಿತ್ತು. ಒಂದು ಸಿಟ್ಟಿಗೆ ಪರದೇ ಓರೆಯಾದ್ದರಿಂದ ಒಳಮಗ್ಗಲಿನ ಕೆಲವೊಂದು ಭಾಗವು ಕಣ್ಣಿಗೆ ಬೀಳುತ್ತಿತ್ತು.

ಅಕ್ಕವ್ವ ಕಾಜಿಗೆ ಹಣೆ ಇಟ್ಟಳು. ಒಳಗಿನ ದೃಶ್ಯವನ್ನು ನೋಡಿ ಮೈ ಬೆವೆಯಿತು.

ಅಂಣಾರಾಯರು ಪಲಂಗಿನ ಮೇಲೆ ಮಲಗಿಕೊಂಡಿದ್ದರು. ಪದ್ಮಕ್ಕ ಹತ್ತಿರ ನಿಂತು ಏನೇನೋ ಹೇಳಿ ಕಂಣೊರಿಸಿಕೊಳ್ಳುತ್ತಿದ್ದಳು. ಅಂಣಾರಾಯರು ಆವಳ ಸಮಾಧಾನ ಮಾಡುತ್ತಿರುವಂತೆ ತೋರುತ್ತಿತ್ತು. ಮಾತು ಕೇಳಿಸುತ್ತಿದ್ದಿಲ್ಲ. ಹೀಗೆ ಎಷ್ಟೋ ಹೊತ್ತು ನಡೆದಿತ್ತು. ಪದ್ಮಕ್ಕ ಬಿಕ್ಕಿ ಬಿಕ್ಕಿ ಅಳಹತ್ತಿದಳು. ಅಂಣಾರಾಯರು ಎದ್ದು ಆವಳನ್ನು ಹತ್ತಿರೆಳೆದು ಅವಳ ಮೋರೆಯನ್ನೆತ್ತಿ........ ಅಕ್ಕವ್ವ ಕಂಣು ಮುಚ್ಚಿದಳು. ಭೂಮಿ ಆಕಾಶ ಒಂದಾದಂತೆ ಕಾಣಿಸಿತು. ಜೋಲಿ ಹಿಡಿಯುತ್ತ ಹೇಗೋ ಕೋಣೆಗೆ ಬಂದುಬಿದ್ದಳು.

"ಅಂತೂ ನಂಸೂನ ಮಾತು ಖರೆ. ಅಂಣಾ ಹೀಂಗ ಮಾಡಬಾರದಾಗಿತ್ತು. ಪದ್ಮಕ್ಕನs ಒಡಿವಿ. ಆಕಿದರs ಏನು ವಯಸ್ಸಾಗೇದs! ತಾವು ತಿಳದವರುs. ಹೀಂಗ ಮಾಡಬಾರದಾಗಿತ್ತು." ಅಕ್ಕವ್ವನಿಗೆ ಎಲ್ಲ ದೋಷ ಅಂಣಾರಾಯರದೇ ಎಂದು ತೋರುತ್ತಿತ್ತು.

ಈ ಪ್ರಕಾರವನ್ನು ರಾಧಾಬಾಯಿಯರಿಗೆ ತಿಳಿಸಬೇಕೋ ಇಲ್ಲವೋ. ಅವರ ಪ್ರಕೃತಿಮಾನ ಸೂಕ್ಷ್ಮ. ಬಂದು ಹೋಗಿ ಬಂದಾದರೆ!

ಊಟ ನಡೆದಾಗಲೂ ಇದೇ ವಿಚಾರ. ಮುಗಿದರೇ ಸರಿ.

---

## ೧೦

## ಮದುವೆಯ ಒಗಟು

ಆ ಮುಂದೆ ನಾಲ್ಕೈದು ದಿನ ಅಕ್ಕವ್ವ ತನ್ನ ಕೋಣೆಯ ಹೊರಗೇ ಬೀಳಲಿಲ್ಲ. ಅಂಣಾರಾಯರ ಮೋರೆಯನ್ನು ಸಹ ನೋಡ ಬಾರದೆಂದವಳಿಗೆನಿಸಿತು. ಪದ್ದಕ್ಕನನ್ನಂತೂ ಕಂಣೆತ್ತಿ ನೋಡುವ ದಾಗಲಿಲ್ಲ. ತಂದೆಯ ಬಗ್ಗೆ ಮನಸ್ಸಿನಲ್ಲಿ ನಾಚಿಕೆ ಹುಟ್ಟಿತು. ರಾಧಾ ಬಾಯರ ನೆನಪಾಗಿ ಕಸಿವಿಸಿಯಾಗುತ್ತಿತ್ತು.

ಕರ್ಮಧರ್ಮ ಸಂಯೋಗದಿಂದ ರಾಧಾಬಾಯರ ಪ್ರಕೃತಿ–ಅಕಸ್ಮಾತ್ತಾಗಿ ಅತ್ಯವಸ್ಥವಾಗಿ ಎರಡು ವಾರ ಮನೆಯಲ್ಲಿ ಗೊಂದ ಲವೇ ಗೊಂದಲ ನಡೆಯಿತು. ಅಂಣಾರಾಯರು ರಾಧಾಬಾಯರ ಕೋಣೆಯನ್ನೇ ಬಿಟ್ಟಿದ್ದಿಲ್ಲ. ಶ್ರೀನಿವಾಸರಾಯರಿಗೆ ತಮ್ಮ ದವಾ ಖಾನೆಯಾದರೂ ಇತ್ತೋ ಇಲ್ಲವೋ. ಅವರು ತಮ್ಮ ಮನೆಗೆ ಸಹ ಹೋಗಿದ್ದಿಲ್ಲ. ರಾಧಾಬಾಯರ ಕೋಣೆಯಲ್ಲಿ ಪದ್ದಕ್ಕನ ಹೊರ್ತು ಯಾರನ್ನೂ ಬಿಡುತ್ತಿದ್ದಿಲ್ಲ. ಅಕ್ಕವ್ವ ಹೊರಗೆ ನಿಂತು ನೋಡಿ ಬರು ತ್ತಿದ್ದಳು.

ಅಂಣಾರಾಯರ ಶುಶ್ರೂಷೆಯಿಂದಲೋ, ಡಾಕ್ಟರರ ಔಷಧ ದಿಂದಲೋ, ರಾಧಾಬಾಯರ ಜೀವದ ಹಟದಿಂದಲೋ, ಜೀವಿ ಯಂತೂ ತಿರುಗಿತು. ಮತ್ತೆ ಪೂರ್ವಸ್ಥಿತಿ ಬಂತು. ಅಕ್ಕವ್ವನ ನಿತ್ಯದ ಭೆಟ್ಟಿಯ ಕ್ರಮ ಮೊದಲಿನಂತೆ ನಡೆಯಿತು.

ಒಂದು ದಿನ ಪದ್ದಕ್ಕ ಕೈತೊಳಕೊಳ್ಳಲಿಕ್ಕೆಂದು ತುಸು ಹೊರಗೆ ಹೋದಾಗ ಅಕ್ಕವ್ವ ರಾಧಾಬಾಯರಿಗಂದಳು “ ಅವ್ವಾ ಸ್ವಲ್ಪ ಮಾತಾಡೋದದ ”

ರಾಧಾಬಾಯರಿಗೆ ಆಶ್ಚರ್ಯವೆನಿಸಿತು. ಅವರು ಹೊರಗೆ ಏನೂ ತೋರಿಸದೇ “ ಅದೇನು ಮಾತಾಡೋದದನವ್ವಾ !” ಎಂದು ಕೇಳಿದರು. ಪದ್ದಕ್ಕ ಬರುವದನ್ನು ನೋಡಿ ಅವಳ ಕಡೆಗೆ ನೋಡುತ್ತ

ಅಕ್ಕವ್ವ, " ನೀ ಒಬ್ಬಾಕಿನಽ ಬೇಕು " ಇಷ್ಟೇ ಅಂದಳು. ರಾಧಾಬಾಯರಿಗೆ ಅವಳ ಮಾತಿನ ಅರ್ಥ ತಿಳಿಯಿತು. ಅವರು ಪದ್ದಕ್ಕ ಹತ್ತಿರ ಬಂದದ್ದು ನೋಡಿ, " ಪದ್ದಕ್ಕಾ, ನರಸಕ್ಕನ ಮನಿಽಗೆ ಹೋಗಿ ಬರತೀರ್ಯಾ! ಉಡುಪಿ ಕೃಷ್ಣನ ಫೋಟೋ ಕೊಡತೇನಿ ಅಂತ ಹೇಳ್ಯಾಳ". ಪದ್ದಕ್ಕ ಮಾತಾಡದೇ ಹೊರಟು ಹೋದಳು.

ಎಷ್ಟೋ ಹೊತ್ತಾದರೂ ಯಾರೂ ಮಾತಾಡಲಿಲ್ಲ. ರಾಧಾಬಾಯರೇ ಅಂದರು " ಏನು ಹೇಳೋದದಽ"

ಅಕ್ಕವ್ವ ಮೇಲೆ ನೋಡುತ್ತ " ಅವ್ವಽ, ನನಗ ಬರಲಿಕ್ಕಿಲ್ಲ ಏನಽ ಈ ಕೆಲಸಽ ! " ಎಂದು ಕೇಳಿದಳು. ರಾಧಾಬಾಯರಿಗೆ ದಿಗಿಲು ಬಿತ್ತು. ಅಕ್ಕವ್ವ ಮತ್ತೆ ಕೇಳಿದಳು. " ಪದ್ದಕ್ಕ ನಿನ್ನ ಶುಶ್ರೂಷಾದ ಕೆಲಸಽ ಮಾಡತಾಳಽ. ನಾ ಮಾಡಲಾರೇನೇನಽ ಅವ್ವ !" ಅಕ್ಕವ್ವನದಿದು ಇಂದಿನ ಬೇಡಿಕೆಯಿದ್ದಿಲ್ಲ. ತನ್ನ ಮೋಲಿನ, ತನ್ನ ಮಗಳ ಪ್ರೇಮದ್ದೇ ಈ ಬೇಡಿಕೆಯೆಂದು ಕಂಡು ರಾಧಾಬಾಯರಿಗೆ ಕೌತುಕವೆನಿಸಿತು. ಆದರೆ ಅವಳ ಮುಖದ ಮೇಲೆ ಮೂಡಿದ ಗಾಂಭೀರ್ಯ ನೋಡಿ ಬೆರಗಾದರು. ಏನೋ ಒಂದು ಮಾತು ಕಟಿಯುತ್ತಿರಬೇಕೆಂಬದು ಸ್ಪಷ್ಟವಿತ್ತು. ಆದರೂ ಹಳ್ಳೊಗೆದು ನೋಡಬೇಕೆಂದು " ಅಕ್ಕವ್ವಾ, ಕೆಲಸ ಮಾಡಿದರಽ ಖರೇನಽ. ಇಲ್ಲೆ ಬಂದಽ, ಇದ್ದಽ ಆಗಲಿಲ್ಲೇನ ಮತ್ತ ! " ಎಂದು ನುಡಿದರು.

" ಅವ್ವಽ ನಾ ಇದ್ದಿದ್ದಿಲ್ಲ, ಪದ್ದಕ್ಕ ಬೇಕಾದ್ದೊ ಅನ್ನಽ. ಈಗ ನಾ ಒಂದೇನಽ ಆಕ್ಯಾಕ ಮತ್ತಽ! " ಅಕ್ಕವ್ವನ ದನಿ ಏರುತ್ತ ನಡೆದಿತ್ತು.

ರಾಧಾಬಾಯರು ನಡುಗಿದರು. ಇದೇನೋ ಹೊಸದಿರಬೇಕೆಂದು ಅವರಿಗೆ ಗೊತ್ತಾಯಿತು. ಅವರ ನಾಲಿಗೆ ಜಡವಾಗಹತ್ತಿತು. "ಛೇ! ಛೇ! ನಿನ್ನದಲ್ಲ ಬಿಡು ಕೆಲಸ ಅದು. ನನಗೇನು ಬೇಕು, ಏನು ಬ್ಯಾಡ ಗೊತ್ತಾಗೇದಕಿಗಽ. ಕಣ್ಣ ಸೊನ್ನಿಽಮ್ಯಾಲಽ ನಡದಿರತಽದ ನಂದೆಲ್ಲ ಕೆಲಸಽ. ಆಕಿ ಹೋದರಽ ನನ್ನ ಕೈ ಹೋದ್ಹಾಂಗ."

"ಅದಕ್ಕೆಷ್ಟೋತ್ತs ತಯಾರಾಗಲಿಕ್ಕೆs!"

"ಒಮ್ಮೆ ಹೇಳಿದರಾಗಲಿಲ್ಲೇನು ನಿಂಸಲ್ಲ ಆ ಕೆಲಸ ಅಂತ!" ರಾಧಾಬಾಯಿಯರು ಸಿಡಕತನದಿಂದ ಹೇಳಿದರು.

"ಅದ್ಯಾಕ ನನ್ನ ಕೆಲಸಲ್ಲ?"

"ಅಕ್ಕು, ನನಗ ತ್ರಾಸ ಕೊಡಲಿಕ್ಕೆ ಬಂದಿs ಏನು! ಒಮ್ಮೆ ಹೇಳಿಲ್ಲs! ಹತ್ತ ಸಾರೆ ಏನು ಕೇಳೋದು?" ರಾಧಾಬಾಯಿಯರು ಎಂದೂ ಹೀಗೆ ಮಾತಾಡಿದವರಲ್ಲ. ಅಕ್ಕವ್ವನೂ ಮಾತಾಡಿಸಿಕೊಂಡವಳಲ್ಲ. ಅವಳು ಅಳಹತ್ತಿದಳು. ಅವರಿಗೂ ಕೆಟ್ಟೆನಿಸಿ ಅವರೂ ಅಳಹತ್ತಿದರು. ತಾವೇ ಅವಳ ಸಮಾಧಾನ ಮಾಡತೊಡಗಿದರು. "ಅಕ್ಕು ಸುಮ್ಮ ನಾಗು. ನಾ ಹೀಂಗ್ಯಾಕ ಹೇಳಿದೆ ನನಗs ಗೊತ್ತು. ನನ್ನ ಜಡ್ಡು ದೇಶಕ್ಕೆ ಹೊರ್ತ ಅದ. ಕೆಲವ ಮಾತು ನಿನಗ ತಿಳಸ್ಲಿಕ್ಕೆ ಮನಸಾಗೋ ದಿಲ್ಲ. ನಿನಗ ತಿಳದರs ನಾ ಸತ್ತ ಹೋಗತೇನಿ."

"ಪದ್ದಕ್ಕಗೆ ಜನರೇನಂತಾರ ಗೊತ್ತದನs!" ರಾಧಾಬಾ ಯಿರು ಕಣ್ಣ ಮುಚ್ಚಿ ಮಲಗಿಕೊಂಡಿದ್ದರು. – "ಅಂಥಾs ಅಂತ ಅಂತಾರ" ಆನೇಲೆ ಅವಳು ತಾನು ಪ್ರತ್ಯಕ್ಷ ನೋಡಿದ್ದನ್ನೂ ಹೇಳೇ ಬಿಟ್ಟಳು.

"ಅಕ್ಕು ನನಗ ತಿಳಿಯೋದಿಲ್ಲs ಅಂತ ಮಾಡೀಯಾ ನಾನು ಕಂಣಾರೆ ನೋಡಿ ಸುಮ್ಮನಿದ್ದೇನಿ. ಪದ್ದಕ್ಕಂದೇನು ತಪ್ಪು ಪಾಪ! ಅವರದೂ ತಪ್ಪಲ್ಲ. ಹೌದು – ಈಗಿದೆಲ್ಲs ನಿನಗ ತಿಳೀಲಿಕ್ಕಿಲ್ಲ, ನಾ ಹೀಂಗ ಕಾಲ ಮುರುಕೊಂಡ ಬಿದ್ದಾಗs ಪದವಿ ವಯಸ್ಸಿತ್ತು. ಸಂದಶಿಂದ ಮಾಡಿಕೋಳಿಲ್ಲ. ನಾನೂ ಮಾತ ತಗೀಲಿಲ್ಲ. ನಾಳೆ ನೀನೂ ಮದಿವ್ಯಾದಂಪರ ನಿನಗೂ ಎಲ್ಲಾ ತಿಳದೀತು. ನಾನು ನಾನುs ನಾಚಿಗಿಲ್ಲದಾಕಿs ಅನ್ನು. ನಾನs ಹೀಂಗಾಗೋ ಹಾಂಗ ಮಾಡೇನಿ. ಏಕಾಂತ ಮಾಡಿಕೊಟ್ಟೇನಿ. ಪದ್ದಕ್ಕಗs ಸ್ಪಷ್ಟ ಎಲ್ಲಿ ಒಡದ ಹೇಳಿದೆ. ಆಕೀದೇನು ತಪ್ಪು? ನಾ ನಾಚಿಗ್ಗೇಡಿ, ಹೋಗು. ನನ್ಮಾರಿ ನೋಡಬ್ಯಾಡಾ. ನಾನು ಭ್ರಾಂಬ್ರ ಕುಲಬಾಗ

ಹುಟ್ಟಿಲ್ಲ. ಅಯ್ಯೋ ಅಯ್ಯೋ ''. ಮಾತಿನ ಈ ಆವೇಗವು ತಲೆಗೇರಿ ಅವರು ಸ್ಮೃತಿ ತಪ್ಪಿ ಬಿದ್ದರು. ಅಕ್ಕವ್ವ ಗಾಬರಿಯಾದಳು. ಏನು ಮಾಡಬೇಕೆಂಬುದು ತಿಳಿಯದಾಯಿತು.

ಪದ್ಮಕ್ಕ ನರಸಕ್ಕನ ಮನೆಯಿಂದ ಬಂದಳು. ಅವಳಿಗೆ ರಾಧಾಬಾಯರ ಸ್ಥಿತಿಯನ್ನು ನೋಡಿ ಏನೂ ಅನಿಸಲಿಲ್ಲ. ಚಟ್ಟನೇ ಪಿಚಕಾರಿಯಲ್ಲಿ ಔಷಧ ತುಂಬಿ, ಅವರ ಎದೆಗೆ ಚುಚ್ಚಿ ನಾಡಿಹಿಡಿದು ನೋಡ ಹತ್ತಿದಳು. ರಾಧಾಬಾಯರ ಮೈಮೇಲೆ ಸ್ಮೃತಿ ಬಂತು. ಆದರೂ ಅರಮರೆವು. ಅಕ್ಕವ್ವ ಹೌಹಾರಿದಾಕೆಯಾಗಿ ತನ್ನ ಕೋಣೆಗೆ ಹೋದಳು.

---

## ೧೧

## ಪ್ರತಿಜ್ಞೆ

ರಾಧಾಬಾಯರ ಮಾತಿನ ಪೂರ್ಣ ಅರ್ಥವೇನಿತ್ತೋ, ಅಕ್ಕವ್ವ ನಿಗಂತೂ ಹತ್ತಲಿಲ್ಲ. ಮದುವೆಯಾದ ಮೇಲೆ ತಿಳಿದೀತು. ರಾಧಾಬಾಯರದೇ ಪ್ರಮಾಣಸೂತ್ರ.

ಮದುವೆಯ ಸಂಬಂಧದ ಕಲ್ಪನೆಯೇ ಅವಳಿಗಿರುವದು ಶಕ್ಯವಿದ್ದಿಲ್ಲ. ಹೆಂಡತಿ, ಗಂಡನ ಆರಭಾರ ಹಿಡಿಯುತ್ತ, ಆತನ ದಿನಚರಿಯು ಸುಖಮಯವಾಗುವಂತೆ ಮಾಡುತ್ತ ದಿನಕಳೆಯುವದು, ಅವಳಿಗೆ ಗೊತ್ತಿದ್ದ ಮಾತಿತ್ತು. ಧೋತರದ ನೀರಿಗೆ ಹಾಕಿಡುವದು, ಚಹಾ ಮಾಡುವದು, ಕೈಕಾಲು ತೊಳಕೊಳ್ಳಲಿಕ್ಕೆ ನೀರಿಡುವದು, ಸ್ನಾನಕ್ಕೆ ನೀರು ತೋಡಿಡುವದು ಹೆಂಗಸರ ಕೆಲಸ. ಎಷ್ಟೋ ಹೆಂಗಸರು ದೊಡ್ಡ ಕಥೆಮಾಡಿ ಹೇಳುವರು.

ಮಧ್ಯಮವರ್ಗದ ಕುಟುಂಬಗಳಲ್ಲಿ ಒಬ್ಬ ಹೆಂಡತಿ ಇರುವಾಗ ಇನ್ನೊಬ್ಬಳನ್ನು ಮಾಡಿಕೊಂಡಿದ್ದ ಉದಾಹರಣೆಗಳು ಕಡಿಮೆ. ಬಹುತರವಾಗಿ ಮೊದಲಿನಾಕೆಯನ್ನು ಬಿಟ್ಟ ಮೇಲೆ ಎರಡನೆಯವಳು ಬರು

ವಳು. ಅಂದರೆ ಈಕೆಯ ಸಂಮತಿ ಬೇಕಿಲ್ಲ. ಒಂದೇ ಮನೆಯಲ್ಲಿರುವ ಪ್ರಸಂಗ ಬಂದರೆ ಸಮ್ಮತಿಯ ಪ್ರಶ್ನೆ ಬರುವದಿಲ್ಲ. ತಮ್ಮ ಹೊಟ್ಟೆಯಲ್ಲಿ ಮಕ್ಕಳಾಗದಿದ್ದರೆ ಗಂಡನ ಎರಡನೆಯ ಮದುವೆ ಮಾಡಿ,ಆಕೆಯ ಮಕ್ಕಳು ತನ್ನವೇ ಎಂದು ತಿಳಕೊಂಡು ಸಂತೋಷಪಡುವ ಹೆಂಗಸರೂ ಇರುವರು. ಪುಣೆಯಲ್ಲಿದ್ದಾಗ ಅವಳ ಒಬ್ಬ ಸುಶಿಕ್ಷಿತ ಗೆಳತಿಯದೊಂದು ವಿಚಿತ್ರವಾಗಿತ್ತು. ಅವಳು ಬಿ. ಎ ಪಾಸಾಗಿದ್ದಳು. ಅವಳ ಗಂಡ ಶುದ್ಧ ಅಕ್ಷರಶತ್ರು. ಆತನ ಕೂಡ ಆಯುಷ್ಯ ಕಳೆಯುವದು ತನಗಂತೂ ಅಶಕ್ಯ. ಪಾಪ ಆತನದೂ ಆಯುಷ್ಯಹಾನಿಯಾಗಬಾರದು. ಅದಕ್ಕಾಗಿ ತಾನೇ ಆತನ ಎರಡನೆಯ ಮದುವೆ ಮಾಡಿ, ತಾನು ಸ್ವತಂತ್ರಳಾದಳು. ಈಗ ಮನೆಯಲ್ಲಿ ನಡೆದದ್ದು ಶುದ್ಧ-ಶುದ್ಧ– ಅಕ್ಕವ್ವನ ಕೋಶದಲ್ಲಿ ಅದಕ್ಕೆ ಶಬ್ದವಿದ್ದಿಲ್ಲ. ಅಕ್ಕವ್ವನ ವಿಚಾರ ಈ ಮಟ್ಟಿಗೆ ಬರುವ ಹೊತ್ತಿಗೆ, ಎಲ್ಲಿಂದಲೋ ಮತ್ತೊಂದು ವಿಚಾರಪ್ರವಾಹ ತಿಳಿಯದೆ ಇದರಲ್ಲಿ ಕೂಡಿಬಿಟ್ಟಿತು. ಮದುವೆಯಾಗಬಾರದು – ಅಂಥಾಸ ಮಾತು ಯಾಕೆ ಕೇಳಬೇಕು! ಅಪ್ಪ ಹಟ ಹಿಡಿದರs! ನೋಡೋಣಂತೆ! ಈಗ ಯಾಕs!

ಆ ರಾತ್ರಿ ಅಕ್ಕವ್ವನಿಗೆ ನಿದ್ದೆ ಇದ್ದಿಲ್ಲ. ಕಣಿಗೆ ಕಣ್ಣು ಹತ್ತಲಿಲ್ಲ. ನಡುವೆ ಉಪರಿ ಹೋಗುವ ವಿಚಾರ, ಕನಸು – ಹೀಗೊಂದು ಸರ ಬೆಳಗಾಗುವವರೆಗೆ ನಡೆಯಿತು.

## ೧೨

# ಬಭ್ರುವಾಹನ ನಾಟಕ

ರಂಗಣ್ಣನ ನಾಟಕ ಒಮ್ಮೆ ರಂಗತಾಲೀಮಿನ ಹೊಸ್ತಿಲ ದಾಟಿ ರಂಗಭೂಮಿಗೆ ಒಂದುಮುಟ್ಟಿತು. ಅದರ ಸಂವಿಧಾನಕ ಕೆಳಗೆ ಹೇಳಿದಂತೇನೋ ಇತ್ತು.

× × × ×

" ಪಾಂಡವರ ಅಶ್ವಮೇಧದ ಕುದುರೆ ಮಣಿಪುರಕ್ಕೆ ಬಂದಾಗ ಅಲ್ಲಿಯ ತರುಣ ರಾಜನಾದ ಬಭ್ರುವಾಹನನು ಅದನ್ನು ಕಟ್ಟಿಹಾಕುವನು. ಆತನಿಗೆ ತಾನು ಅರ್ಜುನನ ಮಗನೆಂಬದು ಗೊತ್ತಿರುವದು. ಅರ್ಜುನನನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಕುದುರೆಯ ರಕ್ಷಣೆಗಾಗಿ ಅರ್ಜುನನು ಹೊರಟಿರಬಹುದೆಂದು ಬಭ್ರುವಾಹನನ ಮನಸ್ಸಿನಲ್ಲೂ ಬರುವದಿಲ್ಲ. ಕುದುರೆಯನ್ನು ಬಿಡುವ ಮೊದಲು ಪರಾಕ್ರಮ ತೋರಿಸದೇ ಬಿಡಬಾರದೆಂಬ ಹಂಬಲ ಆತನದು. ರಣಾಂಗಣದ ಮೇಲೆ ತಾನು ತೋರಿಸಿದ ಅತುಲಪರಾಕ್ರಮವನ್ನು ನೋಡಿ ಪಾಂಡವ ಸೇನೆಯು ಬೆರಗಾಗಿ ಈ ಸುದ್ದಿಯನ್ನು ಅರ್ಜುನನಿಗೆ ತಿಳಿಸದೇ ಇರುವದಿಲ್ಲ; ಆತನು ಎಲ್ಲಿದ್ದರೂ ಬಂದು ತನ್ನನ್ನು ಅಪ್ಪಿಕೊಂಡು ತನ್ನ ಪರಾಕ್ರಮದ ಕೌತುಕಮಾಡುವನು, ಇವೇ ಮೊದಲಾದ ಸುಖಸ್ವಪ್ನದಲ್ಲಿ ಬಭ್ರುವಾಹನನಿರುವನು.

ಹಿಂದಕ್ಕೊಮ್ಮೆ ಅರ್ಜುನ ತೀರ್ಥಾಟನಕ್ಕೆಂದು ಹೊರಟಿದ್ದ. ಹಾದಿಯಲ್ಲಿ ಮಣಿಪುರ ಹತ್ತಿತು. ಅಲ್ಲಿಯ ಅರಸನಾದ ಸತ್ಯವಾಹನನ ಮಗಳು ಚಿತ್ರಾಂಗದೆ. ಅರ್ಜುನನ ರೂಪ ನೋಡಿ ಮೋಹಿತಳಾದಳು. ಆತನು ವ್ರತಸ್ಥನಿದ್ದಾಗ್ಯೂ ಆತನನ್ನು ಮೋಹಗೊಳಿಸಿ ಗಾಂಧರ್ವವಿಧಿಯಿಂದ ತನ್ನನ್ನು ಸ್ವೀಕರಿಸಹಚ್ಚುವಳು. ಪುತ್ರಪ್ರಾಪ್ತಿಯಾದ ಕೂಡಲೆ ಅರ್ಜುನ ಮುಂದಿನ ದಾರಿ ಹಿಡಿಯುವನು. ಅರ್ಜುನ ಹೋದಂದಿನಿಂದ ಚಿತ್ರಾಂಗದೆಯು ರಾಜ್ಯವೈಭವವನ್ನೆಲ್ಲ ಬಿಟ್ಟುಕೊಟ್ಟು

ನಗರದಾಚೆಗೆ ಆಶ್ರಮ ಕಟ್ಟಿಕೊಂಡು ಸಂನ್ಯಾಸಿನಿಯಾಗಿ ಕಾಲಕಳೆಯುವಳು. ಅರ್ಜುನ ತನ್ನ ರೂಪಕ್ಕೆ ಮೆಚ್ಚಿದ, ತನ್ನನ್ನು ಸ್ವೀಕರಿಸಿದ; ಆದರೂ ಅದರಲ್ಲೆಲ್ಲ ತನ್ನದೇ ವಿಕಾರವಶತೆ ಅವಳಿಗೆ ಒಡೆದು ಕಾಣುತ್ತಿತ್ತು. ಅವಳು ತಪ್ಪಿ ಸಹ ಅರ್ಜುನನ ಸುದ್ದಿ ತನ್ನ ಮಗನೆದುರಿಗೆ ತೆಗೆಯುತ್ತಿದ್ದಿಲ್ಲ.

ಕುದುರೆಯ ರಕ್ಷಣೆಗಾಗಿ ಹಿಂಬಾಲಿಸಿದ ಸೈನ್ಯದ ಆಧಿಪತ್ಯ ಅರ್ಜುನನ ಕಡೆಗೆ ಇರುವದೆಂಬ ಸುದ್ದಿ ಚಿತ್ರಾಂಗದೆಗೆ ತಿಳಿದುಬರುವದು. ಅದನ್ನು ತನ್ನ ಮಗನಿಗೆ ಹೇಳುವದಿಲ್ಲ. ಯುದ್ಧಪ್ರಸಂಗ ಬರಬಾರದೆಂಬದು ಅವಳ ಮನಃಪೂರ್ವಕವಾದ ಇಚ್ಛೆ. ತಾನೇ ಈ ಮಾತು ಮುಗಿಸಬೇಕೆಂದು ಅರ್ಜುನನನ್ನು ಕಾಣಹೊರಡುವಳು. ಅರ್ಜುನ ತನ್ನ ಶಿಬಿರದಲ್ಲಿ ಕುಳಿತಿರುವನು. ಚಿತ್ರಾಂಗದೆಯನ್ನು ನೋಡಿ ಅವಳನ್ನು ಸನ್ಮಾನದಿಂದ ಸತ್ಕರಿಸುವನು. ಅವಳು ಬಂದ ಉದ್ದೇಶ ಕೇಳಿ ಅವಳನ್ನು ನಿಂದಿಸಿ, ಎದೆಗೆ ನೆಟ್ಟು ಪಾರಾಗುವಂಥ ಶಬ್ದಗಳನ್ನು ನುಡಿಯುವನು. ಚಿತ್ರಾಂಗದೆಯಾದರೂ ಸ್ವಾಭಿಮಾನದವಳು. ಅವಳು ಅರ್ಜುನನಿಗಿಷ್ಟೇ ಹೇಳುವಳು. ಅಶ್ವಮೇಧದ ಕುದುರೆಗೆ ಈವರೆಗೆ ಕ್ಷತ್ರಿಯನನ್ನು ಕಾಣುವ ಯೋಗವೇ ಬಾರದಿದ್ದರೆ ಮಣಿಪುರದಲ್ಲಿ ಆ ಯೋಗವು ನಿಶ್ಚಿತವಾಗಿ ಬರುವದು. ಬಭ್ರುವಾಹನನು ಕ್ಷಾತ್ರಬೀಜದವನಿದ್ದರೆ ಆತನ ತಾಯಿಯ ದೇಹದಲ್ಲೂ ಕ್ಷಾತ್ರರಕ್ತವೇ ಹರಿದಾಡುತ್ತಿರುವದು. ಮರುದಿನದ ಯುದ್ಧದಲ್ಲಿ ಬಭ್ರುವಾಹನನು ದುರ್ದೈವದಿಂದ ಮಡಿದರೆ ಆತನ ತಾಯಿ ಸೈನ್ಯದ ಆಧಿಪತ್ಯವನ್ನು ಸ್ವೀಕರಿಸುವಳು. ಕುದುರೆಗೆ ತನ್ನ ಸ್ವಾತಂತ್ರ್ಯ ಬೇಕಾದರೆ ಅದು ಬಭ್ರುವಾಹನನನ್ನಷ್ಟೇ ಗೆದ್ದರೆ ಸಿಗಲಾರದು! ಚಿತ್ರಾಂಗದೆಯ ವೀರಾವೇಶವನ್ನು ನೋಡಿ ಅರ್ಜುನನು ಬೆರಗಾಗುವನು.

ಮರುದಿನ ಯುದ್ಧರಂಗಕ್ಕೆ ಪ್ರಾರಂಭವಾಗುವದು. ಅರ್ಜುನ-ಬಭ್ರುವಾಹನ ಈ ವೀರರಿಬ್ಬರೂ ಸರಿಸಮಾನರು. ಪರಸ್ಪರರ ಸೈನ್ಯ

ನನ್ನು ದಿಕ್ಕಾಪಾಲು ಮಾಡಿಬಿಡುವರು. ಈ ದಿನ ಅರ್ಜುನನಿಗೆ ದೈವವೇ ಪ್ರತಿಕೂಲವಿತ್ತೋ ಏನೋ, ಬಭ್ರುವಾಹನನು ಆತನನ್ನು ನೋಡನೋಡುತ್ತ ರಥದಿಂದೆಳೆದು, ಆತನ ಪ್ರಾಣ ತೆಗೆದುಕೊಳ್ಳು ವದು ತನ್ನ ಕೈಯ್ಯಲ್ಲಿದ್ದಾಗ್ಯೂ ಆತನನ್ನು ಬಿಟ್ಟುಬಿಡುವನು. ಅಸ್ತ್ರಬದ್ಧನಾದ ಅರ್ಜುನನಿಗೆ "ಹೇ ವೀರ, ನನ್ನ ತಂದೆ ವೀರ ಶಿರೋಮಣಿಯಾದ ಅರ್ಜುನ ಜಗತ್ತಿನಲ್ಲಿರದಿದ್ದರೆ, ನಾನು ನಿನ್ನನ್ನೇ ಗುರುಸ್ಥಾನದಲ್ಲಿ ಸ್ಥಾಪಿಸಿ ನಿನ್ನ ಪೂಜೆ ಕಟ್ಟುತ್ತಿದ್ದೆ. ನಿನ್ನ ಪರಾಕ್ರ ಮಕ್ಕೆ ಸರಿಯಿಲ್ಲ. ರಣಾಂಗಣದಲ್ಲಿ ದೈವಬಲದ್ದೊ ಪರೀಕ್ಷೆ ಇರುವದು. ಹೋಗು. ನನ್ನ ತಂದೆಗೆ– ಆ ಧನಂಜಯನಿಗೆ ತಿಳಿಸು,– ನಿನ್ನ ಪುತ್ರನು ನಿನಗೆ ಅನುರೂಪನೇ ಆಗಿರುವನೆಂದು ಹೇಳು." ಇಷ್ಟೇ ಮಾತಾಡುವನು. ಅರ್ಜುನನಿಗೆ ಚಿತ್ರಾಂಗದೆಯ ಮಾತು ನೆನಪಿಗೆ ಬರುವದು. ಆತನು ಸಿಟ್ಟುಬೆಂಕಿಯಾಗಿ ಬಭ್ರುವಾಹನನ ಮೇಲೆ ಸಾಗಿ ಹೋಗುವನು, ಮೈಮರೆತು ಒದೆಯುವನು. ಬಭ್ರುವಾ ಹನನಿಗಿದನ್ನು ಸಹಿಸುವದು ಶಕ್ಯವಾಗಲಿಲ್ಲ. ಒಂದೇ ಬಾಣದಿಂದ ಅರ್ಜುನನ ತಲೆ ಚೂರ್ಣವಿಚೂರ್ಣವಾಗುವದು. ಅಷ್ಟರಲ್ಲಿ ಚಿತ್ರಾಂಗದೆಯು ಓಡಿ ಬರುವಳು. ತನ್ನ ಪತಿಯ ಪ್ರೇತವನ್ನು ನೋಡಿ ಶೋಕಸಾಗರದಲ್ಲಿ ಮಗ್ನಳಾಗುವಳು. ಬಭ್ರುವಾಹನನಿಗೂ ಎಲ್ಲ ಸಂಗತಿ ಗೊತ್ತಾಗಿ ದುಃಖಿತನಾಗುವನು. ಅವರಿಬ್ಬರೂ ಶೇಷನ ಆರಾಧನೆ ಮಾಡುವರು. ಶೇಷನು ಪ್ರಕಟನಾಗುವನು. ಸಂಜೀವನೀ ಮಣಿಗಾಗಿ ಈ ಇಬ್ಬರೂ ಬೇಡಿಕೊಳ್ಳುವರು. ಚಿತ್ರಾಂಗ ದೆಯು ತನ್ನ ತಪಸ್ಸನ್ನು ಶೇಷನಿಗೆ ಅರ್ಪಿಸಿದರೆ ಆತನು ಸಂಜೀವನೀ ಮಣಿ ಕೊಡಲೊಪ್ಪುವನು. ಪತಿವ್ರತೆಗೆ ಪತಿಯ ಹೊರ್ತು ಯಾವುದೂ ಬೇಕಿಲ್ಲ. ಚಿತ್ರಾಂಗದೆಯು ತತ್ಕ್ಷಣ ಶೇಷನ ಕೈಯಲ್ಲಿ ನೀರು ಬಿಡುವಳು. ಮಣಿಯ ಪ್ರಭಾವದಿಂದ ಅರ್ಜುನನೇಳುವನು. ಪಾಂಡವಸೈನ್ಯವು ಆನಂದದಿಂದ ನಗರವನ್ನು ಪ್ರವೇಶಿಸುವದು."

× × × ×

ರಂಗಸ್ಥಳದ ರಚನೆಯ ಬಗ್ಗೆ ಯಾವ ಪ್ರಕಾರದ ವೈಶಿಷ್ಟ್ಯವಿಲ್ಲದೇ ನಾಟಕವು ಪ್ರವೇಶ ಪ್ರವೇಶಕ್ಕೆ ಕಳೆಗಟ್ಟುತ್ತಲೇ ಬರುತ್ತಿತ್ತು. ನಟರಾದರೂ ತಮ್ಮ ತಮ್ಮ ಪರಿಯಿಂದ ಪ್ರತಿಯೊಂದು ಭೂಮಿಕೆಯ ಸ್ವಭಾವ ವಿಶೇಷವನ್ನು ವ್ಯಕ್ತಮಾಡುವ ಕ್ಲಪ್ತಿಯನ್ನು ಹುಡುಕಿಟ್ಟಿದ್ದರು.

ನಾಟಕಕ್ಕೆ ತಡವಾಗಿಯೇ ಪ್ರಾರಂಭವಾಯಿತು. ತುಸು ಹೊತ್ತಿನಲ್ಲಿಯೇ ಪ್ರೇಕ್ಷಕರ ಚಿತ್ತವೃತ್ತಿಯು ತಲ್ಲೀನವಾಗಿ ಒಂದೊಂದು ದೃಶ್ಯವೂ ಅವರ ಹೃದಯಕ್ಕೆ ವ್ಯಾಪ್ತವಾಗಿ ಸ್ಪರ್ಶಮಾಡ ಹತ್ತಿತು. ಬಭ್ರುವಾಹನನ ಬಾಲಸದೃಶವಾದರೂ ವೀರೋಚಿತ ನಿರ್ಭಯತೆ, ಚಿತ್ರಾಂಗದೆಯ ನಿರ್ವಿಕಾರವಾದರೂ ಗೂಢತಮ ಮನೋವೃತ್ತಿ, ಅವಳ ಮೇಲಿನ ಅರ್ಜುನನ ಆದರಪೂರ್ಣವಾದ ಪ್ರೇಮ, ಮುಂತಾದವುಗಳ ಒಂದೊಂದು ಭಾವಚಿತ್ರವನ್ನು ನೋಡುವಾಗ ಸಭಾಗೃಹವೆಲ್ಲ ತಟಸ್ಥ ಕುಳಿತಿತ್ತು. ನಡುನಡುವೆ ಹಾಸ್ಯರಸಕ್ಕೂ ಅನುವಿಟ್ಟಿದ್ದರಿಂದ ಗುರುಭಟ್ಟರ ಕೌಶಲ್ಯಕ್ಕೂ ಸಂಪೂರ್ಣ ಆಸ್ಪದವಿತ್ತು.

ಈ ದಿನ ಸೋಮನಾಥಪುರವೇ ಸಭಾಗೃಹಕ್ಕೆ ಬಂದುಬಿಟ್ಟಿತ್ತು. ಸರಸೂ, ದ್ವಾರಿ, ಯಮುನಿ ಈ ಮೂವರು ಬಂದಿದ್ದರು. ಬಾಬಣ್ಣಾ ಅರ್ಜುನನ ಭೂಮಿಕೆ ವಹಿಸಿದ್ದ. ಯಮುನಿಯ ಗಂಡ - ಹೆಸರು ಹೇಳದಿದ್ದರೂ ನಡೆಯುವದು - ಚಿತ್ರಾಂಗದೆಯ ಭೂಮಿಕೆಯಲ್ಲಿ ರಂಗದೇವತೆಯನ್ನು ನಾಚಿಸುವವನಿದ್ದ. ಗುಟ್ಟಿನ ಗೆಳತಿಯರಿಗೆ ಮಾತಾಡುವದಕ್ಕಾಯಿತು, ನಗುವದಕ್ಕಾಯಿತು, ಕಾರಣ ಬೇಕೇ ಬೇಕು ಹೀಗಿಲ್ಲ. ಅದರೊಳಗೆ ಅರ್ಜುನ ಚಿತ್ರಾಂಗದೆಯರು ಪರಿಚಯದವರು. ಹಾಸ್ಯದ ಬಾಣಗಳು ಮುಗಿಲು ಮುಟ್ಟಿದರೂ ಆಶ್ಚರ್ಯದ ಮಾತಲ್ಲ. ಪದ್ದಕ್ಕನೂ ಈ ದಿನ ರಾಧಾಬಾಯಿಯರನ್ನು ನಾಲ್ಕು ನಾಲ್ಕು ಸಾರೆ ಕೇಳಿಕೊಂಡು ನಾಟಕ ನೋಡಲಿಕ್ಕೆ ಬಂದಿದ್ದಳು.

ನಾಟಕಕ್ಕೆ ಕಳೆ ಏರಿತ್ತು. ಚಿತ್ರಾಂಗದೆಯು ಅರ್ಜುನನ

ಶಿಬಿರಕ್ಕೆ ಬಂದಿದ್ದಳು. ಆದರ, ಪ್ರೇಮ ಕ್ಷಣಿಕಸಂಮೋಹ ಮುಂತಾದ ಅನೇಕ ವಿಕಾರಗಳ ಸುಳಿವಿನಲ್ಲಿ ಅರ್ಜುನನು ಹಾಗೇ ನಲಿದಾಡುತ್ತಿದ್ದ. ಅಷ್ಟರಲ್ಲಿ –

ಬರುಗಾಳಿ ಸುತ್ತುಮುತ್ತಲಿನ ಕಸಕಡ್ಡಿಯನ್ನೆಟ್ಟಿಕೊಂಡು ನಾಟಕದ ಮಂಟಪದಲ್ಲಿ ಹೊಕ್ಕುಬಿಟ್ಟಿತು. ಪ್ರೇಕ್ಷಕರದೊಂದೇ ಗೊಂದಲವೆದ್ದಿತು. ಪರದೆಗಳು ಹಾರಹತ್ತಿದುವು. ಇನ್ನು ಮುಂದೆ ಥಿಯೇಟರಿಲ್ಲದ ಊರಲ್ಲಿ – ಅಂದರೆ ಸೋಮನಾಥಪುರದಲ್ಲಿ, ನಾಟಕವನ್ನೇ ಆಡಬಾರದೆಂದು ನಟರು ನಿಶ್ಚಯಿಸಿದರು. ಗುರುಭಟ್ಟರು ಮಾತ್ರ ಆದೇಕ್ಷಣಕ್ಕೆ ಊರಲ್ಲಿ ಒಂದು ಕಾಯಂ ಥಿಯೇಟರ ಕಟ್ಟುವ ನಿಶ್ಚಯಮಾಡಿ ಅದಕ್ಕಾಗಿ ಕಾಯಂ ಪಟ್ಟಿ ಎತ್ತುವದೊಂದು ಯೋಜನೆಯನ್ನು ಸಹ ತಮ್ಮ ಮನಸ್ಸಿನಲ್ಲಿ ಮಾಡಿಕೊಂಡರು. ಗಾಳಿ ಕಡಿಮೆಯಾಗಿ ನಾಟಕವೂ ಮುಂದೆ ಸಾಗಿತು. ಪ್ರೇಕ್ಷಕರೂ ಎಲ್ಲವನ್ನು ಮರೆತುಬಿಟ್ಟು ಪುನಃ ನಾಟಕದ ಪ್ರವಾಹದಲ್ಲಿ ಕೂಡಿಬಿಟ್ಟರು. ಪದ್ದಕ್ಕನ ಮನಸ್ಸೇನೊಮ್ಮೆ ಚಲವಿಚಲವಾಯಿತು,– ಅದೇ. ಮನೆಗೆ ಹೋಗಿಬಿಡಬೇಕೆಂದು ಮನಸ್ಸಿನಲ್ಲಿ ಬಂದುಬಿಟ್ಟಿತು. ವಿಚಾರ ಬಂದದ್ದೊಂದೇ ತಡ, ಎದ್ದೇ ಬಿಟ್ಟಳು. ಮಂಟಪದ ಹೊರಗೆ ಬಂದು ನೋಡುತ್ತಾಳೆ, ಸುತ್ತಲೂ ಕತ್ತಲೆಯ ಕಾಡಿಗೆ ಮುಸುಕಿ ಹೋಗಿತ್ತು. ಮೈ ಬೆವರಿತು. ಆದರೂ ಒಮ್ಮೆ ಎಲ್ಲರ ಮನಸ್ಸು ಮುರಿದು ಹೊರಬಿದ್ದಮೇಲೆ ತಿರುಗಿ ಹೋಗುವದೆಂದರೆ ಸ್ವಲ್ಪ ನಾಚಿಕೆಯ ಮಾತೇ ಸರಿ! ಹಾಗೇ ಕಣ್ಣು ಮುಚ್ಚಿ ನಡೆದಳು. ಒಂದೆರಡು ಕೂಗಳತೆಯವರೆಗೆ ಹೋಗಿರಬಹುದಷ್ಟೇ. ಮಳೆರಾಜ ಬಂದೇ ಬಿಟ್ಟ. ಪದ್ದಕ್ಕ ಉಡಿಗಚ್ಚಿ ಕಟ್ಟಿಕೊಂಡು ಓಡಿ ಓಡಿ ಯಾವದೋ ಒಂದು ಮನೆಯ ಆಸರಕ್ಕೆ ನಿಂತಳು. ಮೈಯೆಲ್ಲ ತೊಯ್ದು ಹೋಗಿತ್ತು.

ಚಮತ್ಕಾರಿಕ ಪರಿಸ್ಥಿತಿಯೇ ಇದು. ಯಾರ ಮನೆಯೋ – ಹಗಲಲ್ಲ; ಸಮಾಧಾನ. ಆದರೂ ಇಂಥ ಕತ್ತಲೆಯೆಂದರೆ ಭೂತ

ಪಿಶಾಚಿಗಳಿಗೆ ದೊಡ್ಡ ಹಬ್ಬ. ಈ ವಿಚಾರದಿಂದ ಪದ್ಮಕ್ಕನ ಹಲ್ಲು ಕಟಕಟ ಗರಿಸಹತ್ತಿದವು.

ಮನೆಯ ಕಡೆಗೆ ಒಂದು ಆಕೃತಿ ಬರಹತ್ತಿತ್ತು. ಏನು ಮಾತ ಬೇಕು! ಪದ್ಮಕ್ಕ ಗಾಬರಿಯಾಗಿ ಚೀರಿಬಿಟ್ಟಳು. ಆ ಆಕೃತಿಗೂ ಅಂಜಿಕೆಯೆನಿಸಿರಬೇಕು. ಪದ್ಮಕ್ಕನ ಮೋರೆಯ ಮೇಲೆ ವಿದ್ಯುದ್ದೀಪದ ಬೆಳಕು ಬಿತ್ತು. "ಯಾರವರು?" ದನಿಯೂ ಕೇಳಬಂತು. ದನಿಯ ಗುರ್ತು ಹತ್ತಿದಂತೆನಿಸಿತು. ಆದರೂ ಪದ್ಮಕ್ಕನ ಕಂಣೆದುರಿಗಿದ್ದ ಕಾಡಿಗೆಯಲ್ಲಿ, ಅರಿಷಣ – ಕುಂಕುಮ ಕೂಡಿ ಅವಳು ನೆಲಕ್ಕೆ ಉರುಳಿದಳು. ದೀಪದ ಬೆಳಕಿನಲ್ಲಿ ಆಕೃತಿಗೆ ಪದ್ಮಕ್ಕನ ಗುರ್ತು ಸಿಕ್ಕಿತು. "ಹಾಂ – ಹಾಂ – ಗಾಬರ್ಯಾಗ ಬ್ಯಾಡ್ರಿ –". "ಡಾಕ್ಟರರs –" ಎಂದು ಪದ್ಮಕ್ಕ ಪ್ರಯಾಸದಿಂದ ಕೇಳಿದಳು. ಬಾಗಿಲ ತೆರೆಯಿತು. ಡಾಕ್ಟರರು – ಅಂದರೆ ಡಾ. ಭುಜಂಗರಾಯರು ಅವಳನ್ನೆಬ್ಬಿಸಿ ಮನೆಯೊಳಗೆ ಕರಕೊಂಡುಹೋದರು.

ಡಾಕ್ಟರರೂ ನಾಟಕ ನೋಡಲಿಕ್ಕೆ ಹೋಗಿದ್ದರು. ಮಳೆ ಬಂದು ನಾಟಕ ನಡುವೇ ಇತಿಸಮಾಪ್ತವಾದ್ದರಿಂದ ಇತರ ಪ್ರೇಕ್ಷಕರಂತೆ ಅವರೂ ನಿರಾಶೆಯಿಂದ ತಿರುಗಿ ಬರಬೇಕಾಯಿತು. ಮನೆಯಲ್ಲಿ ದೀವಿಗೆ ಹಚ್ಚಿದ ಮೇಲೆ, ಅದರ ಪ್ರಕಾಶದಲ್ಲಿ ಪದ್ಮಕ್ಕನ ಸೀರೆ ಇಡೀ ಒದ್ದೆಯಾದದ್ದು ಅವರ ದೃಷ್ಟಿಗೆ ಬಿತ್ತು. ಅವರು ತಟ್ಟನೇ ಒಳಗಿನಿಂದ ಒಂದು ದೋತರವನ್ನು ತಂದು " ಹೂಂ – ಆ ಒದ್ದಿs – ಬಿಟ್ಟು ಇದನ್ನ ಉಟಕೊಳ್ರಿ" ಎಂದು ಹೇಳಿ ಆ ದೋತರವನ್ನು ಅವರ ಮುಂದೆ ಇಟ್ಟು ಒಳಗೆ ಹೊರಟುಹೋದರು. ಪದ್ಮಕ್ಕ ದೋತರವನ್ನಂತೂ ಉಟ್ಟುಕೊಂಡಳು. ಸೀರೆಯನ್ನು ಅಲ್ಲಿಯೆ ಆರ ಹಾಕಿದಳು. ಆದರೂ ಏನೋ ವಿಚಾರಮಾಡುತ್ತ ಎಷ್ಟೋ ಹೊತ್ತಿನ ವರೆಗೆ ಹಾಗೇ ನಿಂತುಕೊಂಡಿದ್ದಳು.

ಡಾಕ್ಟರರ ಮದುವೆಯಾಗಿದ್ದಿಲ್ಲ. ಮನೆಯೊಳಗೆ ಹೆಂಗಸರೂ ಯಾರಿದ್ದಂತೆ ತೋರಲಿಲ್ಲ. ಹೊರಗೂ ಯಾರೂ ಬರಲಿಲ್ಲ. ಡಾಕ್ಟ

ರರು ಅಗ್ಗಿಷ್ಟಿಗೆ ಹೊತ್ತಿಸುವುದರಲ್ಲಿ ತೊಡಗಿದ್ದರು. ಹೊತ್ತಿದ ಅಗ್ಗಿಷ್ಟಿಗೆಯನ್ನು ಅವಳ ಮುಂದಿಟ್ಟು " ಮೈ ಕೈ ಕಾಸಿಕೊಳ್ರಿನ್ನs – " ಎಂದು ಹೇಳಿ ಮತ್ತೆ ಒಳಗೆ ಹೋಗಿಬಿಟ್ಟರು. ತಮ್ಮಿಂದ ಅವಳಿಗೇನೂ ಸಂಕೋಚವೆನಿಸಬಾರದೆಂಬದೇ ಅವರ ಉದ್ದೇಶ. ಪದ್ದಕ್ಕ ಮೈ ಕೈ ಕೂದಲ ಒಣಗಿಸಿಕೊಳ್ಳುತ್ತ ಮುಂದಿದ್ದ ಬೆಂಕಿಯ ಕಡೆಗೆ ಶೂನ್ಯ ದೃಷ್ಟಿಯಿಂದ ನೋಡುತ್ತ ಹಾಗೇ ಕುಳಿತಿದ್ದಳು. ಡಾಕ್ಟರರು ಒಂದೆರಡು ಸಲ ಅವಳನ್ನು ಮಾತಾಡಿಸಬೇಕೆಂದು ಬಂದು ಹಾಗೇ ತಿರುಗಿ ಒಳಗೆ ಹೋಗಿದ್ದರು. ಕೊನೆಗೊಮ್ಮೆ ಏನೋ ಮನಸ್ಸಿನ ನಿರ್ಧಾರ ಮಾಡಿ " ಒಳಗs ಒಲ್ಯಾಗ ಚಹಾ ಆಗೇದs – ಇದ ನೋಡ್ರಿ. ಮನಿ ಅಂತs ತಿಳಕೊಂಡು ಸಂಕೋಚ ಅಂತs ಮಾಡಿಕೊಬ್ಯಾಡ್ರಿs"ಎಂದು ಹೇಳಿ ಮಾತು ಮುಗಿಸಿದರು.ಪದ್ದಕ್ಕ ಅವರ ಮಾತಿನ ಕಡೆಗೆ ಲಕ್ಷ್ಯ ಕೊಡಲೇ ಇಲ್ಲ. ಹೊರಗೆ ಇನ್ನೂ ಮಳೆ ನಡೆದೇ ಇತ್ತು. ಇಲ್ಲಿಂದ ಮನೆಗೆ ಯಾವಾಗ ಹೋಗಿ ಬಿದ್ದೇನೋ ಎಂದು ಅವಳಿಗಾಗಿ ಹೋಗಿತ್ತು. ಏನೋ ಒಂದು ವಿಚಾರ ಮಾಡಿ ಒಳಗಂತೂ ಹೋದಳು.

ಡಾಕ್ಟರರು ಅವಳ ಮುಂದೆ ಚಹಾದ ಕಪ್ ಇಟ್ಟು ತಾವೂ ಅಲ್ಲಿಯೇ ಚಹಾ ಕುಡಿಯುತ್ತ ಕುಳಿತುಕೊಂಡರು. ಒಘದಿಂದ ಮಾತಿಗೂ ಪ್ರಾರಂಭವಾಯಿತು. ಪದ್ದಕ್ಕ ತಾನು ನಾಟಕ ನೋಡ ಲಿಕ್ಕೆ ಹೋದದ್ದು, ಮಳೆ ಬರುವುದರೊಳಗಾಗಿ ಮನೆಗೆ ಮುಟ್ಟಬೇಕೆಂದು ಹೊರಟದ್ದು, ಹಾದಿಯಲ್ಲಿಯೇ ಮಳೆ ಬಂದದ್ದರಿಂದ ಈ ಮನೆಯ ಆಸರಕ್ಕೆ ನಿಂತದ್ದು ಇತ್ಯಾದಿ.... ಎಲ್ಲ ಹೇಳಿದಳು. ಡಾಕ್ಟರರೂ ನಾಟಕದಿಂದ ತಿರುಗಿ ಬಂದವರೇ. ಮುಂದೆ ಅಂಗಾರರಾಯರ ಮನೆಯ ಮಾತು ನಡೆದುವು. ಏನೂ ಪ್ರ್ಯಾಕ್ಟಿಸಿಲ್ಲದಾಗ ಅಂಗಾರರಾಯರಂಥ ಕುಳ ಸಿಕ್ಕರೆ ಯಾರ ಬಾಯಿಗೂ ನೀರು ಬಿಡುವುದೇ.

ಈಗ ಪದ್ದಕ್ಕನ ಮನಸ್ಸೂ ಸ್ವಲ್ಪ ಸ್ಥಿರವಾಗಿತ್ತು. ಅವಳೂ ಮನ ಬಿಚ್ಚಿದಳು. ಬಾಯರ ಜಡ್ಡಿನ ಮಾತಾಯಿತು. ಅಮೇಲೆ ಅಂಗಾರರಾಯರ ಸ್ವಭಾವ, ಅಕ್ಕವ್ವ, ಮನೆಯಲ್ಲಿಯ ವ್ಯವಸ್ಥೆ, ಹೀಗೆ

ಒಂದರ ಮೇಲೊಂದು ನಡೆದುಬಿಟ್ಟವು. ಸಡುಸಡುವೆ ಮಳೆ ನಿಂತಿದ್ದರೆ ಹೋಗಿ ಬಿಡಬೇಕೆಂತಲೂ ಅನಿಸಿ, ಬಾಗಿಲ ಕಡೆಗೆ ಆತುರತೆಯಿಂದ ಪದ್ದಕ್ಕ ಎಷ್ಟೋ ಸಲ ನೋಡಿದಳು. ಮಳೆರಾಜನಿಗೆ ಈವೊತ್ತು ಆಗ್ರಹದ ಔತಣವೇ ಇದ್ದಿರಬೇಕು—ಪ್ರಲಯಕಾಲವೇ ಸಮಿಾಪಿಸಿತೋ. ಏನೋ ಎಂಬಂತೆ ಚಪ್ಪರ ಬಾಗಿಲುಗಳು ಅದುರಿ ಅದುರಿ, ಗಾಳಿಗೋ ಏನೋ ದೀಪ ಆರಿತು.

ದೀಪ ಆರಿದಕೂಡಲೇ ಇಬ್ಬರಿಗೂ ವಿಚಿತ್ರವೆನಿಸಹತ್ತಿತು. ದೀಪ ಹತ್ತಿ ಬೆಳಕು ಯಾವಾಗ ಬಿದ್ದೀತೋ ಎಂದು ಇಬ್ಬರ ಮನಸ್ಸಿನಲ್ಲೂ ಬಂತು. ಇಬ್ಬರೂ ದೀಪದ ಪೆಟ್ಟಿಗೆಗಾಗಿ ತಮ್ಮತಮ್ಮ ಸುತ್ತಮುತ್ತ ಕೈಯಾಡಿಸಹತ್ತಿದರು. ಎಲ್ಲಿಯೋ ಸಪ್ಪಳವಾಗುತ್ತಿತ್ತು. ಒಮ್ಮೆ ಪದ್ದಕ್ಕನ ಕೈ ಮೇಲೆ ಡಾಕ್ಟರರ ಕೈ ಬಿತ್ತು. ಅವಳದನ್ನು ಅವಸರದಿಂದ ತೆಗೆದುಕೊಂಡಳು. ಹೇಗೋ ಏನೋ ಗಲ್ಲಕ್ಕೆ ಎರಡು ತುಟಿಗಳ ಮೃದುವಾದ ಸ್ಪರ್ಶವಾದಂತೆ ಭಾಸವಾಯಿತು. ಎದೆ ಹಾರಹತ್ತಿತು. "ಡಾಕ್ಟರ, ಏನು ಅವಿಚಾರs–" ಎಂದು ನುಡಿದುಕೊಂಡಳು. ಮುಂದಿನ ಕ್ಷಣಕ್ಕೆ ಡಾಕ್ಟರರ ಎದೆಯಲ್ಲಿ ನಡೆದ ಧಾಡ ಧಾಡ ಎಂಬ ಸಪ್ಪಳ ಅವಳ ಕಿವಿಗೆ ಸ್ಪಷ್ಟವಾಗಿ ಕೇಳಬಂತು.

* * * * * *

ಬೆಳಿಗ್ಗೆ ಚಹಾ ಮುಗಿಸಿಕೊಂಡು ಪದ್ದಕ್ಕ ಏಳು ಗಂಟೆಗೆ ಮನೆಗೆ ಬಂದು ಮುಟ್ಟಿದಳು.

---

## ೧೩

# ಮಾವಿನ ತೋಪಿನಲ್ಲಿ ದೀವಿಗೆ

ಎಷ್ಟೋ ವರ್ಷಗಳ ಮೇಲೆ ಒಮ್ಮೆ ಮಾವಿನ ತೋಪಿನಲ್ಲಿ ದೀವಿಗೆ ಹತ್ತಿತು. ಬಾಯರು ಇಲ್ಲಿಯೇ ಇದ್ದು ಬಿಡಬೇಕೆಂದು ನಿಶ್ಚಯಿಸಿದ್ದರು. ಕುಲಕರ್ಣಿ ಗೋಪಣ್ಣ, ಮನೆ " ಸಾರಿಸಿ ಉಡಗಿಸಿ" ಇಟ್ಟಿದ್ದ. ಅಡಿಗೆ ಸಹ ಬಾಯರ ಹಾದಿಯನ್ನೇ ನೋಡುತ್ತಿತ್ತು.

ಎತ್ತಿನ ಬಂಡಿ ಬೆಳಿಗ್ಗೇ ಸ್ಟೇಶನ್ನಿಗೆ ಬಂದು ನಿಂತಿತ್ತು. ಬಾಯರು ತೋಪಿಗೆ ಬಂದು ಮುಟ್ಟಬೇಕಾದರೆ ರಾತ್ರಿಯ ಒಂಬತ್ತು ಗಂಟೆಯಾಯಿತು. ಬಂಡಿಯಿಂದ ಕೆಳಗಿಳಿದ ಕೂಡಲೇ ಅವರು ತಮಗಾಗಿ ತಯಾರ ಮಾಡಿಟ್ಟ ಕೋಣೆಯ ಕಡೆಗೆ ನಡೆದರು. ಗೋಪಣ್ಣ ಆಳುಮಕ್ಕಳೊಂದಿಗೆ ಸಾಮಾನು ಇಳಿಸಿಕೊಂಡ.

ಬಾಯರ ಸಂಗಡ ಅವರ ಅಡಿಗೆಯಾಕೆ ಶಾರದಮ್ಮನೂ ಬಂದಿದ್ದಳು ಕೋಣೆಯಲ್ಲಿ ಕಾಲಿಟ್ಟ ಕೂಡಲೇ ಬಾಯರ ಕಾಲಲ್ಲಿಯ ಚಪ್ಪಲಿಗಳನ್ನು ಶಾರದಮ್ಮ ಒರಸಿಟ್ಟಳು. ಬಾಯರು ಪಲ್ಲಂಗಿನ ಮೇಲೆ ಬಿದ್ದುಕೊಂಡರು.

" ಶಾರಕ್ಕ, ಎಲ್ಲಿ ಇಲ್ಲೆ ತರಲಿಕ್ಕೆ ಹೇಳು. " ಶಾರದಮ್ಮ ಹೊರಟಳು. " ಇದು ನೋಡು. ಬರತs ತುಪ್ಪ ತೊಗೊಂಡು ಬಾ ಒಟ್ಟಲದಾಗ. " ಬಾಯರು ಕಣ್ಣು ಮುಚ್ಚಿಕೊಂಡಿದ್ದರು. ಶಾರದಮ್ಮ ತುಪ್ಪ ತೆಗೆದುಕೊಂಡು ಬಂದು ಅದನ್ನು ಅವರ ಕಾಲಿಗೆ ತೊಡೆಯುಹತ್ತಿದ್ದಳು.

" ನೋಡಿದ್ಯಾ ಒಮ್ಮೆ ನಮ್ಮ ತ್ವಾಟs ! " ಬಾಯರು ನಕ್ಕು ಶಾರದಮ್ಮನಿಗೆ ಕೇಳಿದರು.

" ತ್ವಾಟs ಇದು ! ಅರಮನಿಕನ್ನೆಪ್ಪ ! " ಶಾರದಮ್ಮ ಬಾಯಿ ತುಂಬಾ ಅಂದಳು.

"ಹಾಂಗಾರೇನು ! ಪುಣೆದಾಗ ಆ ಗೇಣಿ ಗುಡಸಲಿತ್ತಲ್ಲ, ಅಷ್ಟಿದ್ದೀತೊಂತ ಮಾಡಿದ್ದೇನು !"

"ತೋಪಂದರ ಮನೀಂತ ಹ್ಯಾಂಗ ತಿಳೀಬೇಕು !"

ಶಾರದಮ್ಮನ ಹಲ್ಲಿನ ಬೆಳಕು ಬಿತ್ತು. ಬಾಯರ ಮೋರೆಯ ಮೇಲೆ ಒಂದು ಅಭಿಮಾನದ ನಗೆ ಮೂಡಿತು. ಅವರು ಶಾರದಮ್ಮನಿಗೆ "ಸಾಕು. ಕಾರಕೂನರಿಗೆ ಬಂದು ಹೋಗಲಿಕ್ಕೆ ಹೇಳು" ಎಂದು ಹುಕುಮು ಮಾಡಿದರು. ಗೋಪಣ್ಣ ಬಂದು ಕೈಜೋಡಿಸಿ ನಿಂತುಕೊಂಡ.

"ವಕೀಲರಿಗೆ ಪತ್ರ ಬರೀರಿ. ಪುಣೆದಾಗ ನಮ್ಮ ಕೂಡ ತೊಗೊಂಬೋದೆಲ್ಲ ತೀರಿಸರಿಂತ. ಇನ್ನೇನಲ್ಲಿ ಮನಿ ಬ್ಯಾಡಾ. ಬಾಡಿಗೀ ಅಂಥಾದು ಇಂಥಾದು ಎಲ್ಲ ಕೊಟ್ಟು ಲೆಕ್ಕ ತಿಳಿಸಲಿಕ್ಕೆ ಹೇಳ್ರಿ." ಗೋಪಣ್ಣ ತಲೆ ಬಾಗಿಸಿ "ಹಾಂಗ ಮಾಡತೇನಿ" ಎಂದ ಕೂಡಲೆ ಬಾಯರು ಆತನಿಗೆ ನಕ್ಕು ಅಪ್ಪಣೆಕೊಟ್ಟು, ಊಟಉಡಿಗೆ ಮುಗಿಸಿ ಅಲ್ಲಿಯೇ ಮಲಗಿಕೊಂಡರು. ಪ್ರವಾಸದ ಶ್ರಮ. ಶಾರದಮ್ಮನೂ ಅಲ್ಲಿಯೇ ನೆಲದ ಮೇಲೆ ಮಲಗಿಕೊಂಡಳು.

ಮಾವಿನತೋಪಿನ ಬಾಯರೆಂದರೆ ವಿದ್ಯಾಲಂಕಾರ ವೇ. ಮೂ. ಶ್ರೀಪಾದಶಾಸ್ತ್ರಿಗಳ ಮೂರನೆಯ ಸಂಬಂಧದ ಮನೆಯವರು. ಅವರು ಹುಟ್ಟಿದ್ದು ಘನವಂತರ ಮನೆತನದಲ್ಲಿ. ಸಂಸ್ಕೃತ ಭಾಷೆಯೆಂದರೆ ಅವರ ಮಾತೃಭಾಷೆಯೇ ಆಗಿತ್ತು. ಕಾಶಿ, ಪ್ರಯಾಗ, ತಂಜಾವೂರು ಮುಂತಾದ ಸಂಸ್ಕೃತಭಾಷೆಯ ಕೇಂದ್ರಗಳಲ್ಲಿ ಕೂಡ ವಿದ್ವಾಂಸರಿಂದ ಬಹುಮಾನ ಪಡೆದಿದ್ದರು. ಪ್ರಾಚ್ಯವಿದ್ಯಾಸಂಶೋಧನ ಕಾರ್ಯದಲ್ಲಿ ಒಳ್ಳೆಯ ಆಸ್ಥಾವಂತರು. ಪುಣೆಯಲ್ಲಿ ಪ್ರಾಚೀನ ಗ್ರಂಥಸಂಗ್ರಹವುಳ್ಳ ಆನಂದಾಶ್ರಮಸಂಸ್ಥೆ ಅವರಿಗೆ ತವರುಮನೆಯಾಗಿತ್ತು. ಇತ್ತೀಚೆಗೆ ಭಾಂಡಾರಕರ ಸಂಸ್ಥೆಯೊಂದು.

ಶಾಸ್ತ್ರಿಗಳವರಿಗೆ ಮಕ್ಕಳಿರಲಿಲ್ಲ. ಏನೋ ಹರಿ ಹರಿ ಅನ್ನುತ್ತ, ತಮ್ಮ ವ್ಯಾಸಂಗ ನಡಿಸುತ್ತ, ಆಯುಷ್ಯದ ಚರಮಗೀತೆಯನ್ನು

ಯಾವುದಾದರೊಂದು ಏಕಾಂತವಾಸ-ಯಾವುದಾದರೊಂದು ಜನ
ವಸ್ತಿಯಿಂದ ದೂರವಿದ್ದ ಸ್ಥಳ-ದಲ್ಲಿ ಹಾಡಿ ಮುಗಿಸಬೇಕೆಂದು
ಮಾಡಿ ಮಾವಿನ ತೋಪು ಕೊಂಡರು. ಪರಿವಾರವಾದರೂ ದೊಡ್ಡ
ದಲ್ಲ. ತಾವು, ತಮ್ಮ ಎರಡನೆಯ ಸಂಬಂಧದ ಮನೆಯವರು. ಏನಾ
ದರೂ ಮಾಡಿದ್ದಕ್ಕೊ ಓಂ ಬರಬೇಕು. ಮಾವಿನತೋಪು ಕೊಂಡು
ವರ್ಷ ಮೀರಲಿಲ್ಲ. ಮನೆಯವರು ಅವರನ್ನು ಸಂಸಾರದಲ್ಲಿ ಬಿಟ್ಟು
ತಾವು ಮುಂದೆ ನಡೆದುಬಿಟ್ಟರು. ಶಾಸ್ತ್ರಿಗಳಿಗೆ ಯಾತರಲ್ಲೂ ಉಲ್ಲಾಸ
ವುಳಿಯದೆ, ಅವರು ಪುಣೆಯಲ್ಲಿಯೇ ಮನೆ ಮಾಡಿಕೊಂಡಿರಹತ್ತಿದರು.
ಅವರ ವಠಾರದಲ್ಲಿಯೆ ಕಮಲಾಬಾಯಿ ಎಂಬ ಒಬ್ಬ ವಿಧವೆಯಿದ್ದಳು.
ಅವಳು ಮೂಲ ನಿಜಾಮು ಇಲಾಖೆಯವಳು. ಅವಳ ಗಂಡ ನೌಕರಿ
ಗಾಗಿ ಪುಣೆಯಲ್ಲಿದ್ದಾಗಲೇ ಪ್ಲೇಗ ಒಂದು ಸತ್ತ. ಈಗ ಕಮಲಾಬಾ
ಯಿಗೆ ಒಬ್ಬ ಮಗಳ ಹೊರತು ಯಾರೂ ಇದ್ದಿಲ್ಲ.

ಕಮಲಾಬಾಯಿಯ ಮಗಳು ಬನು, ಹತ್ತು ಜನರ ಕಣ್ಣೊಳಗೆ
ತುಂಬುವಂಥವಳು. ಇಂಥ ಸುಸ್ವರೂಪಿಯಾದ ಮಗಳನ್ನು ಬೆಳೆ
ಸಿಡುವುದರಲ್ಲಿ ಕಮಲಾಬಾಯಿಯ ಉದ್ದೇಶವೇನಿದ್ದೀತೆಂಬುದನ್ನು
ಒಡೆದು ಹೇಳುವ ಕಾರಣವಿಲ್ಲ. ಅದೇ ವಠಾರದಲ್ಲಿ ಸಾಸೂನ ಹಾಸ್ಪಿ
ಟಲದೊಳಗೆ ಕಲಿಯುತ್ತಿರುವ ಕೆಲ ವಿದ್ಯಾರ್ಥಿಗಳೂ ಇರುತ್ತಿದ್ದರು.
ಅವರಲ್ಲಿಯ ಎಷ್ಟೋ ಜನರ ಕಣ್ಣು ಬನುವಿನ ಮೇಲಿತ್ತು. ಕಮಲಾ
ಬಾಯಿ ತನ್ನ ಮಗಳಿಗೆ ಮೇಲಿಂದ ಮೇಲೆ ಹೇಳುತ್ತಿದ್ದಳು: “ಬನು,
ಈ ಗಂಜಿಽಗಳಿಗಿಽ ಮಬ್ಬಿಗೆ ಬೀಳಬ್ಯಾಡಾ. ಈ ಕಾಸಡೆ ಜನಽ ನಿನ
ಗೇನ ಸುಖಽ ಕೊಟ್ಟಾವಽ ಮಹಾರಾಯಳ! ಅದೇನೋ ಅಂತಾ
ರಲ್ಲ ‘ಸೋಗ ತಂದಾವ ಸಂಸಾರ ಏನು ಹೂಡ್ಯಾ’ಸುಂಽತ.”

ಕಮಲಾಬಾಯಿಯ ಇಕ್ಕಟ್ಟಿನಿಂದ ಬನುವಿನ ದರ್ಶನ ಎಲ್ಲ
ರಿಗೂ ದುರ್ಲಭವಾಗಿತ್ತು. ಕಮಲಾಬಾಯಿಯ ಬಾಯಿಪ್ರಸಾ
ದಕ್ಕೆ ಎಲ್ಲರೂ ಅಂಜುತ್ತಿದ್ದರು. ಅದರಲ್ಲೂ ಒಬ್ಬ ಸಾಹಸಿಗ ದಾರಿ
ಹುಡುಕಿ, ಬನುವಿನ ಪ್ರೇಮ-ಸಂಪಾದನೆಗೆ ಪ್ರಾರಂಭಮಾಡಿದ.ಬನು

ಏಸ ಸೌಂದರ್ಯದ ಪ್ರಭಾವದಿಂದೋ, ನಿಪುತ್ರಿಕನ ನರಕವಾಸದ ಭೀತಿಯಿಂದೋ ಶಾಸ್ತ್ರಿಗಳು ಒಂದು ದಿನ ಕಮಲಾಬಾಯಿಯನ್ನು ಏಕಾಂತದಲ್ಲಿ ಕಂಡುಕೊಂಡು ಬಸುವನ್ನು ಧರ್ಮಾರ್ಥಕಾಮ ಮೋಕ್ಷಾಯ ಯಾಚಿಸಿದರು. ಯಾಕೋ ಏನೋ ಅವರಿಗೆ ಕಮಲಾ ಬಾಯಿಯ ಬಾಯಿಪ್ರಸಾದ ಸಿಗಲಿಲ್ಲ. ಶಾಸ್ತ್ರಿಗಳ ವಾಣಿಯೇ ಅಷ್ಟು ಪ್ರಭಾವಶಾಲಿಯಾಗಿದ್ದಿರಬೇಕು. ಒಂದು ಶುಭ ಮುಹೂರ್ತ ನೋಡಿಕೊಂಡು ಬಸು ಮಾವಿನ ತೋಪಿನ ಬಾಯವರಾದಳು.

ಶಾಸ್ತ್ರಿಗಳಿಗೆ ಮದುವೆ ದಕ್ಕಲಿಲ್ಲ. ತುಸು ದಿನಗಳಲ್ಲಿಯೇ ತಮ್ಮ ಚಿಕ್ಕ ಹೆಂಡತಿಯನ್ನು ಶೋಕಸಾಗರದಲ್ಲಿ ಮುಳುಗಿಸಿ ತಾವು ಸಾಯುಜ್ಯವನ್ನು ಹೊಂದಿದರು. ತಾಯಿಯ ಆಧಾರವಿರುವ ವರೆಗೆ ಬಸುವಿಗೇನು ತನ್ನ ಸ್ಥಿತಿಯ ಕಲ್ಪನೆಯಾಗಿರಲಿಲ್ಲ. ಆ ಛತ್ರ ಒಮ್ಮೆ ಹೋದಮೇಲೆ, ಬಯಲಲ್ಲಿಯೇ ಬಿದ್ದಂತಾಯಿತು. ಅದಕ್ಕಾಗಿಯೆ ತನಗೊಬ್ಬ "ಸಹಚರಿ"– ಗೆಳತಿ ಬೇಕೆಂದು ಜಾಹಿರಾತು ಕೊಟ್ಟಳು. ಆದರೆ ಅಡಿಗೆಯ ಶಾರಕ್ಕಾ ಈ ಮಾತು ಮರೆಯಿಸಿದ್ದರಿಂದ ಪದ್ದಕ್ಕನ ಪಾಲಿಗೆ ನಿರಾಶೆ ಬಂದಿತ್ತು.

ಬಾಯರು ಈ ದಿನ ತಮ್ಮ ಒಡೆತನದ ಮನೆಯಲ್ಲಿ ಬಂದಂತಾಯಿತು.

## ೧೪

## ಭುಜಂಗರಾಯರು ಸಂಣ ಡಾಕ್ಟರರಾದರು.

ಡಾ. ಶ್ರೀನಿವಾಸರಾಯರು ಸೋಮನಾಥಪುರದಲ್ಲಿ ತಮ್ಮ ಪ್ರ್ಯಾಕ್ಟಿಸಿಗೆ ಪ್ರಾರಂಭಮಾಡಿದಾಗ ಅಂಣಾರಾಯರು ಅದೇ ಅಲ್ಲಿಗೆ ಬಂದಿದ್ದರು. ಆ ಮಾತಿಗಿದೀಗ ಇಪ್ಪತ್ತು ವರ್ಷಗಳಾಗಿರಬಹುದು. ಇಬ್ಬರದೂ ಸ್ನೇಹ ಕೂಡಿತು. ಅಂದಬಳಿಕ ಡಾಕ್ಟರರು ಅಂಣಾರಾಯರ ಫ್ಯಾಮಿಲಿ ಡಾಕ್ಟರರಾಗಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಡಾಕ್ಟರರದೂ ಮನೆಯು ಸುಸ್ಥಿತಿ. ಬಡಬಗ್ಗರಿಗೆ ಔಷಧೋಪಚಾರಕ್ಕಾಗಿ ಪುತ್ತಾರ ಕಡೆಗೆ ನೋಡುವ ಕಾರಣವಿದ್ದಿಲ್ಲ. ಭುಜಂಗರಾಯರು ತಮ್ಮ ಉಪಜೀವಿಕೆಗಾಗಿ ಬಂದವರು. ದುಡ್ಡುಕೊಟ್ಟು ಔಷಧ ತೆಗೆದುಕೊಳ್ಳುವರಾರು! ಭುಜಂಗರಾಯರ ಪಾಲಿಗಂತೂ ಸೋಮನಾಥಪುರವು ರೋಗವಿಲ್ಲದ ಊರಾಗಿತ್ತು!

ಶ್ರೀನಿವಾಸರಾಯರೊಬ್ಬರಿಂದ ಇತ್ತೀಚೆಗೆ ಕೆಲಸ ಸಾಗುತ್ತಿದ್ದಿಲ್ಲ. ಅವರು ಒಂದುದಿನ ಭುಜಂಗರಾಯರಿಗೆ ಹೇಳಿಕಳಿಸಿದರು. ಭುಜಂಗರಾಯರಿಗೆ ಶ್ರೀನಿವಾಸರಾಯರು ತಮ್ಮನ್ನು ಯಾಕೆ ಕರೆಕಳಿಸಿರಬಹುದೆಂಬದು ಗೊತ್ತಾಗಲಿಲ್ಲ. ಆದರೂ ಅನುಭವಿಕರು, ಹಿರಿಯರು. ಭೆಟ್ಟಿಗಂತೂ ಹೋಗಿ ಬರಬೇಕೆಂದು ಹೊರಟರು—ಔಪಚಾರಿಕವೆಲ್ಲ ಮುಗಿದ ಮೇಲೆ ಶ್ರೀನಿವಾಸರಾಯರೇ ಪ್ರಾರಂಭ ಮಾಡಿದರು. "ಹ್ಯಾಂಗ ನಡದದ!"

"ನೆಟ್ಟಗಂದ್ರ ಆಗಬೇಕು." ಭುಜಂಗರಾಯರು ಶುಷ್ಕವಾಗಿ ನಕ್ಕು ಉತ್ತರ ಕೊಟ್ಟರು.

"ಎಲ್ಲರು 'ಸೋತಪರ್ಗ್ಯಾರರ.' ಸರ್ವ್ಹಿಸ್ ಮೋಟರಿನವರು ಬ್ಯಾರೆ ಅಲ್ಲರ ನಾವು ಬ್ಯಾರೆ ಅಲ್ಲ. ಅವರು ಚಹಾ ಸಿಗರೇಟ ಕೊಟ್ಟು ಸೀಟ ತುಂಬಿಕೋತಾರ. ನಾವು ಚಹಾ ಮನುಷ್ಯಾಗರ ಕುಡದ, ಒರ್ರೆ ಪ್ಪಾಂತ ಹೇಳತೇವಿರ." ಶ್ರೀನಿವಾಸರಾಯರು ತಮ್ಮ ವಿನೋದಕ್ಕೆ

ತಾವು ಮೊದಲು ನಕ್ಕು ಭುಜಂಗರಾಯರು ನಗುವ ಹಾದಿ ನೋಡುತ್ತ ಕುಳಿತುಕೊಂಡರು. ಅವರು ನಕ್ಕಮೇಲೆ ವಾಕ್ಪ್ರವಾಹವು ಮುಂದೆ ಸಾಗಿತು. "ಆದರಾಗಽ ನಮ್ಮ ಕೆಲಸಂಽದ್ರಽ ಗುಳಿಗಿಽ ವ್ಯಾಪಾರ. ಆ ನಾನಾದೀಕ್ಷಿತನೂ ಈಗ ಡಾಕ್ಟರ ಆಗ್ಯಾನಽ. ಕೇರು, ಬಜಿ, ನುಂಟಿ ಮಳ್ಳಿಸಿ ಬಾಟಲ್ಯಾಗ ತುಂಬೋದು, ಮ್ಯಾಲೆ ಲೇಬಲ್ಲು ಡೋಜು ಹಚ್ಚಿದರ ತೀರಿತು, ಆವನಽ ಡಾಕ್ಟರ. ಮ್ಯಾಲೆ ಬುದ್ಧಿಽ ಬೆಳಕು. ಮೊನ್ನೆ ಕುತುಬಮಿನಾರದ ಮಾತು ನಡದಿತ್ತು. ನಾ ಸಹಜ ಅಂದೆ, ಬೀಳಲಿಕ್ಕಾದ್ದರಿಂದ ಎರಡ ಅಂತಸ್ತಽ ತಗಿಸ್ಯಾರಂಽತ. ಈ ಬೃಹಸ್ಪತಿ ಕೇಳತಾನಽ, ಮೊದಲಿನವ್ಹೋ ಕಡೀವ್ಹೋಂಽತ. ಹೇಳಿಬಿಟ್ಟೆ, ಮೊದಲಿನವೆರಡೂಂಽತ." ಮತ್ತೊಂದು ನಗೆಯ ಸ್ಫೋಟ.

ಭುಜಂಗರಾಯರು ಮೆಲ್ಲಮೆಲ್ಲನೇ ಅದು ಇದು ಮಾತಾಡಿ ಈವೊತ್ತು ಕರೆಕಳಿಸಿದ ಬಗ್ಗೆ ಮಾತು ತೆಗೆದರು.

"ಭುಜಂಗರಾವ, ಈಗೀಗಽ ನನ್ನಿಂದ ಕೆಲಸನಽ ಸಾಗೋದಿಲ್ಲ. ಏನೋ ನೀವೂ ನೆರವಾದರ—"

ಭುಜಂಗರಾಯರಿಗೆ ಸ್ವತಂತ್ರ ಪ್ರ್ಯಾಕ್ಟಿಸಿನ ಅನುಭವವಂತೂ ಬಂದಿತ್ತು. ಈ ಸುಸಂಧಿ ಬಂದಾಗ ಅವರಾದರೂ ಅದನ್ನು ಕಳಕೊಳ್ಳ ಬಾರದೆಂದು ಮಾಡಿದರು. ಆದರೂ ಸ್ಪಷ್ಟ ಏನೂ ಹೇಳದೇ "ವಿಚಾರ ಮಾಡತೇನಿ" ಎಂದು ಹೇಳಿದರು.

"ಹಾಂಗಽ ಆಗಲಿ. ಒಬ್ಬರಿಗೊಬ್ಬರು-ಅಷ್ಟಽ ಅನುವು." ಶ್ರೀನಿವಾಸರಾಯರು ತುಸುಹೊತ್ತು ಮಾತಾಡಿ ತಮ್ಮ ದವಾಖಾನೆಗೆ ನಡೆದರು. ಭುಜಂಗರಾಯರೂ ಮನೆಗೆ ಬಂದುಬಿಟ್ಟರು.

ಎರಡು ಮೂರು ದಿನಗಳಲ್ಲಿ ಭುಜಂಗರಾಯರು ಶ್ರೀನಿವಾಸರಾಯರ Family Medical Hall ನಲ್ಲಿ ಸಂಣ ಡಾಕ್ಟರರಾದರು.

## ೧೫

### “ ಇನ್ನೂ ಎಷ್ಟ ದಿನಽ ಮದಿವ್ಯಾಗದ ಇರಬೇಕಂತಿಽ! ”

ಅಕ್ಕವ್ವ ಮೈಸೂರಿನಿಂದ ಬಂದು ಒಂದು ವರ್ಷವಾಗುತ್ತ ಬಂದಿತ್ತು. ಅವಳಿಗೀಗ ಹದಿನೇಳು ತುಂಬಿ ಹದಿನೆಂಟರೊಳಗೆ ಬಿದ್ದಿತ್ತು. ರಾಧಾಬಾಯಿಯರಿಗೂ ತಮ್ಮ ಬಗ್ಗೆ ಭರವಸೆ ಹಾರಹತ್ತಿತ್ತು. ತಮ್ಮ ಕಂಣೆದುರಿಗೊಮ್ಮೆ ಅಕ್ಕವ್ವನನ್ನು ಧಾರೆ ಎರೆದು ಕೊಟ್ಟರೆ, ಅವರ ಯಾವ ಆಶೆಯೂ ಉಳಿಯದಂತಾಗಿ ಅವರು ನಿಶ್ಚಿಂತರಾಗಬಹುದಾಗಿತ್ತು. ಅಂಣಾರಾಯರೆದುರಿಗೆ ಈ ಮಾತು ಸಾವಿರ ಸಲ ಬಂದಿತ್ತು. ಅವರದನ್ನು ಮುಂದಕ್ಕೆ ಹಾಕಿ ಬಿಟ್ಟಿದ್ದರು. ದಿನವೊಂದಕ್ಕೂ ಅದೇ ವಿಷಯ. ಅವರಿಗೂ ಬೇಜಾರಾಯಿತು.

ಒಂದು ದಿನ ಅಕ್ಕವ್ವನನ್ನು ಸಂಗಡ ಕರಕೊಂಡು ಅಡ್ಡಾಡಲಿಕ್ಕೆ ಹೊರಟರು. ಮಾತಿಗೆ ಮಾತು ಬಂದು “ ಇನ್ನು ಮುಂದೇನು ವಿಚಾರ! ” ಎಂದು ಕೇಳಿದರು.

“ ಯಾತರ ವಿಚಾರ, ಅಂಣಾ! ” ಅಕ್ಕವ್ವನಿಗೆ ತಾಯಿ ತಂದೆಗಳು ತನ್ನ ಬಗ್ಗೆ ನಡೆಸಿದ ವಿಚಾರವೆಲ್ಲ ಸಂಪೂರ್ಣ ಗೊತ್ತಾಗಿತ್ತು. ಆದರೆ ಅದನ್ನು ತನ್ನ ಮೋರೆಯ ಮೇಲೇನೂ ತೋರಗೊಡಲಿಲ್ಲ.

ಅಂಣಾರಾಯರಿಗೆ ದೊಡ್ಡ ವಿಚಾರ ಬಿತ್ತು. ಮಾತು ಎತ್ತುವದಾದರೂ ಹೇಗೆ! ಅವರು ತಮ್ಮೊಳಗೇ ನುಡಿದುಕೊಂಡಂತೆ ಗುಣಗುಟ್ಟಿದರು. ‘ಮುಂದ ಕಲಿಯೋವಿದ್ದರಽ ಆ ಮಾತ ಬ್ಯಾರೆ. ಆದರೂ—’

“ ನನ್ನ ಮನಸಿನ್ಯಾಗಂತೂ ಕಲಿಯೋದದಽ!— ಈಗ S. S. L. C. ಯೊಳಗಂತೂ ಇದ್ದೇ ಇದ್ದೆ. ನಾಲ್ಕೈದು ವರ್ಷ, ಬಿ. ಎ. ಆಗತಿದ್ದೆ. ” ಅಕ್ಕವ್ವನ ಆಶಾವಾದೀತನ ತಲೆದೋರಿತು.

“ ಆಕಿಽ ಮನಸಿನ್ಯಾಗ ಬ್ಯಾರೇನಽ ನಡದದ. ”

“ ಬ್ಯಾರೆ ಏನು ! ” ಅಕ್ಕವನ ದನಿ ನಡುಗಿತು.

“ ಅಂ — ಆಕಿ ಅಂತಾಳ. ಅಂದರಽ ನಿನ್ನ ಮದಿವಿದಶಿಂದಽನಽ ಆಕಿ ಜೀವ ಬಿಡಕತದ! ” ಅಂಗಾರರಾಯರು ಏನೋ ಒಂದು ಸುದ್ದಿ ಹೇಳುವ ದನಿಯಿಂದ ಅಂದರು.

“ ಆದರೂ ಅವ್ವ ಹಿಂಗ ಹಾಸಿಗಿ ಹಿಡಿದಾಗಽ— ” ಮುಂದೆ ಮಾತಾಡುವದು ಅಕ್ಕವ್ವನ ಜೀವದ ಸುತ್ತ ಬಂತು.

“ ಇನ್ನೆಷ್ಟು ದಿನಽ ಮದಿವ್ಯಾಗದಽ ಇರಬೇಕಂತಿ! ” ಅಂಗಾರಾಯರು ಸ್ವಲ್ಪ ಸಿಟ್ಟಿನಿಂದ ಕೇಳಿದರು.

ಅವರ ಮಾತಿನಲ್ಲಿಯ ಕೊಂಕು ಅವಳ ಲಕ್ಷ್ಯದಲ್ಲಿ ಬಂತು. ತನಗೆ ಬಂದ ಸಿಟ್ಟನ್ನು ಪ್ರಯಾಸದಿಂದ ಬಚ್ಚಿಟ್ಟು “ ಅಂಗಾ, ನನಗ ಸದ್ಯಕ್ಕ ಬ್ಯಾಡಾ. ಮಾಡಕೋಬೇಕಂತ ಮನಸಿನ್ಯಾಗ ಬಂದಾಗ ಹೇಳೇನಂತಽ ನಿಮಗ ” ಎಂದು ಸ್ಪಷ್ಟ ಹೇಳಿಬಿಟ್ಟಳು.

ಅಂಗಾರರಾಯರು ಅವಳ ಮೋರೆಯ ಕಡೆಗೆ ನೋಡಹತ್ತಿದರು. ಆದರೂ ಹೆಚ್ಚಿಗೆ ಹಿಚುಕಿ ನೋಡಬಾರದೆಂದು ಅವರು ಸುಮ್ಮನಾದರು. ಅಕ್ಕವ್ವನು ಮಾತ್ರ ರಾಧಾಬಾಯರಿಗೇ ಇದರ ಬಗ್ಗೆ ಕೇಳಿಬಿಡಬೇಕೆಂದು ಮನಸ್ಸಿನಲ್ಲಿ ಮಾಡಿಟ್ಟುಕೊಂಡಳು.

## ೧೬

## "ನನ್ನಾಣೆ ಅದಽ ನಿನಗಽ"

ಮೇಲೆ ಹೇಳಿದ ಸಂವಾದವಾದನಂತರ ಹತ್ತು ಹನ್ನೆರಡು ದಿನಗಳಾಗಿರಬಹುದು. ಅಕ್ಕವ್ವ ರಾಧಾಬಾಯರ ಕೂಡ ಹರಟೆ ಹೊಡೆಯುತ್ತ ಕುಳಿತಿದ್ದಳು. ಪದ್ದಕ್ಕನೂ ಎಲ್ಲಿಯೋ ಹೊರಗೆ ಹೋಗಿದ್ದಳು. ಇದೇ ಸುಸಂಧಿ ಎಂದು ಅಕ್ಕವ್ವ ಮೆಲ್ಲಮೆಲ್ಲನೇ ಮಾತು ಎತ್ತಿದಳು. "ಅವ್ವ, ಇದೇನು ನಡಿಸೀರಿ!"

"ನಾವೇನು ಮಾಡೇವೆವ್ವ–!" ರಾಧಾಬಾಯರು ಆಶ್ಚರ್ಯದಿಂದ ಕೇಳಿದರು.

"ಅಂಣಾ ಅಂತಾರಽ ಮದಿವಿ ಮಾಡಿಬಿಡಬೇಕಂತ!" ಅಕ್ಕವ್ವನ ದನಿಯಲ್ಲಿ ಸಮಾಧಾನವಿತ್ತು. ಅಂತರಂಗದಲ್ಲಿ ಮಾತ್ರ ಪ್ರಲಯ.

ರಾಧಾಬಾಯರು ವಿಚಾರದಲ್ಲಿ ಮಗ್ನರಾದರು.

"ಅವರದೇನು ವಿಚಾರ ಇಲ್ಲ, ನಾನಽ ಅಂದಿದ್ದೆ ಮೊನ್ನೆ– ಏನೋ ಮಾತು ನಡದೀತೊಂತ" ರಾಧಾಬಾಯರು ಏನೋ ಒಂದು ನಗೆಯಾಡಿ ಅಂದರು. "ನಂದಽ ಆಗ್ರಹ, ನಂದೇನು ಇಲ್ಲೆ ಇರೋದು ಬಹಳದಿನ ಇಲ್ಲ. ಏನೋ ನಿನ್ನ ಮುರಗೀಸೀರಾಗ ನನ್ನ ಕಣ್ಣು ತೊಯ್ದ್ಯಾವೂ ಅಂತ ಆಶಾ. ನಿಂದಾರಽ ಸುಖ ನೋಡಿ ಕಣ್ಣ ಮುಚ್ಚಬೇಕಂತೇನಿ."

"ಅವ್ವ, ನಿನ್ನ ಹ್ಯಾಂಗ ಬಿಟ್ಟು ಹೋಗಬೇಕಽ–" ಅಕ್ಕವ್ವ ತನ್ನ ತಲೆಯನ್ನು ತಲೆಗಿಂಬಿನ ಮೇಲಿಟ್ಟು ಅಳಹತ್ತಿದ್ದಳು.

"ನಮಗ ನೀ ಬ್ಯಾಡಾಗೇಽಂತ ತಿಳಕೊಂಡಿ ಏನು! ಮದಿವ್ಯಾದರೂ ನಿನಗ ಎಲ್ಲಿಯೂ ಹೋಗಬೇಕಾಗದಿದ್ದರಾತು."

"ಅಂದರಽ! ಮನಿಮಾರು ಇಲ್ಲದವರನ್ಯಾರನಾರಽ ತಂದು ಅವರ ಕೊಳ್ಳಾಗ ನನ್ನ ಕಟ್ಟಿಪರೆಂದರ–"

"ಹಾಂಗ್ ಹ್ಯಾಂಗನಿಸೀತು ಹೇಳ ನಮಗ! ನಮಗಾರs ಯಾರಿದ್ದಾರ! ಗುಣವಂತನ್ಯಾರನಾದರೂ ಹಿಡಿದು ತಂದು, ಅವನ ಕೊಳ್ಳಾಗ ಈ ಗುದ್ದಿ ಕಟ್ಟಬೇಕಂತ ಮಾಡೇವಿ." ರಾಧಾಬಾಯಿಯರ ವಿನೋದ ಈಗ ಅಕ್ಕವ್ವನಿಗೆ ಸರಿ ಬರುವಂತಿದ್ದಿಲ್ಲ.

"ಅವ್ವಾ, ಹೇಳಲ್ಯಾ ನಾನು! ನನಗ ಮದಿವಿನs ಬ್ಯಾಡಾ."

"ಛೀ ಹಳ ಹುಚ್ಚಿ! ಅನಚಾರದ ಹಾಂಗ. ಅಲ್ಲ, ಮದಿವ್ಯಾಗದ ಎಷ್ಟು ದಿನ ಇದ್ದೀ!"

"ಅವ್ವಾ, ನೀವನ್ನೋದನs ಏನು! ಈಗ ಒಲ್ಲೇಂತಂದು ಮುಂದ ಕಾಲ ಜಾರಿದರ ಹ್ಯಾಂಗ! ಇದ ಹೌದಲ್ಲೋ ನಿಮ್ಮ ಮಾತಿನ ಅರ್ಥ!" ರಾಧಾಬಾಯಿಯರ ಮಾತಿನ ಅರ್ಥ ಹೆಚ್ಚು ಕಡಿಮೆ ಯಾಗಿ ಅದೇ ಆಗುತ್ತಿತ್ತು. ಆದರೂ ಇಷ್ಟು ಸ್ಪಷ್ಟವಾಗಿ ಬಿಡಿಚಿಟ್ಟ ಅರ್ಥ ಅವರಿಗೆ ಸಂಮತವಿದ್ದಿಲ್ಲ. ಅಕ್ಕವ್ವ ಒಮ್ಮೆ ನಿರ್ಧಾರ ಮಾಡಿ ಹೇಳಿಬಿಟ್ಟಳು. "ನಾ ಹೇಳತೇನಿs, ನನಗ ಮದಿವಿ ಬ್ಯಾಡಾ."

ರಾಧಾಬಾಯಿಯರಿಗೆ ಏನೂ ತೋಚದಂತಾಯಿತು. ಅವರು ವಿರಕ್ತಸ್ವರದಿಂದ ಅಂದರು. "ನನಗೇನು ಹೇಳತಿ ಅಕ್ಕುs! ಅಲ್ಲೆ ನಿನ್ನ ಹಡದವರಿದ್ದಾರ. ಅವರಿಗೇ ಹೇಳು ಏನು ಹೇಳೋದು."

"ಅಂಥಾಗs! ಹೇಳತೇನಿ! ತಮ್ಮ ಮನಸು ಮೊದಲ ಬಿಗಿs ಹಿಡೀರೀಂತ ಹೇಳು." ರಾಧಾಬಾಯಿಯರು ಅವಳ ಬಾಯಿ ಮೇಲೆ ಕೈ ಯಿಟ್ಟರು. "ಅಕ್ಕು, — ಅಕ್ಕು, ಇದೇನು! ನನ್ನಾಣೆ ಅದ ನಿನಗ. ನಾ ಜೀವ ಹಿಡೀಬೇಕಂತಿಯೋ ಇಲ್ಲೋ!" ಅವರ ಕುತ್ತಿಗೆ ಬಿಗಿದು ಬಂತು. ಅಕ್ಕವ್ವನಿಗೂ ಸಂತಾಪ ಹೆಚ್ಚಾಗಿ ಕಂಣುಗಳಿಂದ ನೀರೊಡೆ ದವು.

ಎಷ್ಟೋ ಹೊತ್ತಿನವರೆಗೆ ಆ ತಾಯಿಮಕ್ಕಳು ಸುಂದ ಬಡಿದು ಕುಳಿತುಕೊಂಡಿದ್ದರು.

## ೧೭

## ಮನಶ್ಚಾಂಚಲ್ಯ

ಸಣ್ಣ ಡಾಕ್ಟರರಾದಂದಿನಿಂದ ಭುಜಂಗರಾಯರು ಸ್ವಲ್ಪ ನಿಶ್ಚಿಂತರಾಗಿದ್ದರೂ ಅಂಣಾರಾಯರ ಮನೆಗಿನ್ನೂ ಹೋಗುವ ಪ್ರಸಂಗ ಬಂದಿದ್ದಿಲ್ಲ. ಪದ್ದಕ್ಕ ಎರಡು ಮೂರು ದಿನಗಳಿಗೊಮ್ಮೆ ಬಂದು ಹೋಗುತ್ತಿದ್ದಳು. ಅವಳಿಗೇನೋ ಅಲ್ಲಿಯ ಸುದ್ದಿ ಸಡೆಯು ತ್ತಿದ್ದವಷ್ಟೇ.

ಒಂದು ದಿನ ಅಕ್ಕವ್ವ ಊರೊಳಗೆ ಬಂದಾಗ ಡಾಕ್ಟರರ ದೃಷ್ಟಿಗೆ ಬಿದ್ದಳು. ಯಾರಿರಬಹುದು! ಅಂಣಾರಾಯರ ಮಗಳೆಂಬದು ಗೊತ್ತಿ ದ್ದಿಲ್ಲ. ಪದ್ದಕ್ಕನಿಗೆ ಕೇಳಿನೋಡಿದರು. ಅವಳು ತನಗೂ ಗೊತ್ತಿಲ್ಲ ವೆಂದು ಹೇಳಿ ಮಾತು ಹಾರಿಸಿಕೊಂಡಳು. ಮುಂದೆ ಒಂದು ದಿನ ಡಾಕ್ಟರರು ಅಂಣಾರಾಯರ ಮನೆಗೆ ಹೋದಾಗ ಅವರಿಗೆ ಪದ್ದಕ್ಕ ಮಾತು ಹಾರಿಸಿಕೊಂಡದ್ದರ ಅರ್ಥ ತಿಳಿಯಿತು. ಒಮ್ಮೆ ಪದ್ದಕ್ಕ ಮನೆಗೆ ಬಂದಾಗ ವಿನೋದದಿಂದ ಅಂದರು. “ ಕೋಳಿ ಬಚ್ಚಿಟ್ಟರs ಬಾಯ ಮಾಡೋದೇನು ಬಿಡೋದಿಲ್ಲ ಅದು. ”

ಪದ್ದಕ್ಕನಿಗೆ ಅವರ ಮಾತಿನ ಅರ್ಥ ತಿಳಿಯದೇ ಹೋದೀತೇ! ಅವಳು ಸೆಟಗೊಂಡರೂ ಆಶ್ಚರ್ಯವಲ್ಲ. “ ತಿಳಿತs ಹೌದಲ್ಲೋ! ಆತ ಹಾಂಗಾರs. ”

ಡಾಕ್ಟರರ ನಾಲಿಗೆ ತದುಲುಬದುಲು ಮಾತಾಡತೊಡಗಿತು. “ ಅಂ– ಮೊನ್ನೇನೋ ಕಂಣಿಗೆ ಬಿದ್ದ ಹಾಂಗಾತs– ಅಂ– ನಾ ಯಾರನೂ ಕೇಳಿಲ್ಲ. ”

“ ನೋಡೆರs ನೋಡ್ರಿ, ಕೇಳೆರs ಕೇಳ್ರಿ. ನನಗ್ಯಾಕಬೇಕು ! ”

ಪದ್ದಕ್ಕನ ಸೆಡವಿಳಿಯಬೇಕಾದರೆ ಅತಿಪ್ರಯಾಸವಾಯಿತು. ಏನೇ ಆಗಲಿ. ಅಕ್ಕವ್ವನನ್ನು ನೋಡಿದಾಗಿನಿಂದ ಭುಜಂಗರಾಯರ ಮನಸ್ಸು ಚಂಚಲವಾದದ್ದೇನೋ ನಿಜ.

ಇತ್ತೀಚೆಗೆ ಅಕ್ಕವ್ವ ರಾಧಾಬಾಯಿಯರ ಕೋಣೆಯ ಕಡೆಗೆ ವಿಶೇಷ ಹೋಗುತ್ತಿದ್ದಿಲ್ಲ. ಅವರ ಬಗ್ಗೆ ಅವಳ ಮನಸ್ಸು ಕಲುಷಿತವಾಗಿದ್ದಿಲ್ಲ; ಅಥವಾ ಅವರ ಮೇಲಿನ ಪ್ರೇಮ ಕಡಿಮೆಯಾಗಿದ್ದಿಲ್ಲ. ಮನೆಯೇ ಹೇಸಿಗಿಟ್ಟಿತ್ತು. ಭುಜಂಗರಾಯರು ಅಂಣಾರಾಯರ ಮನೆಗೆ ಹೋದಾಗ ಎರಡೂ ಸಾರೆ ಅಕ್ಕವ್ವ ತನ್ನ ಕೋಣೆಯೊಳಗೇ ಇದ್ದಳು. ಏನೋ ಎದುರಿನಿಂದ ಹಾಯ್ದು ಹೋದಾಗ ಕಣ್ಣಿಗೆ ಬಿದ್ದಿರಬಹುದಷ್ಟೇ. ಭುಜಂಗರಾಯರ ಮನಸ್ಸು ಮಾತ್ರ ಚಡಪಡಿಸಹತ್ತಿತು. ಈ ವರೆಗವರು ಪ್ರೇಮದ ಪೇಚಾಟದಲ್ಲಿ ಬಿದ್ದಿದ್ದಿಲ್ಲ. ಕಲಿಯುವ ಕಾಲಕ್ಕೆ ಏನಾದರೂ ಆಗಿರಬಹುದು ಹೋಗಿರಬಹುದು. ಇತರ ಅನುಭವವೂ ಬಂದಿರಬಹುದು. ಈಗಂತೂ ಅವರ ಪ್ರೇಮಕ್ಕೆ ವ್ಯವಹಾರದ ಸ್ವರೂಪ ಬಂದು ಬಿಟ್ಟಿತು. ಪದ್ದಕ್ಕನ ವಿಷಯದಲ್ಲಿ ಕಾಮುಕತೆಯಿದ್ದಿರಬಹುದು. ಅಕ್ಕವ್ವ ದೃಷ್ಟಿಗೆ ಬಿದ್ದ ಮೇಲೆ ಅವರ ಪ್ರೇಮಕ್ಕೆ ಹೊಸದೊಂದು ದೃಷ್ಟಿ ಒಡೆದಿತ್ತು.

ನೈಸರ್ಗಿಕ ರೂಪ, ಆರೋಗ್ಯದಿಂದ ಬೆಳೆದ ಮೈಕಟ್ಟು, ಸಂಸ್ಕಾರದ ಹೊಳಪು, ಸಹಜ ಅಂಗವಿಕ್ಷೇಪ, ನೀಟಾದ ಇರುವಿಕೆ ಇವುಗಳಿಂದ ಅಕ್ಕವ್ವ ನಾಲ್ವರ ಕಣ್ಣಿಗೆ ಒಡೆದು ಕಾಣುವಂತಿದ್ದಳು. ಮೋರೆಯ ಮೇಲೊಂದು ಬಗೆಯ ಗಾಂಭೀರ್ಯವೂ ಇತ್ತಿತ್ತ ಒಡಮೂಡಿದ್ದರಿಂದ ಅದರಲ್ಲೂ ಒಂದು ಹೊಸ ಬಣ್ಣ ಭುಜಂಗರಾಯರ ಕಣ್ಣಿಗೆ ಕಂಡಿತು.

ಮತ್ತೊಂದು ಮಾತು. ಅಂಣಾರಾಯರಿಗವಳೊಬ್ಬಳೇ ಮಗಳು. ಸಂಪತ್ತು ಯಾರಿಗೆ ಬೇಡ! ಭುಜಂಗರಾಯರೂ ಮುಕ್ತರಿದ್ದಿಲ್ಲ. ಹೀಗಿಲ್ಲ ಹಾಗೆ; ಸಂಪತ್ತಿನ ಸಂಭವವಿದ್ದರೆ–

ಈ ವಿಚಾರಸರಣಿಯಲ್ಲಿ ಗೌಣಪಕ್ಷ ಒಂದೇ. ಅಕ್ಕವ್ವನ ಪ್ರೇಮಸಂಪಾದನೆಗೆ ದಾರಿ. ಈಗ ಅಂಣಾರಾಯರ ಮನೆಯಲ್ಲಿ ತಮ್ಮ ಬಳಿಕೆ ವಿಶ್ವಾಸದ್ದು. ತಮ್ಮ ಚಾರಿತ್ರ್ಯದ ಬಗ್ಗೆ ಇಲ್ಲದ ಸಂಶಯ ಹುಟ್ಟಿದರೆ– ಈ ಮಾತು ತಾನಾಗಿ ಕೂಡಿ ಬರುವುದಾದರೂ ಹೇಗೆ!

ಅಂಗಾರಾಯರೆತ್ತ, ತಾವೆತ್ತ! ರಾಜಾ ಭೋಜ ಗಂಗಾ ತೇಲಿ ನ್ಯಾಯ! ಆ ಪದ್ದು– ಛೇ! ಅವಳ ವಿಚಾರ ಇದರಲ್ಲಿ ಬೇಡ.

ಅಂತೂ ಭುಜಂಗರಾಯರು ತಮಗೆ ಹಾಕಿಕೊಂಡ ಒಡಪಿನ ಉತ್ತರ ತಾವೇ ಅರಿಯದೆ ಹೋದರು.

---

## ೧೮

## ತಕ್ಕ ವರ

ಅಂಗಾರಾಯರು ತಮ್ಮ ವಿಚಾರ ಮಾಡಿಕೊಂಡೇ ಇದ್ದರು. ಭುಜಂಗರಾಯರ ಸ್ವಭಾವ ಅವರ ಮನಸ್ಸಿಗೆ ಸಂಪೂರ್ಣ ಬಂದಿತ್ತು. ಶ್ರೀನಿವಾಸರಾಯರ ಕೂಡ ಆಪ್ತಾಲೋಚನೆ ಮಾಡಿಕೊಂಡರು. ಇನ್ನು ಭುಜಂಗರಾಯರನ್ನ ಪುಟ್ಟ ಕೇಳುವುದು ಉಳಿದಿತ್ತು. ಒಮ್ಮೆ ಅವರೂ ಬಂದಾಗ ಏನೋ ಸಹಜ ಮಾತೆತ್ತಿದಂತೆ "ಮತ್ತೇನು ಭುಜಂಗರಾವ, ನಾವೇನಾರ ಮಾತು ಹೇಳಿದರ ನೀವು ನಮ್ಮ ಹೊರಗಿಲ್ಲs ಇಲ್ಲs" ಎಂದು ಮಾತಾಡಿ ಅವರ ಮೋರೆಯ ಕಡೆಗೆ ನೋಡಿ ನಕ್ಕರು. ಭುಜಂಗರಾಯರಿಗೆ ಅಂಗಾರಾಯರು ತಮ್ಮ ಮಗಳ ವಿಷಯವಾಗಿ ಕೇಳಬಹುದೆಂದನಿಸಿತ್ತು. ಆದರೆ ಆ ಕಲ್ಪನೆ ಅಶಕ್ಯಕೋಟಿಯಲ್ಲಿಯದೆಂದು ಅದನ್ನು ತಮ್ಮ ಮನಸ್ಸಿನಲ್ಲಿ ಬರಗೊಟ್ಟಿದ್ದಿಲ್ಲ. ಅವರಿಗೀ ಪ್ರಶ್ನೆ ಅನಪೇಕ್ಷಿತವಿತ್ತು. ಅವರು ಏನೂ ಮಾತಾಡದೆ ಅಂಗಾರಾಯರ ಶಬ್ದಗಳನ್ನು ಲಕ್ಷ್ಯಪೂರ್ವಕ ಕೇಳ ಹತ್ತಿದರು. "ನಮ್ಮ ಅಕ್ಕವ್ವನ್ನs ನೀವು ನೋಡಿರಿ. ಏನೋ ವಿಧಿ ಸಂಕಲ್ಪಿದ್ದರs–"

ಭುಜಂಗರಾಯರ ಮೈಮೇಲೆ ಹೂಬಿಸಿಲು ಬಿದ್ದಂತಾಯಿತು. "ರಾಯರs ನಾ ಏನು ನಿಮ್ಮ ಹೊರಗಿಲ್ಲ. ಜನ್ಮದ ಗಂಟು – ಯಾರ ದವರs ವಿಚಾರ ಮಾಡೋದು–"

"ತಿಳಿತು. ನಮ್ಮ ಅಕ್ಕುಂದು ನಿಮಗ ಗುರ್ತಿಲಾಂತಿಲ್ಲ ಏನಿಲ್ಲ.

" ಶಾರಕ್ಕಾ – "

" ಹೂಂ– "

" ನಡಿ ಎಲ್ಯಾರsa ಹೋಗೋಣ "

" ಹೋಗೋದಾದರ ನಾಳಿಗೆ. ಈಗಲ್ಲ– "

" ಸುಟ್ಟಿತು ನಿನ್ನ ಸಿದ್ದಿ. ಎದ್ದು ಕೂಡಂತೇನಿ – "

" ನನ್ನ ಲಕ್ಷ್ಯೆದsa. ನೀವು ಮಾತಾಡ್ರಿ "

ಈ ಸಂವಾದ ಬೆಳಗು ಕಾಣಲಿಕ್ಕೆ ಒಂದು ಸಾಧನೆಯಾಗಿತ್ತು. ಒಂದೇ ಆವರ್ತನಕ್ಕೆ ರಾತ್ರಿ ತೀರದಿದ್ದರೆ ಮತ್ತೊಂದು. ಅದಕ್ಕೂ ತೀರದಿದ್ದರೆ ಇನ್ನೊಂದು. ಹೀಗೆ ಆವರ್ತನದ ಮೇಲೆ ಆವರ್ತನ ನಡೆ ದಿರುತ್ತಿತ್ತು.

ನವರಾತ್ರಿ ಬಂದಿತು. ಬಾಯರು ಸೋಮೇಶ್ವರಿಯ ದರ್ಶನ ಕ್ಕೆಂದು ಸೋಮನಾಥಪುರಕ್ಕೆ ಬಂದಿದ್ದರು. ಅವರ ಕೂಡ ಶಾರದ ಮ್ಮನೂ ಇದ್ದಳು. ದೇವಿಯ ದರ್ಶನ ಮುಗಿಸಿಕೊಂಡು ಬರುವಾಗ ಅವರ ದೃಷ್ಟಿಗೆ ಒಂದು ವ್ಯಕ್ತಿ ಬಿತ್ತು. ಆಯಿತು. ಅಂದಿನಿಂದ ಅವರು ಹುಚ್ಚರಂತೆ ವರ್ತಿಸಹತ್ತಿದರು. ಕಾರಣವಿಲ್ಲದೇ ಬೆದರಿ ನೋಡುವುದು, ಹೇಳಿದ್ದನ್ನೇ ಹೇಳುವುದು, ಮಾತಾಡುತ್ತ ಮಾತಾಡುತ್ತ ನಡುನೇ ಏನೋ ಅಸಂಬದ್ಧ ಮಾತಾಡುವುದು, ಈ ಎಲ್ಲ ಲಕ್ಷಣಗಳನ್ನು ನೋಡಿ ಶಾರದಮ್ಮನಿಗವರ ಪ್ರಕೃತಿಯ ಬಗ್ಗೆ ಚಿಂತೆ ಹತ್ತಿತು ತೀರ್ಥ ಯಾತ್ರೆಯ ನೆವ ಹೂಡಿ ಯಾವದಾದರೊಂದು ಊರಿಗೆ ಹೋಗಿ ಬರ ಬೇಕೆಂದು ಸೂಚಿಸಿ ನೋಡಿದಳು. ಬಾಯರು ಒಪ್ಪಿಕ್ಕೊಂಡರು. ಸಂಮತಿಸಿ ದರು. ಆದರೆ ಅವರ ಮನಸ್ಸಿನ ನೆಲೆಯೇ ಹತ್ತಲಿಲ್ಲ.

ಯಾತ್ರೆಗೆ ಹೊರಡುವ ಸಿದ್ಧತೆಯಂತೂ ಆಯಿತು. ಮರು ದಿನ ಹೊರಡತಕ್ಕದ್ದು. ಅದೇ ಸಂಜೆಗೆ ಬಾಯರಿಗೆ ಜ್ವರ ಬಂದು ಬಿಟ್ಟುವು. ಒಂದೆರಡನ್ನುತ್ತ ಒಂದು ವಾರ ತಿರುಗಿತು. ಜ್ವರದ ಪ್ರಮಾಣ ಹೆಚ್ಚುತ್ತಲೇ ಬಂದಿತ್ತು. ಶಾರದಮ್ಮ ಗಾಬರಿಯಾಗಿ ಸೋಮನಾಥಪುರದಿಂದ ಡಾ. ಭುಜಂಗರಾಯರನ್ನು ಕರೆಕಳಿಸಿದಳು.

ಡಾಕ್ಟರರು ಬಂದಾಗ ರೋಗಿಯ ಸ್ಥಿತಿಗತಿ ಶೋಚನೀಯವಾಗಿತ್ತು. ಜ್ವರ ಮೈಮೇಲೆ ಕೈಯಿಡಗೊಡುತ್ತಿದ್ದಿಲ್ಲ. ಸ್ಮೃತಿಯಾಪರೂ ಇದ್ದಂತೆ ತೋರಲಿಲ್ಲ. ಬಡಬಡಿಸುವುದನ್ನು ನಡೆದಿತ್ತು. ದೈವಗಟ್ಟಿಯಿದ್ದರೇ ಉಳಿಯಬೇಕು !

ಡಾಕ್ಟರರು ತಮ್ಮ ಸ್ವಂತ ಪ್ರ್ಯಾಕ್ಟಿಸಿನ ಪರಿವೆಯನ್ನಿಡದೇ ಔಷಧೋಪಚಾರ ಶುಶ್ರೂಷೆ ಮಾಡಿದರು. ಅವರ ಕೈಗೂ ಯಶಸ್ಸು ಬರಹತ್ತಿತು. ರೋಗಿಯು ನೆಟ್ಟಗಾದಾದಂತೆ ಡಾಕ್ಟರರ ಆವಶ್ಯಕತೆ ಕಡಿಮೆಯಾಗುವುದು. ಬಾಯಿರೊಮ್ಮೆ ಪೂರಾ ನೆಟ್ಟಗಾದರು. ಡಾಕ್ಟರರು ಬರುವುದೂ ಪೂರಾ ನಿಂತುಹೋಯಿತು.

ಜಡ್ಡಾದಾಗ ತನ್ನ ಸುತ್ತುಮುತ್ತಲಿದ್ದ ಜನರ ಮೋರೆಯ ನೆನಪು ರೋಗಿಗೆ ನೆಟ್ಟಗಾದ ಮೇಲೆ ಉಳಿಯುವುದಿಲ್ಲ. ಬಾಯಿರಿಗೆ ಮಾತ್ರ ಡಾಕ್ಟರರ ಮೋರೆಯ ನೆನಪು ಪೂರಾ ಉಳಿಯಿತು. ಜೀವದ ಕುತ್ತಿನಿಂದ ಪಾರುಮಾಡಿದ ಪುಣ್ಯವಂತನನ್ನು ಅವರಾದರೂ ಹೇಗೆ ಮರೆಯಬೇಕು ! ಡಾಕ್ಟರರಂತೂ ತೋಪಿಗೆ ಬರುವ ಲಕ್ಷಣ ತೋರಲಿಲ್ಲ. ಹಾಗೇ ಹೇಳಿಕಳಿಸುವುದಾದರೂ ಹೇಗೆ! ಜಡ್ಡು ಹೇಳಿಕಳಿಸಿದರೂ ಬರುವುದಿಲ್ಲ. ಒಮ್ಮೆ ಬಾಯಿರು ಎಡವಿಬಿದ್ದರು. ಕಾಲಿನ ನರ ತೊಡಕಿತು. ಡಾಕ್ಟರರು ಬರಲೇಬೇಕಾಯಿತು.

ಡಾಕ್ಟರರು ಬಂದಾಗ ಬಾಯಿರನ್ನು ಪಲಂಗಿನ ಮೇಲೆ ಮಲಗಿಸಿತ್ತು. ಹತ್ತಿರ ಶಾರದಮ್ಮ ಕುಳಿತಿದ್ದಳು. ಗಾಯದ ಪರೀಕ್ಷೆಯಾಯಿತು. ಏನೂ ಆಗಿದ್ದಿಲ್ಲ. ಡಾಕ್ಟರರ ಕೈ ಮಾತ್ರ ನಡುಗುತ್ತಿತ್ತು. ಶಾರದಮ್ಮ ಚಹಾ ಮಾಡಲಿಕ್ಕೆಂದು ಒಳಗೆ ಹೋದಳು. ಕೋಣೆಯಲ್ಲಿ ಬಾಯಿರೊಬ್ಬರೇ ಉಳಿದರು. ಡಾಕ್ಟರರು ಹೊರಗೆ ಹೊರಟರು.

" ಡಾಕ್ಟರ– " ಮೃದುವಾದ ದನಿ ಕೇಳಬಂತು. ಡಾಕ್ಟರರು ಕಕ್ಕಾವಿಕ್ಕಿಯಾಗಿ ನೋಡಹತ್ತಿದರು. ಮೆಲ್ಲಮೆಲ್ಲನೇ ಬಾಯಿರ ಹತ್ತಿರ ಹೋಗಿ ನಿಂತರು. ಬಾಯಿರ ಮೋರೆ ಗಂಭೀರವಾಗಿತ್ತು.

"ಬಸುಽ, ನನಗ ಗುರ್ತ ಸಿಗಲಿಲ್ಲಾಂತ ತಿಳಕೊಂಡೇನು ! ಮೊದಲನೆ ದಿವಸಽ ಗೊತ್ತಾತು."

"ಹೂಂ–! ಇಷ್ಟ ದಿಸದ ಮ್ಯಾಲೂ ಗುರ್ತುಳೀತದಲ್ಲಽ!"

"ನಂದಽ ತಪ್ಪಲ್ಲ! ಕಮಲಾಬಾಯರಿಗೆ ನನ್ನ ಬಡತನ –"

"ಅದೆಲ್ಲ ಈಗ್ಯಾಕಿನ್ನಽ! ಆಕೀನೂ ಹೋದ್ಲು. ನನ್ನ ಸುಖಿದ್ದ ಶಿಂದಽಂತ ಮಾಡಲಿಕ್ಕೆ ಹೋದ್ಲು. ನನ್ನ ಪಾಲಿಗೊಂದಿದ್ದಿಲ್ಲಲ್ಲ–" ಬಾಯರ ದನಿ ಜಡವಾಗಿತ್ತು. "ನಾವು ಮರೆತಿವಿ – ನಿಮಗಾರಽ ನೆನಪುಳೀತು."

"ಬಸು, ಈಗ ನನ್ನ ಸ್ಥಿತಿಯೊಳಗೂ ಬದಲಾಗೇದ. ನಾನೂ ಒಂದು ಸಂಸಾರ ಹೂಡೇನಿ." ಈ ಸುದ್ದಿಯಿಂದ ಬಾಯರ ಮನಸ್ಸಿಗೆ ಸಮಾಧಾನವಾದಂತೆ ತೋರಲಿಲ್ಲ.

ಚಹಾ ಬಂತು. ಡಾಕ್ಟರರೂ ಹೊರಟರು. ಬಾಯರು ನಗುತ್ತ ಹೇಳಿದರು. "ಡಾಕ್ಟರ, ಕಾಲ ನೆಟ್ಟಗಾಗಿ ನಾ ಓಡ್ಯಾಡುಽ ತನಕ ನೀವು ಬರಲಿಕ್ಕೇ ಬೇಕು"

ಡಾಕ್ಟರರು ಈಗ ಹೊರಟೇ ಬಿಟ್ಟರು. ಅವರೊಮ್ಮೆ ತಿರುಗಿ ನೋಡಿದರು. ಬಾಯರ ಕಣ್ಣುಗಳಲ್ಲಿ ಏನೋ ಒಂದು ಬೆಳಕು ಕಂಡು ಬಂತು.

## ೨೦

# ಭುಜಂಗರಾಯರ ಧನವಂತ ರೋಗಿಗಳು

ಮದುವೆಯಾದ ಮೇಲೆ ಭುಜಂಗರಾಯರು ಅಂಣಾರಾಯರ ಮನೆಯೊಳಗೇ ಇರಹತ್ತಿದ್ದರು. ಬೇರೆ ಮನೆ ಮಾಡಿಕೊಂಡಿರುವದು ರಾಧಾಬಾಯರ ಮನಸ್ಸಿಗೆ ಸರಿಬರಲಿಲ್ಲ. ತಮ್ಮ ಮಗಳು ತಮ್ಮ ಹತ್ತಿರಿದ್ದರೆ ತೀರಿತು.

ವಿಚಾರ ಮಾಡಿದರೆ ಅಕ್ಕವ್ವನ ಸಂಸಾರ ಸುಖದ್ದೇ ಇತ್ತು. ಅತ್ತೆಯ ಮನೆಯ ಕಾಟವಿಲ್ಲ. ಗಂಡ ಅಕಬರನಾದರೆ ತಾನು ಬೀರಬಲ. ಭುಜಂಗರಾಯರಿಗಾದರೂ ಹೊಸ ಸಂಸಾರ ಹೂಡಿದ ಹುರುಪು. ರಾಧಾಬಾಯರಿಗೆ ಇದೆಲ್ಲವನ್ನು ನೋಡಿ ಹಿರಿಹಿಗ್ಗಾಗಿ ಅವರೂ ಒಮ್ಮೊಮ್ಮೆ ತಮಗೆ ಜಡ್ಡಾದದ್ದನ್ನೂ ಮರೆತುಬಿಡುತ್ತಿದ್ದರು. ಭುಜಂಗ ರಾಯರ ಸ್ವಭಾವ ಮೊದಲಿನಿಂದ ಹೆಂಣುಗರಳಿನದು. ಈಗಂತೂ ರಾಧಾಬಾಯರು ಅತ್ತೆಯಾದ ಮೇಲೆ ಅವರ ಸೇವೆ ಶುಶ್ರೂಷೆಯಲ್ಲಿ ಎಳ್ಳಷ್ಟೂ ಕಡಿಮೆಯಾಗದಂತೆ ಹಗಲುರಾತ್ರಿ ಯತ್ನಿಸುತ್ತಿದ್ದರು. ಇಂಥ ಗುಣವಂತ ಅಳಿಯನನ್ನು ಕೊಟ್ಟದ್ದಕ್ಕಾಗಿ ರಾಧಾಬಾಯರಾದರೂ ದೇವರೆದುರಿಗೆ ಎಷ್ಟು ಸಲ ತುಪ್ಪದ ದೀಪಿಗೆ ಹಚ್ಚಿಸಿದ್ದರೋ !

" ಭುಜಂಗರಾಯರ, ನಮ್ಮ ಅಕ್ಕೂಂದು ಸಣ್ಣ ವಯ್ಯಾಲೆ ಬಹಳ ಸಿಟ್ಟದ. ನಾ ಏನೋ ನಿಮ್ಮನ್ನ ಹ್ಯಾಂಗ ಬೇಕ ಹಾಂಗ ದುಡಿಸಿಗೋ ತೇನಿಂತಂತಾಳ ಆಕಿ. " ರಾಧಾಬಾಯರು ತಮ್ಮ ಮಗಳ ಕಡೆಗೆ ನೋಡುತ್ತ ಅನ್ನುತ್ತಿದ್ದರು.

" ನೀವು ತಾಯಿ ಸಮಾನ ಇದ್ದೀರಿ. ನಾ ಏನ ಸೇವಾ ಶುಶ್ರೂಷಾ ಮಾಡಿದರs ಮಗ ಮಾಡಿದsಂತ ಆದೀತು. ಹೊರಗ ಅಂದ ತೋರಸ್ತೀರಿ. ಅಲ್ಲೆ ಮೊಗಲಾಯಿಹಾಗ ನೋಡಿಲ್ಲೀವ್ರ. ಹಮಾಲರ ಹಾಂಗ ದುಡದs ದುಡೀರಿ, ದುಡದs ದುಡೀರಿ, ಒಂದsರೆ ಸಮಾಧಾನದ ಶಬ್ದ ! – ಉಂ ಹೂಂ –" ಅಕ್ಕವ್ವನ ಕಡೆಗೆ ನೋಡದೇ

ಭುಜಂಗರಾಯರು ಒಳ್ಳೆಯ ಗಾಂಭೀರ್ಯದಿಂದ ರಗಳೆ ಹೂಡುತ್ತಿದ್ದರು. ಅಕ್ಕವ್ವ ಕೃತ್ರಿಮ ಕೋಪದಿಂದ ಅವರ ಕಡೆಗೆ ನೋಡಿ – "ಅಪ್ಪ, ಹೇಳಿ ಕೇಳಿ ಮೊಗಲಾಯಿಪ್ಪ ನಮ್ಮದು!" ಎಂದು ರಾಧಾಚಾರ್ಯರ ಹತ್ತಿರ ಹೋಗಿ ಕುಳಿತುಕೊಳ್ಳುತ್ತಿದ್ದಳು. ಅವರಿಬ್ಬರ ಸಮರ್ವಿನೋದ ನೋಡಿ ರಾಧಾಚಾರ್ಯರ ಅಚೇತನಪ್ರಾಯದೇಹದಲ್ಲಿ ವಿದ್ಯುತ್ಸಂಚಾರವಾದಂತಾಗುತ್ತಿತ್ತು. ಈ ಸಮವೇಗದಿಂದ ಹರಿಯುವ ಪ್ರವಾಹದಲ್ಲಿ ಯಾವುದೋ ಒಂದು ದಿನ ಏನೋ ಒಂದು ಒಡಲಾಗಿರಬೇಕು. ಅಂದಿನಿಂದ ಭುಜಂಗರಾಯರ ಮೋರೆಯ ಮೇಲೆ ಉದಾಸೀನತೆ ಕಾಣಹತ್ತಿತು. ಅವರ ಬಾಯಿಂದ ಬೆದರಿ–ಬೆದರಿದಂತೆ ಮಾತು ಹೊರಡಹತ್ತಿದುವು. ಅವರ ಹೃದಯದಿಂದೊಂದು ಅಸ್ಫುಟ ಆರ್ತನಾದ ಹೊರಟು ಅವರ ಕಣ್ಣಮುಂದೆ ಕತ್ತಲು ಕಾಣಹತ್ತಿತು.

ಇತ್ತೀಚೆಗೆ ಅವರು ಬಹುತರವಾಗಿ ದವಾಖಾನೆಯಲ್ಲಿಯೇ ಕಾಲಕಳೆಯಹತ್ತಿದರು. ಮನೆಗೆ ಬಂದರು ಬರಲಿಲ್ಲ, ಹೀಗೂ ನಡೆಯಿತು ಕೆಲದಿನ. ಅಕ್ಕವನಿಗೆ ಅವರ ಸ್ವಭಾವದಲ್ಲಾದ ಈ ಬದಲಿನ ಅರ್ಥವೇನೂ ತಿಳಿಯಲಿಲ್ಲ.

ಒಂದು ದಿನ ಭುಜಂಗರಾಯರು ಹೊರಗೆ ಹೊರಟಿದ್ದರು. ಅವಳು ಸಹಜ ಕೇಳಿದಳು. "ಈಗ ಇಷ್ಟೇನು ಕೆಲಸ ಬೀಳತದ!" ಭುಜಂಗರಾಯರು "ಅಂ – ಇರತದ –" ಎಂದು ಹೊರಗೆ ಹೋಗುವುದನ್ನು ಬಿಟ್ಟುಕೊಟ್ಟು ಅಲ್ಲಿಯೆ ಒಂದು ಖುರ್ಚಿಯ ಮೇಲೆ ಕುಳಿತುಕೊಂಡರು.

"ಹೊರಗ ಹೋಗೋದಿತ್ತಲ್ಲ ಮತ್ತ!" ಅಕ್ಕವ್ವ ನಕ್ಕಳು.

ಭುಜಂಗರಾಯರ ಅಂಗವ್ಯಾಪಾರ ಪುನಃ ನಡೆದುವು; ಅಕ್ಕವ್ವ ನಿಗಾಶ್ಚರ್ಯವೆನಿಸಿತು. ಅವಳು ಮತ್ತೆ ಕೇಳಿದಳು. "ಯಾವದಾರ ಸೀರಿಯಸ್ ಕೇಸದ ಏನು ಮತ್ತ!"

"ಸೀರಿಯಸ್ ಅಂದರ – ಅಂ – ಅಷ್ಟೇನು ಸೀರಿಯಸ್ ಅಲ್ಲ. ದುಡ್ಡಿದ್ದವರಿಗೆ ಜಡ್ಡಾದರ ಡಾಕ್ಟರ ತಲಿ ಹಿಡಕೊಂಡು ಕೂಡಬೇ

ಕುಽಂತನಸ್ತಿರತದ ಅವರಿಗೆ." ಅಷ್ಟರಲ್ಲಿ ಏಸೋದದ ಗಾಳಿ ಬೀಸಿತು. "ಇದುಽ ಒಂದು ರೋಗಾತನ್ನು. ನಿನಗೂ ಅದರ ಸಂಕ ಎಲ್ಲಿ ಬಡೀತದಽಂತ ಅಂಜಿಕಿ ನನಗ." ಅಕ್ಕವ್ವ ಮನಃಪೂರ್ವಕವಾಗಿ ನಕ್ಕು ಬಿಟ್ಟಳು. "ಅಂಜಿಕೀನಽ ಮತ್ತಽ. ಆ ಔಷಧದ ಪೆಟಿಗಿ ಒಂದು ತಲಿ ಮ್ಯಾಲ ಹೊರಸಿ ನನ್ನೂ ಕರಕೊಂಡು ಹೋದರ ನಾನೂ ಬರತೇನಿ." ಭುಜಂಗರಾಯರ ನಗೆಗೆ ಈಗ ಕಣ್ಣು ಹುಟ್ಟಿದವು. "ನನ್ನ ಕಿವಿ ಇನ್ನೂ ನಾಲ್ಕೊಕ್ಷತ್ತಿಟಗೊಂಡಿರಬೇಕೊಂತೇನಿಽ." ಮಾತ ಮಾತಾಡುತ್ತ ಅವರು ಅಕ್ಕವ್ವನ ಹತ್ತಿರ ಹೋಗಿ ಅವಳ ಎರಡೂ ಗಲ್ಲ ಮುಟ್ಟಿ "ಅವತಾರಽರಽ!" ಎಂದು ಅಪ್ಪಾಡಿಸಿದರು. ಅಕ್ಕವ್ವ ಹಿಂದೆ ಸರಕೊಂಡಳು. ಈಗ ಅವರು ನಿಜವಾಗಿ ಹೊರಗೆ ಹೊರಟಂತಾಯಿತು.

---

## ೨೧

## ತಿಳಿಯಬಾರದ್ದು.

ಇತ್ತೀಚೆಗೆ ಭುಜಂಗರಾಯರು ಮನೆಯನ್ನೇ ವರ್ಜ್ಯ ಮಾಡಿಬಿಟ್ಟಿದ್ದರು. ಅಕ್ಕವ್ವನ ಮೇಲೂ ಅಲಕ್ಷ್ಯ. ಹೇಳುವುದಾದರೂ ಯಾರಿಗೆ! ಅಕ್ಕವ್ವನಂತೂ ಮನಸ್ಸಿನಲ್ಲಿಯೇ ಕೊರಗುತ್ತ ನಡೆದಳು. ಅವಳ ತಂದೆತಾಯಿಗಳು ಒಬ್ಬರಮೇಲೊಬ್ಬರು ದೋಷ ಹೊರಿಸಹತ್ತಿದರು. ಯಾರ ಮೇಲೆ ದೋಷ ಹೊರಿಸಿದರೂ ಅವಳ ದುಃಖ ಕಡಿಮೆಯಾಗುವಂತಿದ್ದಿಲ್ಲ.

"ನೋಡಿದ್ಯಾ ನಿನ್ನ ಹಟದ ಪರಿಣಾಮಽ!" ಅಂಣಾರಾಯರು ರೇಗಿ ಮಾತಾಡುತ್ತಿದ್ದರು. "ಹುಡಿಗಿ ಕುತಿಗಿಽ ಕೊಯ್ದಿವಿ ನಾವಿಬ್ಬರೂ ಕೂಡಿ. ಗಂಡಹುಡುಗನ ಹಾಂಗ ಬೆಳಸಿದರ ಸುಖಽನಽ ಕಾಣತಿದ್ಲು."

"ನಾ ಒರೀಲಿಕ್ಕೆ ಹೋಗಿದ್ನೇನು ಆಕಿ ಹಣೆ ಮ್ಯಾಲೇ!"

"ಹಣೆಽ ಏನು ಮಾಡತದ ಗಟ್ಟಿಸಿಗೋಳಿಕ್ಕೆ ಇಲ್ಲ! ಹಣೆ

ಮಾಡತದಂತ! ಕಂಡಾಗ ಬೊಟ್ಟ ತಿಂವಕೊಂಬುದುಽ ಕುರುಡಾದ ವ್ಯೇಂತಳೋದು. ಎಲ್ಲಿಂದೊ ಬೂದಿ ಬಾವಾಸ್ನ ಹಿಡಿದತಂದು ಮನ್ಯಾಗ ಸಾಕಲಿಕ್ಕೆ ಹೋದಿವಿ–'' ಇದೊಂದು ಅಂಗಾರರಾಯರ ಮಾತಿನ ಮಾದರಿ.

ಭುಜಂಗರಾಯರು ಹೋಗುವುದಾದರೂ ಯಾರ ಮನೆಗೆ? ಬೆನ್ನು ಹತ್ತಿ ಅವರ ಮೇಲೆ ಲಕ್ಷ್ಯ ಇಟ್ಟು ನೋಡಿದವರು ಯಾರು! ಒಂದು ದಿನ ಅಂಗಾರರಾಯರೇ ಪ್ರತಿಜ್ಞೆ ಮಾಡಿ ಹೊರಟರು. ಆ ದಿನ ಭುಜಂಗರಾಯರು ಮುಂಬಯಿಗೆ ಹೋದರೆಂಬು ತಿಳಿದು ಬಂತು. ಅವರು ಮರಳಿ ಒಂದು ನಾಲ್ಕೆಂಟು ದಿನಗಳಾದ ಮೇಲೆ ಒಂದು ದಿನ ತೋಪಿನ ಕಡೆಗೆ ಅಡ್ಡಾಡಲಿಕ್ಕೆ ಹೋಗಿದ್ದರು. ಪಶ್ಚಿಮ ಬದುವಿಗೆ ಒಂದು ದೊಡ್ಡ ಸರವು ಬಿದ್ದಿತ್ತು. ಅಲ್ಲಿಯೇ ಒಂದು ಬಾವಿ ತೋಡಿ ಯಾತಕ್ಕೆ ಅನುವು ಮಾಡಿತ್ತು. ಅಂಗಾರರಾಯರಿಷ್ಟು ದೂರ ಎಂದೂ ಬರತಕ್ಕವರಲ್ಲ. ವಿಚಾರದ ಮೋಟರಿಗೊಮ್ಮೆ ಕೀಲಿ ಕೊಟ್ಟರೆ ಗಾಡಿ ಕೀಲಿ ತೀರಿ ನಿಂತರೇ ನಿಲ್ಲಬೇಕು.

ಮಬ್ಬುಗತ್ತಲಾಗುತ್ತ ಬಂತು. ಅಂಗಾರರಾಯರು ತಿರುಗಿದರು. ಯಾರೋ ಇಬ್ಬರು ಮಾತಾಡುತ್ತ ಬರುವುದನ್ನು ನೋಡಿ ಚಕಿತರಾದರು. ಒಬ್ಬರಂತೂ ಭುಜಂಗರಾಯರು. ಹೆಣ್ಣುಮಗಳು ಯಾರು! ಅಂಗಾರರಾಯರು ಸ್ವಲ್ಪ ಅಡ್ಡದಾರಿಗೆ ಬಿದ್ದರು. ಭುಜಂಗರಾಯರ ದನಿ ಕೇಳಬಂತು.

'' ಇನ್ನಿಲ್ಲೆ ನಾ ಇರೋದು ಶಕ್ಯ ಇಲ್ಲಽ. ''

'' ಹಾಂಗಾರಽ ಅಲ್ಯಾರಽ ಏನಿಟ್ಟೀರಿ? ''

'' ಹಾಂಗಲ್ಲಽ ಒಸುಽ, ಈವೊತ್ತಿನ ತನಕಽ ನಾ ಮಂದಿ ಏನಂದಾರು ಬಿಟ್ಟಾರು ಇದರ ಕಡೆ ಲಕ್ಷ್ಯ ಕೊಡತಿದ್ದಿಲ್ಲ. ಅಥವಾ ಅಂಥ ಪ್ರಸಂಗನಽ ಬಂದಿದ್ದಿಲ್ಲಾಂತ ಅನ್ನು.''

'' ಈಗೇನು ಪ್ರಸಂಗ ಬಂದದಽ! ಇಲ್ಯಾರ ಬರಲಿಕ್ಕೆ ಕೂತಾರ!

ನನ್ನ ಮನಿ ಮಾಲೀಕಳು ನಾನು. ನೀವೂ ಸ್ವತಂತ್ರ ಇದ್ದೀರೀಂತ ನಾ ತಿಳಕೊಂಡೇನಿ.'' ಮುಂದಿನ ವಾಕ್ಯದ ಬದಲಾಗಿ ಬಂದು ಉಪರೋಧದ ನಗೆ.

''ನಾ ಸ್ವತಂತ್ರ ಇದ್ದೇನs?'' ಭುಜಂಗರಾಯರು ರೊಚ್ಚಿಗೆದ್ದು ಮಾತಾಡಿದರು. '' ಇಲ್ಲೆ ನಿನ್ನ ಆಳು ಹೋಳು—''

'' ಅಂ— ನನ್ನ ಮನೀಗೆ ಯಾರ ಬರತಾರ ಯಾರ ಇಲ್ಲ ಈ ಪಂಚೇತಿ ಅವರಿಗ್ಯಾಕ! '' ದನಿ ದೂರ ದೂರ ಕೇಳುತ್ತ ಕೇಳದಂತಾಯಿತು.

ಅಂತೂ ಭುಜಂಗರಾಯರಿಗೆ ಈ ಛಲ ಹತ್ತಿರುವದು! ಆಕೆ ಯಾರು! ಅಂಣಾರಾಯರಿಗೆ ಏನು ತಿಳಿಯಬೇಕಾಗಿತ್ತು, ಅದು ಸಂಪೂರ್ಣ ತಿಳಿದುಬಂತು. ಅವರು ವಿಚಾರ ಮಾಡುತ್ತ ಮನೆಗೆ ಬಂದು ಮುಟ್ಟಿದರು. ಅಕ್ಕವ್ವ ವ್ಹರಾಂಡಾದೊಳಗೆ ಶೂನ್ಯದೃಷ್ಟಿಯಿಂದ ಎತ್ತ್ಲೋ ನೋಡುತ್ತ ನಿಂತಿದ್ದಳು. ಅವಳನ್ನೆದುರಿಗೆ ಕಂಡ ಕೂಡಲೆ ಅವರಿಗೆ ತುಂಬಿ ಬಂದು, ಅವರು ಅವಳ ಕೂಡ ಏನೂ ಮಾತಾಡದೇ ತಮ್ಮ ಕೋಣೆಯ ದಾರಿ ಹಿಡಿದರು.

---

## ೨೨

## ಅಂಣಾರಾಯರು ತೋಪಿಗೆ ಹೋಗುವರು.

ತಮಗೆ ತಿಳಿದು ಬಂದ ಪ್ರಕಾರದ ಬಗ್ಗೆ ಅಂಣಾರಾಯರು ರಾಧಾಬಾಯರೆದುರಿಗೇನೂ ಮಾತಾಡಲಿಲ್ಲ. ತಾವೇ ಅಲ್ಲಿ ಇಲ್ಲಿ ಕೇಳಿಕೊಂಡು ನೋಡಿದರು. ಒಂದು ಮಾತಿನ ನಿರ್ಣಯವಾಯಿತು. ಭುಜಂಗರಾಯರು ತಮ್ಮ ದವಾಖಾನೆಯನ್ನು ಮಾವಿನ ತೋಪಿನಲ್ಲಿಯೇ ಒಯ್ದಿಟ್ಟಿದ್ದರು! ತಮ್ಮ ಮಗಳ ಸ್ಥಿತಿ ನೋಡಿ ಕೈಮುಗಿದುಕೊಂಡು ಕೂಡುವುದಂತೂ ಶಕ್ಯವಿಲ್ಲ. ತಾವೇ ಒಮ್ಮೆ ಮಾವಿನ ತೋಪಿಗೆ ಹೋಗಿ ಅಲ್ಲಿಯ ಆ ಹೆಂಣುಮಗಳನ್ನು ಕಂಡುಕೊಂಡು

ಬರಬೇಕೆಂದು ಅಂಗಾರಾಯರು ತಮ್ಮ ಮನಸ್ಸಿನಲ್ಲಿ ಮಾಡಿಟ್ಟುಕೊಂಡರು. ಗುರುತು ಪರಿಚಯವಿಲ್ಲದೇ ಯಾವಳಾದರೊಬ್ಬ ಹೆಣ್ಣು ಮಗಳಿಗೆ ಇಂಥ ಸೂಕ್ಷ್ಮ ಮಾತು ಕೇಳುವುದು ಗೃಹಸ್ಥತನಕ್ಕೆ ಅಪ್ರಶಸ್ತವೇ ಸರಿ. ಭುಜಂಗರಾಯರಿಗೇ ಕೇಳುವುದು ರಾಜಮಾರ್ಗ. ಆದರೂ ವಿಚಾರ ಮಾಡಿ ಅಂಗಾರಾಯರು ಅಡ್ಡದಾರಿಯನ್ನೆ ಆರಿಸಿದರು.

ಒಂದು ದಿನ ನಸುಕು ಹರಿಯುವುದರೊಳಗಾಗಿ ತೋಪಿಗೆ ಹೊರಟರು. ಅಲ್ಲಿ ಹೋಗಿ ಮುಟ್ಟಿದಾಗ ಎಂಟು ಬಡಿದು ಹೋಗಿತ್ತು. ಬಾಯರು ಈಗ ಹಾಸಿಗೆಯನ್ನು ಬಿಟ್ಟಿರಬಹುದಷ್ಟೇ. ಯಾರೋ ಭೆಟ್ಟಿಗೆ ಬಂದಿರುವರೆಂದು ಕೇಳಿ ಅವರಿಗಾಶ್ಚರ್ಯವೆನಿಸಿತು.

"ಶಾರಕ್ಕ, ನೋಡು ಯಾರ ಬಂದಾರs!" ಶಾರಮ್ಮ ನೋಡಿ ಬಂದಳು. "ಗುರ್ತದವರಲ್ಲಲ್ರೆಪ್ಪs."

"ಯಾಕ ಬಂದಾರ ಕೇಳಿದೇನು !"

"ಹ್ಯಾಂಗ ಕೇಳಬೇಕ್ರೆಪ್ಪ."

ಬಾಯರು ವಿಚಾರದಲ್ಲಿ ಮಗ್ನರಾದರು. ಆದರೂ "ಇದೇ ಈಗ ಬರತೇನಂತ ಹೇಳು ಅವರಿಗೆ" ಎಂದು ತಮ್ಮೊಳಗೆ ಪುಟು ಪುಟು ಮಾತಾಡಿಕೊಂಡರು. "ನೋಡು, ನಿನಗೇನಾರs ತಿಳದ ಬಂದರs." ಶಾರಮ್ಮ ಹೊರಗೆ ಬಂದು ಅಂಗಾರಾಯರಿಗೆ ಕೂಡಲಿಕ್ಕೆ ಹೇಳಿ ಅಲ್ಲಿಯೇ ನಿಂತುಕೊಂಡಳು. ಏನೋ ಸಹಜ ಕೇಳಿದಂತೆ "ಏನು ಕೆಲಸ ಇತ್ತು!" ಎಂದು ಕೇಳಿದಳು. ಇವಳೇ ಬಾಯರಿರಬಹುದೆಂದು ಅಂಗಾರಾಯರ ಕಲ್ಪನೆಯಂತೂ ಆಗಲಿಲ್ಲ. "ಭೆಟ್ಯಾಗಬೇಕಾಗೇದ" ಇಷ್ಟೇ ಹೇಳಿ ಸುಮ್ಮನಾದರು. ಅಂಗಾರಾಯರು ಹಾಕಿಕೊಂಡ ಮುಕ ಎತ್ತಿ ಅದರಾಚೆಗೆ ನೋಡುವುದು ಶಾರಮ್ಮನ ತುತ್ತಲ್ಲ. ನಿರಾಶಳಾಗಿ ಅವಳು ಒಳಗೆ ಹೊರಟು ಹೋದಳು. ಪ್ರಾತರ್ವಿಧಿ ಎಲ್ಲ ಮುಗಿಸಿಕೊಂಡು ಬಾಯರೂ ತಯಾರಾಗಿ ಬಿಟ್ಟಿದ್ದರು.

ಅಂಗಾರರಾಯರು ಪಡಸಾಲೆಯಲ್ಲಿ ಕುಳಿತುಕೊಂಡಿದ್ದರು. ಬಾಯರು ಹೊರಗೆ ಬಂದು ನಿಂತರು. ಅಂಗಾರರಾಯರ ಕಣ್ಣು ಕುಕ್ಕಿದುವು. ಕ್ಷಣ ಹೊತ್ತು ಆ ಕುಂಕುಮವಿಲ್ಲದ ಎತ್ತರ ಹಣೆಯ ಕಡೆಗೆ ನೋಡುತ್ತಿದ್ದರು. ಬಾಯರ ಮನಸ್ಸಿನಲ್ಲೂ ಅಂಗಾರರಾಯರನ್ನು ನೋಡಿ ಒಂದು ಪ್ರಕಾರದ ಆದರ ಹುಟ್ಟಿತು.

"ಏನು ಕೆಲಸಿತ್ತು ನನ್ನ ಕಡೆ!" ಬಾಯರು ನಮ್ರಭಾವದಿಂದ – ನೈಸರ್ಗಿಕ ಮರ್ಯಾದೆಯಿಂದ ಕೇಳಿದರು.

"ನಿಮಗ ನನ್ನ ಗುರ್ತಿಲ್ಲ. ಆದರೂ ಸಂಕೋಚ ಅನಸೋ ಕಾರಣ ಇಲ್ಲ. ನನಗೂ ಒಬ್ಬ ಮಗಳಿದ್ದಾಳ."

ಅಂಗಾರರಾಯರ ಈ ಪ್ರಸ್ತಾವನೆಯನ್ನು ಕೇಳಿ ಬಾಯರು ಹತಬುದ್ಧರಾದರು.

"ತಮಗೇನ ಬೇಕಾಗೇದs ಅನಷ್ಟು ತಿಳಿಸರs–" ಬಾಯರು ಸ್ವಲ್ಪ ಸಂಕೋಚ ಮಾಡಿಕೊಂಡೇ ಕೇಳಿದರು.

ಈಗ ಅಂಗಾರರಾಯರು ತಮ್ಮ ಮಾತಿನ ಕ್ರಮವನ್ನು ನಿಶ್ಚಯಿಸಿ ಬಿಟ್ಟರು. "ನಿಮಗ ಡಾಕ್ಟರ ಭುಜಂಗರಾಯರ ಗುರ್ತ ಇಲ್ಲೇನು!"

ಇದೊಂದು ಸರಳ,–ಯಾವ ಪ್ರಕಾರದ ಕೊಂಕು ಇಲ್ಲದ ಪ್ರಶ್ನೆ. ಬಾಯರು ಮಾತ್ರ ಒಳ್ಳೆಯ ಪೇಚಿನಲ್ಲಿ ಬಿದ್ದರು. "ಯಾಕs!" ಎಂದಿಷ್ಟೇ ಕೇಳಿ ಅಂಗಾರರಾಯರ ಮೋರೆಯ ಕಡೆಗೆ ನೋಡುತ್ತ ನಿಂತುಕೊಂಡರು. ಅಂಗಾರರಾಯರ ಲಕ್ಷ್ಯ ಈಗೆಲ್ಲಿತ್ತೊ! ಅವರು ಮತ್ತೆ "ಭುಜಂಗರಾಯರ ಪರಿಚಯ ಅದs ನಲ್ಲs ನಿಮಗ!" ಎಂದು ಕೇಳಿದರು.

ಬಾಯರ ಆಯುಷ್ಯದ ಚಿತ್ರಪಟದಲ್ಲಿ ಒಂದೊಂದು ಚಿತ್ರ ಮೂಡುತ್ತಿತ್ತು. ಹೇಳತಕ್ಕಂಥದೇನಿರಲಿಲ್ಲ. ಅಥವಾ ಈಗ ಅಂಥದೇನೂ ಉಳಿದಿರಲಿಲ್ಲ. ಬಾಯರಿಗೆ ಮಾತಾಡುವುದಕ್ಕೆ ತುಸು ಸಂಕೋಚ

ವೆನಿಸಿತು. ಸ್ಪಷ್ಟೋಕ್ತಿಯು ಕಮಲಾಬಾಯರ ನೆನಪಾಗದಿರಲಿಲ್ಲ. ಆದರೂ ನಗೆಮಾತಿಗೆ ಹಾಕಿ "ನಾನೂ ಮೊನ್ನೆ ಜಡ್ಡಿನಿಂದ ಎದ್ದೇನಿ. ಅವರದ್ದ ನಡದಿತ್ತು."

"ನಿಮ್ಮೂರು ಯಾವದು!" ಅಂಗಾರರಾಯರ ಬಾಯಿಂದ ಹೊರಟು ಬಿಟ್ಟಿತು. ಇದು ಬಾಯರಿಗೆ ಅತಿಪ್ರಸಂಗವೆನಿಸದೇ ಇರ ಲಿಲ್ಲ. ತಮ್ಮೆದುರಿಗಿದ್ದ ಈ ಗೃಹಸ್ಥನಿಗೆ ಸಭ್ಯತೆಯು ಗುರುತಿರಲಿಕ್ಕಿಲ್ಲ ವೆಂಬ ಕಲ್ಪನೆಯೂ ಅವರ ಮನಸ್ಸಿನಲ್ಲಿ ಬಾರದಿರಲಿಲ್ಲ. "ನೀವು ಪೋಲೀಸರಂತೂ ಅಲ್ಲ" ಬಾಯರು ಸಹಜ,–ನಗನಗುತ್ತ ಕೇಳಿದರೂ ಅದರಲ್ಲಿಯ ತಿರಸ್ಕಾರ ಒಡೆದು ಕಾಣದಿರಲಿಲ್ಲ.

"ನಾ ಪೋಲೀಸನೂ ಅಲ್ಲ, ನಿಮಗಿದೆಲ್ಲ ಕೇಳೋ ಅಧಿಕಾರನೂ ನನಗಿಲ್ಲ. ಈ ಮಹಾರಾಯ ಯಾವ ಹುಡಿಗಿನ್ನ ಕುತಿಗಿನ್ನ ಕೊಯ್ದಾನನ್ನ, ಆಕಿನ್ನ ತಂದಿ ನಾನು–" ಅಂಗಾರರಾಯರ ದನಿ ಕುಗ್ಗಿತು. ಬಾಯರ ಮೋರೆಯ ಮೇಲೂ ಬಿಳಿಛಾಯೆ ಒಡೆಯಿತು. "ನಾನನ್ನ ಕುತಿಗಿ ಕೊಯ್ದು–ಈ ಮೂರ್ಖನ ಕೊಳ್ಳಾಗ ಕಟ್ಟಿದೆ–" ಮುಂದೆ ಬಾಯ ರಿಗೆ ಹೆಚ್ಚಿಗೆ ಏನೂ ಹೇಳಬೇಕಾಗಿದ್ದಿಲ್ಲ. ಅವರು ನಕ್ಕು ತಮ್ಮ ಮನ ಸ್ಸಿನಲ್ಲಿ ಅಂದುಕೊಂಡರು, "ಹುಂನ್ನ– ಭುಜಂಗರಾಯರ ಯಜಮಾ ನರ ಹಾಂಗಾರ!" ಇಷ್ಟು ಸಮರ್ಪಕ ಶಬ್ದ ನೆನಪಾದದ್ದನ್ನು ಕಂಡು ಅವರಿಗೆ ಕೌತುಕವೆನಿಸಿತು. "ಈ ನಿಮ್ಮ ಮನಿನ್ನ ಮಾತಿನ್ಯಾಗ ನಂದೇನು ಸಂಬಂಧನ್ನ!"

"ತಂಗಿ, ಸಿಟ್ಟಿಗೆ ಬರಬ್ಯಾಡಾ, ನೀನೂ ನನಗ ಮಗಳ ಹಾಂಗಿ ದ್ದೀಂತ ಹೇಳತೇನಿ. ಒಂದು ಮಾಡತೀಯಾ!"

"ಏನಂತೀರಿ ನೀವು!"

"ಆತನ್ನ ಮನೀಗೆ ಬರಗೊಡಬ್ಯಾಡಾ."

ಬಾಯರ ಸಿಟ್ಟು ತಲೆಗೇರಿತು. ಅವರು ರೇಗಿ "ನನ್ನ ಮನಿಗೆ ಯಾರ ಬರಬೇಕು ಯಾರ ಬರಬಾರದು ಇದನ್ನ ಯಾರು ಹೇಳಿಕೊಡ ಲಿಕ್ಕೆ ಬ್ಯಾಡಾ." ಎಂದು ಮೋರೆ ತಿರುವಿ ನಿಂತರು.

"ಆತ ನಿಂದಶಿಂದಽ ಹುಚ್ಚಾಗ್ತಾನಽ. ನನ್ನ ಮಗಳ ಸುಖ ನಿನ್ನ ಮ್ಯಾಲವಲಂಬಿಸೆದಽ–ಅದಕ್ಕ ಸೆರಗ ಒಡ್ಡಿ ಬೇಡಿಕೋತೇನಿ."

"ರಾಯರಽ, ಇಷ್ಟೊತ್ತನಕ ಸುಮ್ಮನಿದ್ದೆ. ಹೆಂಣಮಕ್ಕಳಿದ್ದ ವರಿಗೆ ಸಿಕ್ಕ ಸಿಕ್ಕ ಹಾಂಗ ಮಾತಾಡೋದು ನಿಮಗ ಶೋಭಸೋದಿಲ್ಲ. ಏಳ್ರಿನ್ನ. ನನಗ ಇಲ್ಲದ್ದ ಮಾತಾಡಲಿಕ್ಕೆ ಸವಡಿಲ್ಲ." ಎಂದು ಬಾಯರು ಒಳಗೆ ನಡೆದರು.

ಅಂಣಾರಾಯರು "ನಿನ್ನ ಮರ್ಜಿ!" ಎಂದು ತಾವೂ ಎದ್ದು ಬಿಟ್ಟರು.

---

## ೨೩

## ಮತಿಗೆಟ್ಟರೆ ಮಂಗನ ಬಾಯಿ

ಭುಜಂಗರಾಯರು ತಾಳತಂತ್ರ ಎಲ್ಲ ಬಿಟ್ಟು ಬಿಟ್ಟಿದ್ದರು. ಊಟಕ್ಕೊಂದು ಮನೆಗೆ ಬರುತ್ತಿದ್ದರಷ್ಟೇ. ಇತ್ತೀಚೆಗೆ ಸ್ವಲ್ಪ ಮದಿರಾದೇವಿಯ ಭಕ್ತರೂ ಆಗಿರಬಹುದೆಂದು ತೋರುತ್ತಿತ್ತು. ಡಾಕ್ಟರರ ಕೆಲಸವೆಂದರೆ ಹದಿನೇಟು ತರದ ವಾಸನೆಯ ಔಷಧದ ಸಂಸಾರ. ಇದೊಂದು ವಾಸನೆಯಾದರೂ ಯಾಕೆ ದಕ್ಕಬಾರದು!

ಅಕ್ಕವ್ವ ಮನೆಯೊಳಗೆ ಯಾರಕೂಡ ವಿಶೇಷ ಮಾತಾಡುತ್ತಿದ್ದಿಲ್ಲ. ರಾಧಾಬಾಯರ ಕೋಣೆಗೂ ವಿಶೇಷ ಹೋಗುತ್ತಿದ್ದಿಲ್ಲ. ರಾಧಾಬಾಯರು ಅವಳನ್ನು ಕಂಡಕೂಡಲೆ "ಅಕ್ಕು–ಏನಾತಽ ನಿನ್ನ ಸ್ಥಿತಿ–ನಿನ್ನ ಗಂಡಽ–ಗಂಡಲ್ಲ ಕಟಕ. ನನ್ನ ಮುಂದಽ ದೇವರು ನಿನ್ನ ಕಣ್ಣ ಮುಚ್ಚಬೇಕು. ಇವರು ಗಂಡಂದರಲ್ಲಽ–ಹೋದ ಜನ್ಮದ ಭಾಗಾದೇರು!" ಒಮ್ಮೆ ಈ ಪುರಾಣಕ್ಕೆ ಪ್ರಾರಂಭವಾಯಿತೆಂದರೆ ಮಾತಾಡಿ ಮಾತಾಡಿ ಅಚೇತನರಾಗಿ ಬೀಳುವತನಕ ಸರತಿ ಬರುತ್ತಿತ್ತು. ಅಕ್ಕವ್ವ ಈ ಪರ್ಯವಸಾನಕ್ಕೆ ಅಂಜುತ್ತಿದ್ದಳು.

ಬಂಗಲಿಯಿಂದ ಅಷ್ಟೇ ನಾಲ್ಕಾರು ಫರ್ಲಾಂಗಿನ ಮೇಲೊಂದು ಹಾಳುಗುಡಿಯಿತ್ತು. ಅಲ್ಲಿ ಒಂದೊಂದು ದಿನ ಸಂಜೆಗೆ ಅಕ್ಕವ್ವ

ಹೋಗಿ ಕುಳಿತುಕೊಳ್ಳುತ್ತಿದ್ದಳು. ಒಂದೊಂದು ದಿನ ಅಲ್ಲಿಂದ ಹೊರ ಡುವುದಕ್ಕೂ ತಡವಾಗುತ್ತಿತ್ತು. ತಡವಾದರೂ ಅವಳನ್ನು ಕೈ ಹಿಡಿದು ಕೇಳುವವರಾರು!

ಈವೊತ್ತೂ ತಡವಾಗಿತ್ತು. ಅಂಕುಡೊಂಕಾದರೂ ಕಾಲೊ ಳಗೆ ಸುಳಿದಾಡಿದ ದಾರಿ. ತುಸು ವೇಗದಿಂದ ಕಾಲೊಗೆಯುತ್ತ ನಡೆ ದಿದ್ದಳು. ಏನೋ ಕಾಲಿಗೆ ತೊಡಕಿ ನೆಲಕ್ಕುರುಳಿದಳು. "ಅಂssss–" ಎಂದು ನರಳಿದಂತೆ ಕೇಳ ಬಂತು. ಯಾವುದೋ ಪ್ರಾಣಿ ಇರಬಹು ದೆಂದೆನಿಸಿ ಓಡಿಯೇ ಹೋಗುವವಳಿದ್ದಳು. ಅಷ್ಟರಲ್ಲಿ "ಯಾ–ಯಾ– ಯಾರವರು" ಎಂದು ಯಾರೋ ತೊದಲುತ್ತ ಮಾತನಾಡಿದಂತೆ ಕೇಳಿ ಸಿತು. ಭುಜಂಗರಾಯರ ದನಿಯಂತೆನಿಸಿದ್ದರಿಂದ ಗಾಬರಿಯಾಗಿ ಹತ್ತಿರ ಹೋಗಿ ಕುಳಿತುಕೊಂಡಳು. ಯಾವುದೋ ಒಬ್ಬ ಪ್ರಾಣಿ ಕುಡಿದು ಸ್ಮೃತಿ ತಪ್ಪಿ ಬಿದ್ದುಕೊಂಡಿದ್ದ. "ಏ–ನೀ ಯಾsರು–" ಇನ್ನಂತೂ ಸಂಶಯವುಳಿಯಲಿಲ್ಲ. ಅವಳು ಸ್ವಲ್ಪ ವಿಚಾರ ಮಾಡಿ ದೇವರ ಹೆಸರು ತೆಗೆದುಕೊಂಡು ಮೈಮೇಲೆ ಕೈಯಾಡಿಸಿ ನೋಡಿ ದಳು.

ಜೇಬಿನಲ್ಲೊಂದು ಕಡ್ಡಿಯ ಪೆಟಿಗೆ ಖಳಖಳ ಮಾಡುತ್ತಿತ್ತು. ಅದನ್ನು ತೆಗೆದುಕೊಂಡು ಒಂದು ಕಡ್ಡಿ ಕೆರೆದಳು. ಆ ಬೆಳಕಿನಲ್ಲಿ ಭುಜಂ ಗರಾಯರು ಅಸ್ತವ್ಯಸ್ತವಾಗಿ ಬಿದ್ದದ್ದು ಕಣ್ಣಿಗೆ ಬಿತ್ತು. ಅಕ್ಕವ್ವ ಅವರನ್ನು ಎಂದೂ ಈ ಸ್ಥಿತಿಯಲ್ಲಿ ನೋಡಿದ್ದಿಲ್ಲ. ಅವರಿಗೆ ಈ ಚಟ ಹತ್ತಿರಬಹುದೆಂಬ ಕಲ್ಪನೆ ಸಹ ಅವಳ ಮನಸ್ಸಿನಲ್ಲಿ ಬಂದಿದ್ದಿಲ್ಲ. ಕ್ಷಣ ಹೊತ್ತು ಏನೂ ತೋಚದಾಗಿ ಗಲ್ಲದ ಮೇಲೆ ಕೈಯಿಟ್ಟು ಕುಳಿತು ಕೊಂಡಳು. ಮನೆಗಂತೂ ಕರಕೊಂಡು ಹೋಗಬೇಕು! ತಾನು ಹೆಣ್ಣುಮಗಳು. ತನ್ನೊಬ್ಬಳಿಂದ ಕೆಲಸ ಸಾಗಬೇಕಾದರೂ ಹೇಗೆ! ಮನೆಗೆ ಹೋಗಿ ಯಾರನ್ನಾದರೂ ಕರೆತರುವುದೂ– ಊಂಹುಂ– ಈ ಸ್ಥಿತಿಯಲ್ಲಿ ಯಾರಾದರೂ ಭುಜಂಗರಾಯರನ್ನು ನೋಡಿದ್ದರೆ ಅವ ಳಿಗೆ ತಲೆ ಒಡೆದಂತೇ ಆಗುತ್ತಿತ್ತು. ಏನೇ ಆಗಲಿ, ಧೈರ್ಯ ತಾಳಿ

ತಾನೆ ಅವರನ್ನು ಮನೆಗೆ ತಂದು ಯಾರಿಗೂ ತಿಳಿಯದಂತೆ ಕೋಣೆಯಲ್ಲಿ ಮಲಗಿಸಬೇಕೆಂದು ನಿಶ್ಚಯಿಸಿದಳು. ಅತಿಪ್ರಯಾಸದಿಂದ ಎಬ್ಬಿಸಿ ಅಂತೂ ಕೂಡಿಸಿದಳು. "ಮನಿಽಗೆ ಹೋಗೋಣಲ್ಲಽ !" ಎಂದು ಕೇಳಿದಳು. ಭುಜಂಗರಾಯರೂ ತತ್ತರಿಸುತ್ತ ಅವಳ ಮೈಮೇಲೆ ಭಾರ ಹಾಕಿ ನಡೆದರು. ದಾರಿಯಲ್ಲಿ ಬಾಯಿಂದ ಗ್ರಾಮೋಫೋನ ರೆಕರ್ಡು ಹಾಗೇ ನಡೆದಿತ್ತು. "ನಡಿ ನನ್ನ ಧ್ಯೋಪಿಗೆ ಕರಕೊಂಡು—ಅಲ್ಲೆ ಬಸುಽ ಇದ್ದಾಳಽ—ಬಕ್ಷಿಸ ಕೊಡಸ್ತೇನಿಽ—ಮನ್ಯಾಗ ಅಕ್ಕ ಇದ್ದಾಳ—ನಾ ಕುಡದಿಲ್ಲಽ ಆದರೂ ಜಬಕದಲೆ ಹೊಡಿಽತಾಳಽ—ಆ ಅಂಣಪ್ಪಗೂ ಸೊಕ್ಕದಽ— ಅಂಣಾ ಅಪ್ಪ—ಅಪ್ಪ ಅಂಣಾ — ಹಾ—ಹಾ—ಹಾ—ಬಸು ಛಂದಿದ್ದಾಳಽ—ನೋಡಿಲ್ಲೇನು—" ಬಸುವಿನ ವರ್ಣನೆಗೆ-ಅವಳ ಅಂಗ ಪ್ರತ್ಯಂಗಗಳ ವರ್ಣನೆಗೆ ಪ್ರಾರಂಭವಾಯಿತು. ಬರಬರುತ್ತ ಅಷ್ಟು ಶೃಂಗಾರರಸವು ಹಾಗೇ ಇಳಿದು ಬಿಟ್ಟಿತು. ಅಕ್ಕವ್ವನಿಗೆ ತನ್ನ ಮೈಮೇಲೆ ಭಾರ ಹಾಕಿ ನಡೆದವ ಮನುಷ್ಯನೋ ಪಶುವೋ ಎಂಬ ಭ್ರಾಂತಿ ಹುಟ್ಟಿ ಅವಳು ಆತನನ್ನು ನೂಕಿಕೊಟ್ಟು ಬಿಟ್ಟಳು. ಕೂಡಲೆ ಧಪ್ ಎಂಬ ಸಪ್ಪಳ ಕೇಳಬಂತು. ಗಾಬರಿಯಾಗಿ ವಿದ್ಯುದ್ದೀಪ ಹಿಡಿದು ನೋಡಿದಳು,—ಭುಜಂಗರಾಯರ ತಲೆಗೆ ಪೆಟ್ಟು ತಾಕಿ ರಕ್ತ ಪುಟಿಯುತ್ತಿತ್ತು. ಹಿಂದೆಮುಂದೆ ನೋಡದೆ ತನ್ನ ಸೀರೆಯ ಸೆರಗು ಹರಿದು ಮೊದಲು ತಲೆಗೆ ಪಟ್ಟಿ ಕಟ್ಟಿದಳು. ಹಾಗೂ ಹೀಗೂ ಮಾಡಿ ಭುಜಂಗರಾಯರನ್ನು ಮನೆಗೆ ತಂದು ಕೋಣೆಯಲ್ಲಿ ಮಂಚದ ಮೇಲಂತೂ ಮಲಗಿಸಿದಳು.ಆ ಮೇಲೆ ಮೊದಲಿನ ಪಟ್ಟಿ ಬಿಚ್ಚಿ ಗಾಯ ತೊಳೆದು ಬ್ಯಾಂಡೆಜಿನ ಪಟ್ಟಿ ಕೊಟ್ಟಳು. ಭುಜಂಗರಾಯರ ಶಬ್ದ ಭಾಂಡಾರದಿಂದ ಇನ್ನೂ ಒಂದೊಂದು ರತ್ನ ಹೊರಬೀಳುತ್ತಲೇ ಇತ್ತು. ಕೊನೆಗೊಮ್ಮೆ ಅವರು ನಿದ್ರಾವಶರಾದರು. ಅವಳೂ ಅಲ್ಲಿಯೇ ಒಂದು ಆರಾಮಖುರ್ಚಿಯ ಮೇಲೆ ಮಲಕೊಂಡಳು.

..............................

ಮರುದಿನ ಭುಜಂಗರಾಯರೆಚ್ಚತ್ತಾಗ ಹೊತ್ತು ಏರಿ

ಹೋಗಿತ್ತು. ಅವರ ತಲೆಯಲ್ಲಿ ಏನೋ ಒಂದು ಗೊಂದಲ ನಡೆದಿತ್ತು. ರಾತ್ರಿಯ ಯಾವ ಸಮಾಚಾರವೂ ಅವರ ನೆನಪಿಗೆ ಬರಲೊಲ್ಲದು. ಮನೆಗೆ ಯಾರು ತಂದು ಮುಟ್ಟಿಸಿರಬಹುದೆಂಬುದೂ ನೆನಪಿಗೆ ಬರಲಿಲ್ಲ. ತಲೆಗೆ ಕೈಹಚ್ಚಿ ನೋಡಿದರು; ಅಲ್ಲಿ ಬ್ಯಾಂಡೇಜು. ತಮ್ಮನ್ನು ಅಕ್ಕವ್ವನೂ ಈ ಸ್ಥಿತಿಯಲ್ಲಿ ನೋಡಿರಬಹುದೆಂಬ ಕಲ್ಪನೆ ಮಾತ್ರ ಮೇಲಿಂದ ಮೇಲೆ ಚುಚ್ಚುತ್ತಿತ್ತು. ಅವರು ವಿಷಣ್ಣರಾಗಿ ಹಾಸಿಗೆಯ ಮೇಲೆ ಕುಳಿತುಕೊಂಡರು. ಮೈಯೆಲ್ಲ ನೋವುನೋವು ಆಗಿ ಹೋಗಿತ್ತು.

ಅಕ್ಕವ್ವ ಬಂದು ಅವರೆದುರಿಗೆ ಒಂದು ಟೇಬಲ್ ಎಳೆದು ಅದರ ಮೇಲೆ ಬಿಸಿನೀರು, ಟೂಥ್‌ಪೇಸ್ಟ್, ಬ್ರಶ್, ಮತ್ತು ಒಂದು ಇಸ್ಪೇಮಲ್ ಬುಟ್ಟಿ ಇವನ್ನೆಲ್ಲ ಇಟ್ಟು ಹೊರಟುಹೋದಳು. ಭುಜಂಗರಾಯರು ಮುಖಮಾರ್ಜನೆಯ ಶಾಸ್ತ್ರ ಮುಗಿಸಿದರು. ಅಕ್ಕವ್ವ ಬಂದಾಗ ಅವಳ ಮೋರೆಯ ಕಡೆಗೆ ನೋಡುವ ಧೈರ್ಯ ಆಗಿದ್ದಿಲ್ಲ. ಈಗ ಮಾತ್ರ ಅವಳ ಮನಸ್ಸಿನಲ್ಲಿಯ ವಿಚಾರ ತಿಳಕೊಳ್ಳುವ ಬಗ್ಗೆ ಚಡಪಡಿಕೆ ಹತ್ತಿತು.

ಅಕ್ಕವ್ವ ಚಹಾದ ಕಿಟಲಿ, ಒಂದು ಕಪ್ ತೆಗೆದುಕೊಂಡು ಬಂದಳು. ಟೇಬಲ್ ಸ್ವಚ್ಛ ಮಾಡಿ ಮುಖಮಾರ್ಜನೆಯ ಸಂಭಾರಗಳನ್ನೆಲ್ಲ ಹೊರಗಿಟ್ಟು ಕಿಟಲಿ ಕಪ್ ಟೇಬಲ ಮೇಲಿಟ್ಟು ಭುಜಂಗರಾಯರ ಚಹಾ ಮುಗಿಯುವ ದಾರಿ ನೋಡುತ್ತ ನಿಂತುಕೊಂಡಳು. ಭುಜಂಗರಾಯರು ಅವಳ ಕಡೆಗೆ ನೋಡಿದರು. ಆಗ ಅವಳು ಅಲ್ಲಿ ಹಾಸಿದ್ದನ್ನು ಸರಿ ಮಾಡುವುದರಲ್ಲಿ ತೊಡಗಿದ್ದಳು. ಅವರು ಏನೂ ಮಾತಾಡದೆ ಚಹಾ ಅಂತೂ ಮುಗಿಸಿದರು. ಏನೋ ಮಾತಾಡಿಸಬೇಕೆಂದು ಸ್ವಲ್ಪ ಶುಷ್ಕವಾಗಿ ನಕ್ಕು "ತಮ್ಮ ಚಹಾ ಆಗಿಲ್ಲ ಕಾಣುತ್ತದಿನ್ನೂ—" ಎಂದು ತಮ್ಮ ಕಪ್ಪಿನಲ್ಲಿ ಚಹಾ ಸುರುವಿದರು.

"ಅಂಽ ಹಂಽ— ಆ ಕಪ್ ಬ್ಯಾಡಾ—ಎಂಜಲಾಗೇದ—"

"ಆದರೇನಾತು—ನನ್ನ ಎಂಜಲ. ನಮಗೆಲ್ಲಾ ನಡಿತದ."

"ನಿಮಗ ನಡದೀತು. ನನಗ ನಡಿಯೋದಿಲ್ಲಲ್ಲ." ಎಂದು ಆ ಚಹಾ ಪುನಃ ಕಿಟಲಿಯಲ್ಲಿ ಸುರುವಿ ಕಿಟಲಿ ಕಪ್ ತೆಗೆದುಕೊಂಡು ಹೊರಟುಹೋದಳು.

ಭುಜಂಗರಾಯರಿಗವಳ ಮಾತಿನ ಅರ್ಥ ತಿಳಿಯಲಿಲ್ಲ. ಆದರೂ ಏನೋ ಕೊಂಕು ಮಾತು ಇದ್ದಿರಬೇಕೆಂದು ಮನಸ್ಸಿನಲ್ಲಿ ಬಾರದಿರಲಿಲ್ಲ.

---

## ೨೪

## ಸ್ತ್ರೀಸ್ವಭಾವದ ಸೂಕ್ಷ್ಮತರಂಗ.

ಭುಜಂಗರಾಯರ ಮಾತಿನಲ್ಲಿ ತೋಪಿನ ಹೆಸರು ಬಂದಿತ್ತು. ಅಲ್ಲಿಯ ಯಾವಳೋ ಒಬ್ಬ ಬಸು— ಆಕೆಯ ವಿಷಯ ಮಾತ್ರ ಪೂರಾ ಗೊತ್ತಿದ್ದಿಲ್ಲ. ಅಕ್ಕವ್ವ ವಸ್ತುತಃ ಭುಜಂಗರಾಯರ ಸ್ವಭಾವದಲ್ಲಾದ ಬದಲಿನ ಕಡೆಗೆ ವಿರಕ್ತಿಯಿಂದಲೇ ನೋಡುತ್ತಿದ್ದಳು. ಆದರೂ ಅವರಿಗೆ ಇಷ್ಟು ಹುಚ್ಚು ಹಿಡಿಸಿದ ಈ ಬಸುವನ್ನು ಒಮ್ಮೆ ನೋಡಬೇಕೆಂಬ ಕುತೂಹಲ ಆಗಾಗ ಮನಸ್ಸಿನಲ್ಲಿ ಹುಟ್ಟುತ್ತಿತ್ತು. ಭುಜಂಗರಾಯರ ತಲೆಯ ಗಾಯ ಇನ್ನೂ ಮಾಯ್ದಿದ್ದಿಲ್ಲ. ಅವರಿನ್ನೂ ಮನೆಬಿಟ್ಟು ಹೊರಗೆ ಅಡ್ಡಾಡುವಂತಿದ್ದಿಲ್ಲ. ಇದೇ ಸದ್ದಿನಲ್ಲಿ ಒಮ್ಮೆ ಮಾವಿನ ತೋಪಿಗೆ ಹೋಗಿ ಬರಬೇಕೆಂದು ಮಾಡಿದಳು.

ಆ ದಿನ ಊಟ ಉಡಿಗೆ ಮುಗಿಸಿ ಮೋಟರಿನಲ್ಲಿ ಕುಳಿತುಕೊಂಡು ಮಾವಿನ ತೋಪಿಗೆ ನಡೆದಳು. ತೋಪಿಗೆ ಬಂದು ಮುಟ್ಟಿದ ಮೇಲೆ ಒಮ್ಮೆಲೆ ಒಳಗೆ ಹೋಗುವುದಂತೂ ಜೀವದ ಸುತ್ತ ಬಂತು. ಒಮ್ಮೆ ಹಾಗೇ ತಿರುಗಿ ಹೋಗಿಬಿಡಬೇಕೆಂತಲೂ ಅನಿಸಿತು. "ಅಕ್ಕೊಬಾಯಿ"ರ ಈ ಸಂಕೋಚದ ಸ್ವಭಾವ ನೋಡಿ ಕೃಷ್ಣಾ ನಕ್ಕು ತಾನೇ ಒಳಗೆ ಹೋಗಿ "ಭುಜಂಗರಾಯರ ಮನಿಯವರು ಬಂದಾರ್ರಿ–" ಎಂದು ಹೇಳಿದ. ಬಾಯರು ಅದೇ ಊಟ ಮುಗಿಸಿದ್ದರು. ಅವರು ಆತನ ಕೂಡ ಮೋಟರಿನ ವರೆಗೆ ಬಂದೇ ಬಿಟ್ಟರು. ದೃಷ್ಟಿಗೆ ದೃಷ್ಟಿ ಎದು

ರಾಯಿತು. ಬಾಯರ ಮನಸ್ಸಿನಲ್ಲಿ ಮತ್ಸರದ ಒಂದು ಸೆಳವು ಹಾಯ್ದು ಹೋಯಿತು. ಅಕ್ಕವ್ವನ ಹೃದಯದಲ್ಲೂ ಅಸೂಯೆಯದೊಂದು ಸೂಕ್ಷ್ಮ ಸ್ಪಂದನದ ಆಭಾಸವಾಗದೇ ಇರಲಿಲ್ಲ. ಈ ಸ್ತ್ರೀಯರಿಬ್ಬರೂ ಭುಜಂಗರಾಯರ ಆಯುಷ್ಯದಲ್ಲಿ ಒಂದಿಲ್ಲೊಂದು ಬಗೆಯಿಂದ ಕೂಡಿದವರು. ಈ ಕ್ಷಣವೆಂದರೆ ಅವರಿಬ್ಬರ ಆಯುಷ್ಯದ ಮೇರುಮಣಿಯೇ ಸರಿ.

“ಯಾಕ! ಇಲ್ಲೇಽ ಕೂತರೆಲ್ಲ! ಒಳಗಽಬಽ ನಡಿಽರಿಽ.” ಬಾಯರು ಅಗತ್ಯ ತೋರಿಸಿದರು. ಅಕ್ಕವ್ವ ಏನೂ ಮಾತಾಡದೇ ಕೆಳಗಿಳಿದು ಅವರ ಕೂಡ ಮನೆಯೊಳಗೆ ನಡೆದಳು. ಅವರಿಬ್ಬರೂ ಬಾಯರ ಕೋಣೆಯೊಳಗೆ ಬಂದು ಕುಳಿತುಕೊಂಡರು. ಬಾಯರು ಒದರಿ ಹೇಳಿದರು. “ಶಾರಕ್ಕ, ನೀರ ತೊಗೊಂಡ ಬರ್‍ರಿ, ನೀರಂದರ ನೀರಷ್ಟಽ ಅಲ್ಲ ಮತ್ತಽ.”

“ಈಗ್ಯಾಕಿಲ್ಲದ್ದು ! ನಾನೂ ಊಟ ಮಾಡಿ ಬಂದೇನಿ.” ಅಕ್ಕವ್ವ ಸ್ವಲ್ಪ ಸಂಕೋಚ ಮಾಡಿಕೊಂಡು ಅಂದಳು.

“ಮಾತೋ ಕಥಿಯೋ ! ಅದೇನೋ ಅಂತಾರಲ್ಲ “ಬಣ್ಣಽ ನೀರ ಕುಡಿದರಽ ಊರಿಗೇ ಬಂದ ಹಾಂಗಲ್ಲಂತಽ.” ಬಾಯರು ನಗೆಯಾಡಿದರು. ಅಕ್ಕವ್ವನೂ ನಗೆಯಲ್ಲಿ ಕೂಡಿಕೊಂಡಳು. ಆಯಿತು. ಇಬ್ಬರಿಗೂ ಇನ್ನು ಮಾತಾಡುವುದಕ್ಕೆ ಅನುವು ಹುಟ್ಟಿತು.

“ಮುನ್ಯಾಗ ನಿಮ್ಮ ತಾರೀಫ ಬಹಳ ನಡದಿರತದಽ. ನನಗೂ ಯಾವಾಗೊಮ್ಮೆ ಗುರ್ತಾದೀತೋಽಂತನಿಸಿತ್ತ.” ಅಕ್ಕವ್ವನ ಈ ಪ್ರಾರಂಭ ಕೇಳಿ ಬಾಯರು ತತ್ತರಿಸಿದರು. ಈಗ ಅವಳು ಹೇಳಿದ್ದೆಲ್ಲ ಸುಳ್ಳಿತ್ತು. ಭುಜಂಗರಾಯರು ತಪ್ಪಿ ಸಹ ಮಾವಿನ ತೋಪಿನ ಹೆಸರು ತೆಗೆದಿದ್ದಿಲ್ಲ. ಬಾಯರಿಗೂ ಅವರು ತಮ್ಮ ಮಾತು ತಮ್ಮ ಹೆಂಡತಿಯ ಎದುರಿಗೆ ತೆಗೆದಿದ್ದಾರೆಂದೆನಿಸಲಿಲ್ಲ. ಆದರೂ ಈ ಹೆಣ್ಣು ಮಗಳು ಸುಳ್ಳು ಯಾಕೆ ಹೇಳಬೇಕು ! ಏನೋ ಸಹಜ ಮಾತಾಡಿರ

ಬಹುದು. ಹೀಗೆಂದು ಅವರು "ಡಾಕ್ಟರ‍್ರಽ ಹೌದಲ್ಲೋ! ಅವರ ಮಾತಿಗೆ ಕಾಲ್ಽ ಇರೋದಿಲ್ಲಽ. ಅವರ ಮಾತೇನು ತೊಗೊಂಡೀರಿಽ! ಅಂತೂ ಏನಽ ಆಗಲಿಽ ಗುಣವಾತಽ!" ಎಂದು ಬಾಯಿ ಮುಚ್ಚಿ ಮಾತಾಡಿದರು. ಆ ಮೇಲೆ ಕೇಳಲೋ ಬಿಡಲೋ ಎಂದನ್ನುತ್ತ "ಡಾಕ್ಟರು, ನೆಟ್ಟಗಿದ್ದಾರಽ?" ಎಂದು ಕೇಳಿದರು.

ಅಕ್ಕವ್ವ ಭುಜಂಗರಾಯರಿಗೆ ಬಡಿದಾದ ಸುದ್ದಿ ಇಲ್ಲಿ ಹೇಳಬಾರದೆಂದೇ ಮಾಡಿದ್ದಳು. ಆದರೂ ಹೇಳಿ ಮೋಜು ನೋಡಲಿಕ್ಕೆ ಸಿಕ್ಕರೆ ನೋಡೋಣ ಎಂಬ ಕುತೂಹಲ ಹುಟ್ಟಿ, ಅವರಿಗೆ ತಲೆಗೆ ಪೆಟ್ಟು ತಾಕಿ ಅವರು ಹಾಸಿಗೆಯ ಮೇಲೇ ಮಲಗಿರುವರೆಂಬ ಸುದ್ದಿ ಸ್ವಲ್ಪ ಅತಿಶಯೋಕ್ತಿಯಿಂದ ಕಥೆ ಮಾಡಿ ಹೇಳಿದಳು. ಶಿಷ್ಟಾಚಾರವೆಂಬ ಸೋಗಿನ ಅವಶ್ಯಕತೆ ಇಲ್ಲದಿದ್ದರೆ ಬಾಯರು ಹಾಗೇ ಹೋಗಿ ಭುಜಂಗರಾಯರ ತಲೆದಿಂಬಿಗೆ ಕುಳಿತುಕೊಳ್ಳುತ್ತಿದ್ದರು. ಬಾಯರ ಈ ಗಡಿಬಿಡಿ ನೋಡಿ ಅಕ್ಕವ್ವನಿಗೆ ನಗೆ ಬಂತು. ಬಾಯರಿಗೂ ತಮ್ಮದು ತಮಗೇ ನಗೆ ಬಂತು. ಪ್ರತ್ಯಕ್ಷ ಅವರ ಕೈ ಹಿಡಿದಾಕೆ ಹೀಗೆ ಸಿಕ್ಕಿಂತಳಾಗಿ ಕುಳಿತಾಗ ತಾವೆಷ್ಟರವರು! ಆದರೂ ಭುಜಂಗರಾಯರ ಕಡೆಗೇ ಹರಿದಾಡುತ್ತಿರುವ ತಮ್ಮ ಮನಸ್ಸು ಬಿಗಿ ಹಿಡಿಯುವುದಕ್ಕೆ ಬಾಯರಿಗೆ ಅತಿಪ್ರಯಾಸವಾಯಿತು.

ಚಹಾ ಮುಗಿಯಿತು. ಬಾಯರು ಅಕ್ಕವ್ವನಿಗೆ ತಮ್ಮ ಮನೆ, ಹಕ್ಕಲ, ಅಡಿಕೆಯ ಬನ, ಬಾವಿ ಹೀಗೆ ಒಂದೊಂದು ತೋರಿಸಿದರು. ಬಿಸಿಲು ಕಡಿಮೆಯಾಯಿತು. ಮನೆಯ ಹೊರಕಟ್ಟೆಯ ಮೇಲೆ ಒಂದು ಕುಳಿತರು. ಮಾತು ಮುಗಿದಿದ್ದೇ ಇಲ್ಲ. ಬಾಯರು ಏನೋ ನೆನಪಾದಂತೆ ಮಾಡಿ ಅಂದರು.

"ನಿಮಗ ಸಿಟ್ಟ ಬರದಿದ್ದರಽ ಒಂದ ಹೇಳಬೇಕಾಗೆದ ನನಗ."
ಅಕ್ಕವ್ವ ಚಕಿತಳಾದಳು. "ಹೇಳ್ರಿ. ನನಗೇನು ಸಿಟ್ಟು ಬರೋದಿಲ್ಲಽ."

"ಮೊನ್ನೆ ನಿಮ್ಮ ಹಿರೇರು ಬಂದಿದ್ದರು—" ಬಾಯರು ಇಷ್ಟೇ ಹೇಳಿ ಅವಳ ಮೋರೆಯ ಕಡೆಗೆ ಸೂಕ್ಷ್ಮವಾಗಿ ನೋಡಹತ್ತಿದರು.

ಅಕ್ಕವ್ವನಿಗೂ ಇದು ಹೊಸ ಸುದ್ದಿಯೇ. ಅವಳ ಮೋರೆಯ ಮೇಲೆ ಕಾಣುವ ಆಶ್ಚರ್ಯ ಕೃತ್ರಿಮವಿದ್ದಿಲ್ಲ. ಬಾಯರ ತಿಳಿವಳಿಕೆ ಮಾತ್ರ ಅಂಣಾರಾಯರು ತಮ್ಮ ಮಗಳನ್ನು ಕೇಳಿಕೊಳ್ಳದೇ ಬಂದಿದ್ದಿಲ್ಲವೆಂದಾಗಿತ್ತು.

"ಅಂಣಾ ಬಂದಿದ್ದರs ಇಲ್ಲೆ !" ಅಕ್ಕವ್ವ ತುಸು ಜಿಜ್ಞಾಸೆಯಿಂದ ಕೇಳಿದಳು.

"ಬಂದ್ರು—ಏನೇನೋ ಮಾತಾಡಿ ಹೋದರು." ಬಾಯರ ಮನಸ್ಸಿನಲ್ಲಿ ತಮ್ಮ ಸಿಟ್ಟು ಪೂರಾ ತೀರಿಸಿಕೊಳ್ಳುವುದಿತ್ತು.

"ಅವರ ಅಂಬೋಣ್ಣರೆ ಏನಿತ್ತು!" ಅಕ್ಕವ್ವ ತನ್ನ ಆತುರತೆಯನ್ನು ಹೊರಪಡೋರದೆ ಕೇಳಿದಳು.

"ನೋಡ್ರಿ—ಡಾಕ್ಕರಡೂ ನಂದೂ ಇಂದಿನ ಗುರ್ತಲ್ಲ. ಅವರು ಕಲ್ತಿದ್ರೂ—ನಂದಿನ್ನೂ ಮದಿವ್ಯಾಗಿದ್ದಿಲ್ಲ—ಆಗ ನೋಡ್ಯಾರ ನನ್ನ—" ತಾವು ಇದೆಲ್ಲವನ್ನು ಇವಳಿಗೇಕೆ ಹೇಳುವುದು ಎಂದೆನಿಸಿ ಬಾಯರು ಸುಮ್ಮನಾದರು.

ಅಕ್ಕವ್ವನೂ ಕಡಿಮೆ ಇದ್ದಿಲ್ಲ. ಅವರನ್ನು ಅಣಕಿಸಿದಂತೆ "ಹೀಂಗs ಹಾಂಗಾರs! ಆಗ ನೋಡ್ಯಾರs ನಿಮ್ಮನ್ನ" ಎಂದು ಕೇಳಿಬಿಟ್ಟಳು. ಬಾಯರಿಗದನ್ನು ಸಹಿಸುವುದಾಗಲಿಲ್ಲ. ಆದರೂ ಅವಳ ಕಡೆಗೆ ಲಕ್ಷ್ಯಕೊಡದೇ ತಮ್ಮ ಮಾತು ಮುಂದೆ ಸಾಗಿಸಿದರು. "ನಾ ಇಲ್ಲೆ ಒಬ್ಬಾಕಿನs ಇರತೇನಿs— ಜಡ್ಡಾತ ನನಗ—ಸತ್ತಿದ್ದರ ನೆಟ್ಟಗಾಗತಿತ್ತು—ಉಳಿಸಿದರ ನನ್ನ— ಮೊದಲಿನ ಗುರ್ತs—ಬಂದಾಗ ಕೂಡತಾರಿಲ್ಲೆ ಹರಟೀs ಹೊಡಕೋತs—ನಿಮ್ಮ ಹಿರೇರು ಇಲ್ಲದ್ದಂತಾ ರ್ರೆವ್ವ—" ಬಾಯರು ಅಳುವುದಕ್ಕೇ ಪ್ರಾರಂಭಮಾಡಿದರು. ಅಕ್ಕವ್ವನಿಗೀಗ ಅಂಣಾರಾಯರ ಮಾತಿನದೂ ಸಿಟ್ಟು ಬಂತು.

"ಅಂಣಾ ಅಂದರs ಹೀಂಗ!"

"ಅನ್ನೋದೇನೂ ಉಳಿಸಲಿಲ್ಲ. ನೀ ನನಗ ಮಗಳ ಹಾಂಗಿದ್ದಿsಂತಂದರು— ಥಡಾಥಡಾ ಅಂದರು—"

"ನಮ್ಮ ಅಂಣ್ಣಾನ ಸ್ವಭಾವಽ ಹಿಽಂಗ - ಅವರ ಮಾತಽ ಮನಸಿನ್ಯಾಗ ಹಿಡಿಬ್ಯಾಡ್ರಿ." ಅಕ್ಕವ್ವ ಬಾಯರ ಸಮಾಧಾನ ಮಾಡುತ್ತ ಅಂದಳು.

ಕತ್ತಲಾಗುತ್ತ ಬಂತು. ಕೃಷ್ಣಾ ಒಂದು ನಿಂತಿದ್ದ—ಅಕ್ಕವ್ವನಿಗೆ ಏಳಬೇಕಾಯಿತು. ಬಾಯರು ಅವಳನ್ನು ಮೋಟರಿನ ವರೆಗೆ ಕಳಿಸಲಿಕ್ಕೆ ಬಂದಿದ್ದರು. ಇಬ್ಬರಿಗೂ ಕೆಟ್ಟೆನಿಸಿತು. ಮೋಟರಂತೂ ಹೊರಟುಬಿಟ್ಟಿತು. ಬಾಯರು ತಿರುಗಿದರು. ಮೋಟರು ಇನ್ನು ಬಂಕಕ್ಕೆ ಹೊರಳುವುದಿತ್ತು. ಬಾಯರು ನಿಲ್ಲಿಸಲಿಕ್ಕೆ ಕೈಮಾಡಿದರು. ಅಕ್ಕವ್ವ ಕೆಳಗೇ ಇಳಿದು ಬಂದುಬಿಟ್ಟಳು. ಬಾಯರ ಮೋರೆಯ ಮೇಲೆ ದ್ರವ ಇದ್ದಿಲ್ಲ. ಅವರು ಅಸ್ಪಷ್ಟವಾಗಿ "ಜೀವಕ್ಕೇನೂ ಅಪಾಯ ಇಲ್ಲ ಹೌದಲ್ಲೋ!" ಎಂದು ಕೇಳಿದರು. ಅವರ ಆತುರತೆ ನೋಡಿ ಅಕ್ಕವ್ವನಿಗೆ ನಗೆ ಬಂತು. "ನಾ ಬರತಿದ್ನೇನು ಇಲ್ತನಕಽ ಹಾಂಗೇನಾರಽ ಇದ್ದರಽ—" ಎಂದು ಸಹಜವಾದ ಉಪಹಾಸದಿಂದ ಕೇಳಿದಳು. ಈ ಆಶ್ವಾಸನದಿಂದ ಅವರ ಸಮಾಧಾನವಾಗಲಿಲ್ಲ. ಅಕ್ಕವ್ವನ ದೃಷ್ಟಿಯಲ್ಲೂ "ನೀ ಯಾರು! ನಾ ಇದ್ದೇನಿ ಏನಾದರೂ ಭೋಗಿಸಲಿಕ್ಕೆ" ಎಂಬ ಅರ್ಥ ಮೂಡಿದಂತೆ ತೋರಿತು.

"ನಂದೇನೂ ಸಂಬಂಧಿಲ್ಲಾಂತ ತಿಳಕೊಂಡರ್ಯಾ!—ನಾನು—" ಮುಂದಿನ ಶಬ್ದ ಅಕ್ಕವ್ವನ ಕಿವಿಗೆ ಮಾತ್ರ ಮುಟ್ಟಿದುವು. ಸಿಡಿಲು ಬಿತ್ತು. ತಾವು ಆ ಮಾತು ಹೇಳಬಾರದಾಗಿತ್ತೆಂಬವರ ಅರಿವು ಬಾಯರಿಗೀಗ ಬಂತು. ಸ್ವಲ್ಪ ತಡವಾಗಿಯೇ ಆ ಅರಿವು ಬಂತು. ಅದಕ್ಕೆ ತಮ್ಮಷ್ಟಕ್ಕೆ ತಾವೇ ರೊಚ್ಚಿಗೆದ್ದು ಅಳುತ್ತ "ಹೂಂ—ನನಗ ಧೀಃ ಧೂ ಹಾಕರಿ ನೀವು ಬೇಕಾರಽ—ನಾ ಇನ್ಯಾಕ ಅಂಜಲಿ!— ನನಗೂ ದಿವಸ ಹೋಗ್ಯಾವಽ—"

"ಬಸಕ್ಕ, ಬಸಕ್ಕ, ನನ್ನ ಮಾತ ಕೇಳತೀರೋ ಇಲ್ಲೋ! ನನಗೂ ತಿಳೀತದ ಎಲ್ಲಽ. ಜೀವಕ್ಕ ತಾಪ ಮಾಡಿಕೊ ಬ್ಯಾಡ್ರಿ. ಸುಸೂತ್ರ ಆಗಲಿ ಎಲ್ಲಽ. ಕಾಳಜಿಽಂತ ಮಾಡಬ್ಯಾಡ್ರಿ. ಎಲ್ಲಾಽದಕ್ಕೂ

ನಾ ಇದ್ದೇನಿ." ಅಕ್ಕವ್ವ ಬಾಯರ ಬೆನ್ನ ಮೇಲೆ ಕೈಯಾಡಿಸುತ್ತ ಅಂದಳು. ಬಾಯರು ಅವಳ ಹೆಗಲ ಮೇಲೆ ಗೋಣು ಚೆಲ್ಲಿದ್ದರು.

ಮೋಟರ ಹೊರಟಾಗ ಪೂರಾ ಕತ್ತಲಾಗಿತ್ತು-

---

## ೨೫

## ಪಲಾಯನ.

ದವಾಖಾನೆಗೆ ಸಂಜೆ ಡಾಕ್ಟರರು ಮೊದಲಿನಂತೆ ಬರಹತ್ತಿದರು. ಮನೆಯಲ್ಲಿಯ ಗಾಳಿ ಮಾತ್ರ ಹಾಗೇ ಸುಳಿಯುತ್ತಿತ್ತು. ಅಂಣಾರಾಯರು ಭುಜಂಗರಾಯರ ಹೆಸರೇ ತೆಗೆಯುತ್ತಿದ್ದಿಲ್ಲ. ಅಕ್ಕವ್ವ ಮಾತೇ ಬಿಟ್ಟಿದ್ದಳು. ರಾಧಾಬಾಯರೂ ಎಷ್ಟಕ್ಕೆ ಅಷ್ಟೇ ಮಾತಾಡುತ್ತಿದ್ದರು. ಅಂತೂ ವಾಳಿಯಾಗಿ ಮನೆಯಲ್ಲಿಯೇ ಇದ್ದುಕೊಳ್ಳುವುದು ಭುಜಂಗರಾಯರಂಥ ಅಭಿಮಾನದ ಕೂಸಿಗೆ ಅಶಕ್ಯವಾಯಿತು.

ಎಲ್ಲಿ ಹೋಗಬೇಕು! ತೋಪಿನ ಕಡೆಗೆ ಹೋಗಿ ಬರಬೇಕೆಂದು ಮನಸ್ಸು ಹಾಗೇ ಹಾತೊರೆಯುತ್ತಿತ್ತು. ಇತ್ತೀಚೆಗೆ ರೊಕ್ಕದ ಕೊರತೆಯೂ ಮೇಲಿಂದ ಮೇಲೆ ಅನುಭವಕ್ಕೆ ಬರಹತ್ತಿತು. ಭುಜಂಗರಾಯರು ಯಾರನ್ನೂ ಬಾಯಿ ತೆರೆದು ಕೇಳುವವರಲ್ಲ. ದವಾಖಾನೆಯಲ್ಲಿಯಾದರೂ ತಮಗೆ ಬೇಕಾದಷ್ಟು ರುಪಾಯಿ ಕಾಂಪೌಂಡರನ ಕಡೆಯಿಂದ ಇಸಕೊಳ್ಳುವ ಪರಿಪಾಠವಿತ್ತು. ದವಾಖಾನೆಯ ಮೇಲೆ ಅಲಕ್ಷ್ಯವಾದ ಮೇಲೆ ಆತನಿಗೂ ಬೇಡಲಿಕ್ಕೆ ಸಂಕೋಚ. ಈಗಂತೂ ಪೂರಾ ಬರಗಾಲ.

ಬನು ರೊಕ್ಕಸ್ಥಳು; ಸ್ವತಂತ್ರಳು. ಆದರೂ ಅವಳ ದುಡ್ಡು ಲೆಕ್ಕಕ್ಕೆ ಹಿಡಿದು ನಡೆಯುವಂತಿದ್ದಿಲ್ಲ. ರಟ್ಟೆಯ ಬಲದಿಂದ ತಾವೂ ಎಲ್ಲಿಯಾದರೂ ದುಡಿದು ಸ್ವತಂತ್ರರಾಗಬೇಕೆಂದು ಅಲ್ಲಿ ಇಲ್ಲಿ ನೋಕರಿಗಾಗಿ ಬರೆದು ನೋಡಿದರು. ನೋಕರಿಯಾದರೂ ಬೀದಿಯ ಬನುಕಲ್ಲ. ಅವರಿಗಾದರೂ ಕುಳಿತು ಮಲಕೊಳ್ಳುವಷ್ಟು ಸಮಾಧಾನ

ಇದ್ದಿಲ್ಲ. ಒಂದು ದಿನ ಅಷ್ಟೇ ಜುಬಬಿ ಅರಿವೆ ಅಂಚಡಿಗಳನ್ನು ತಮ್ಮ ಬ್ಯಾಗಿನಲ್ಲಿ ತುಂಬಿಕೊಂಡು ಮನೆ ಬಿಟ್ಟರು.

ಮೊದಲ ವಿಚಾರ ತೋಪಿಗೇ ಹೋಗುವುದು. ಜಡ್ಡಿನಿಂದ ಎದ್ದೂ ಬಹಳ ದಿನ ಆಗಿದ್ದಿಲ್ಲ. ಹಾಗೆ ಎಡವುತ್ತ ತಡೆಯುತ್ತ ತೋಪಿಗೆ ಬಂದು ಮುಟ್ಟಿದರು. ಬಾಗಿಲು ಮುಚ್ಚಿತ್ತು. ದಣಿದು ದಣಿದು ಕುಗ್ಗಿದ ದನಿಯಿಂದ "ಬಾಗಲಽ ತಗಿಽರಿಽ–" ಎಂದು ಪ್ರಯಾಸದಿಂದ ಕೂಗಿ ಅಲ್ಲಿಯೇ ಮೂರ್ಛೆ ಬಂದು ಬಿದ್ದುಬಿಟ್ಟರು. ಮನೆಯಲ್ಲಿ ಆಳು ಬಾಗಿಲ ತೆರೆದು ನೋಡುತ್ತಾನೆ, ಭುಜಂಗರಾಯರು. ಬಾಯರೂ ಬಂದರು. ಅಂತೂ ಭುಜಂಗರಾಯರನ್ನು ಒಮ್ಮೆ ಒಳಗೆ ತಂದು ಕೋಣೆಯಲ್ಲಿ ಮಲಗಿಸಿದರು.

..............................

ಮರುದಿನ ಅಕ್ಕವ್ವನಿಗೆ ಭುಜಂಗರಾಯರ ಹಾಸಿಗೆಯ ಮೇಲೊಂದು ಪತ್ರ ಸಿಕ್ಕಿತು. ಪತ್ರ ಬರೆದವರು,– ಆ ಅಕ್ಷರಗಳು ಗುರುತಿನವು. ಪತ್ರದಲ್ಲಿ ಅಷ್ಟೇ ಎರಡು ಮೂರು ವಾಕ್ಯಗಳಿದ್ದವು.

"ಮದುವೆಯಾಗಿ ಮೂರ್ಖನಾದೆ. ನಾನು ನಿನಗೆ ಅನುರೂಪನಲ್ಲವೆಂದು ತಿಳಿದುಕೊಳ್ಳು, ಅಥವಾ ನನ್ನಲ್ಲಿಯೇ ಸಂಸಾರೊಂದಿಗನಿಗೆ ಬೇಕಾದ ಗುಣಗಳಿಲ್ಲವೆಂದು ತಿಳಿದುಕೊಳ್ಳು. ನಾನಂತೂ ಮನೆಬಿಟ್ಟು ಹೋಗುವ ನಿಶ್ಚಯ ಮಾಡಿದ್ದೇನೆ. ನಿನ್ನ ಆಯುಷ್ಯದ ಹಾನಿಯಾದುದಕ್ಕೆ ವಿಷಾದವೆನಿಸುತ್ತದೆ. ಕೂಡಿಯೂ ಬಂದಿರಲಿಕ್ಕಿಲ್ಲ! ಇತಿ.

ನಿನ್ನ——"

ಈ ಪತ್ರ ನೋಡಿ ಅಕ್ಕವ್ವನಿಗೆ ಹೌಹಾರಿದಂತಾಯಿತು. ಕಣ್ಣುಗಳಿಂದ ನೀರು ಬರಲಿಲ್ಲ. ಹೃದಯದಲ್ಲಿ ಒಂದೇ ಒಂದು ಉರಿ ಎದ್ದು ಆಕಾಶಕ್ಕೆ ಮುಟ್ಟಿದಂತೆನಿಸಿತು. ಅವಳು ಆ ಪತ್ರವನ್ನು ತೆಗೆದುಕೊಂಡು ಅಂಣಾರಾಯರ ಕೋಣೆಯ ಕಡೆಗೆ ನಡೆದಳು. ಅಂಣಾರಾಯರಿನ್ನೂ ಹೊರಗಿನಿಂದ ಬಂದಿದ್ದಿಲ್ಲ. ಈಗ ಮಾತ್ರ ಅವಳ ದುಃಖಕ್ಕೆ ದಾರಿ ಒಡೆಯಿತು. ಅಂಣಾರಾಯರು ಹೊರಗೆ ಹೋಗಿದ್ದರಷ್ಟೇ.

ಈಗ ಇನ್ನೊಂದು ತುಸು ಹೊತ್ತಿನಲ್ಲಿ ತಿರುಗಿ ಬರುತ್ತಿದ್ದರು. ಆದರೂ ಎಲ್ಲರೂ ತನ್ನನ್ನು ಬಿಟ್ಟು ಹೋದಂತೆನಿಸಿ ಇಷ್ಟೊತ್ತಿನಕ ಹುದುಗಿ ಕೊಂಡಿದ್ದ ದುಃಖದ ಆವೇಗ ಹೊರಹೊರಟು ಅವಳು ಬಿಕ್ಕಿ ಬಿಕ್ಕಿ ಅಳಹತ್ತಿದಳು. ಆ ಭರದಲ್ಲಿ ಅವಳಿಗೆ ಅಂಣಾರಾಯರು ಕೋಣೆಯಲ್ಲಿ ಬಂದದ್ದೂ ತಿಳಿದು ಬರಲಿಲ್ಲ. ಅವರು ಅವಳ ಈ ಅವಸ್ಥೆಯನ್ನು ನೋಡಿ ಈವೊತ್ತು ಏನೋ ಅನಾಹುತವಾಗಿರಬೇಕೆಂದು ಊಹಿಸಿ ಸ್ತಂಭಿತರಾಗಿ ಬಾಗಿಲಲ್ಲಿಯೇ ನಿಂತುಕೊಂಡರು. ಆದರೂ ತಂದೆಯ ಕರುಳು. ಅವರು ಮೆಲ್ಲನೇ ಅವಳ ಹತ್ತಿರ ಹೋಗಿ ಅವಳ ಬೆನ್ನ ಮೇಲೆ ಕೈಯಿಟ್ಟು "ಅಕ್ಕು—" ಎಂದು ಮೃದುವಾಗಿ ಕರೆದರು. ಆಕ್ಕವ್ವ ಜಡದೃಷ್ಟಿಯಿಂದ ಅವರ ಕಡೆಗೆ ನೋಡಿ "ಅಂಣಾ—" ಎಂದು ಕೂಗಿ ಮತ್ತೆ ಅಳುವುದಕ್ಕೆ ಪ್ರಾರಂಭಿಸಿದಳು. ದುಃಖದ ಭರ ತುಸು ಕಡಿಮೆಯಾಯಿತು. ಪತ್ರ ಅಂಣಾರಾಯರ ಕೈಯಲ್ಲಿ ಕೊಟ್ಟಳು.

ಅಂಣಾರಾಯರು ಪತ್ರ ಓದಿಕೊಂಡರು. ಅವರು ಮತ್ತೇನೂ ಮಾಡಲಿಲ್ಲ. ತಮ್ಮ ಎರಡೂ ಗಲ್ಲಗಳ ಮೇಲೆ ಬಾಸಳ ಮೂಡುವಂತೆ ಫಾಡ ಫಾಡ ಎಂದು ಹೊಡಕೊಳ್ಳಹತ್ತಿದರು. ಅವರ ಮೋರೆಯ ಮೇಲೂ ಏನೋ ಒಂದು ವಿಚಿತ್ರ ಕಳೆ ಬಂದಿತ್ತು. ಅದನ್ನೆಲ್ಲ ನೋಡಿ ಆಕ್ಕವ್ವ ಗಾಬರಿಯಾಗಿ "ಅಂಣಾ,—ಅಂಣಾ,— ಸುಮ್ಮನಾಗ್ರಿ — ನಾ ಬೇಕೋ ಬ್ಯಾಡೋ ನಿಮಗ!"

"ಎಲ್ಲೆ ಹೋಗತಾನ ಆ ಮಗs—" ಅಂಣಾರಾಯರು ಕೇವಲ ಹುಚ್ಚರಂತೆ ಮಾಡಹತ್ತಿದರು.

"ಯಾಕ ಅದು! ನಾ ಬ್ಯಾಡಾಗೇನಿ ಅವರಿಗೆ."

"ಬ್ಯಾಡಾಗೇಂದರs! ಕಿವಿ ಹಿಡದ ಕೇಳತೇನಿ. ಮುರ್ಖಾ, ಮೂರ್ಖಾ, ಬುದ್ಧಿ ಎಲ್ಲಿಟ್ಟಿದೀಂತ ಕೇಳತೇನಿ. ನನ್ನ ಮಗಳ ಕುತಗಿsನs ಕೊಯ್ಯಲಿಕ್ಕೇಂತ ಕೊಟ್ಟಿದ್ದಿಲ್ಲ ಅವನ ಕೈಯಾಗs."

"ಬ್ಯಾಡಾದ ಮ್ಯಾಲೆ ಬಾಳಿ ಮುಳ್ಳ ಮುಳ್ಳsಂದರಂತs. ಆಗೋದಲ್ಲ, ಹೋಗೋದಲ್ಲ."

ಪಿತಾಪುತ್ರಿಯರ ಸಂವಾದ ಹಾಗೇ ನಡೆಯಿತು. ಏನಾದರೂ, ರಾಧಾಬಾಯಿಗೆ ಈ ಮಾತು ತಿಳಿಸಬಾರದೆಂಬ ನಿರ್ಣಯವಾಯಿತು.

..........................

ಅದೇ ದಿನ ಸಾಯಂಕಾಲಕ್ಕೆ ತೋಪಿನಲ್ಲಿ ದೀವಿಗೆ ಹತ್ತಲಿಲ್ಲ.

---

## ೨೬

## ಗಂಡ ಬಿಟ್ಟ ಗೈಯಾಳಿ !

ರಾಧಾಬಾಯಿರಿಗೆ ಹೇಳಬಾರದೆಂದು ಮಾಡಿದ ಮಾತು ಅವರ ಕಿವಿಗೆ ಮುಟ್ಟದಿರಲಿಲ್ಲ. ಹಣೆ ಹಣೆ ಬಡಕೊಂಡರು. ಅಂಣಾರಾಯರ ಮನೆಗೀಗ ಏನೋ ಒಂದು ಅಪಸ್ಮಾರ ಕಳೆ ಬಂದು ಬಿಟ್ಟಿತ್ತು. ಅಕ್ಕವ್ವ ತನ್ನ ಕೋಣೆ ಬಿಟ್ಟು ಸರಿದಾಡುತ್ತಿದ್ದಿಲ್ಲ. ರಾಮಕೃಷ್ಣ ವಾಕ್ಸುಧಾ, ರಾಮತೀರ್ಥ ಬೋಧಾಮೃತ, ಜೀವನಸ್ಮೃತಿ, ಭಾರತ, ರಾಮಾಯಣ ಮುಂತಾದ ಅನೇಕ ಗ್ರಂಥಗಳನ್ನೋದಿ ಕಾಲಕಳೆಯುತ್ತಿದ್ದಳು. ಅಂಣಾರಾಯರ ಮನೆಗೆ ಊರಿನ ಸಂಪರ್ಕವಿದ್ದಿಲ್ಲ. ಅಕ್ಕವ್ವನಿಗೆ ಮನೆಯ ಸಂಪರ್ಕವಿದ್ದಿಲ್ಲ.

ಊರೊಳಗೂ ಎರಡು ತಂಡಗಳು. ಕೆಲವರು ಅಕ್ಕವ್ವನಿಗೆ ದೋಷ ಕೊಡುತ್ತಿದ್ದರು. ಕೆಲವರು ಭುಜಂಗರಾಯರಿಗೆ ದೋಷ ಕೊಡುತ್ತಿದ್ದರು. ಅಕ್ಕವ್ವನಿಗೆ ದೋಷ ಕೊಡುವವರೆ ಬಹಳ ಜನ.

ಅಕ್ಕವ್ವ ಬಹುಶಃ ಊರೊಳಗೆ ಹೋಗುತ್ತಿದ್ದಿಲ್ಲ. ತನ್ನ ಗೆಳತಿಯರ ಮನೆಗೆ ಹೋಗುವುದಾದರೂ ಹುಣ್ಣಿವೆಗೊಮ್ಮೆ ಅಮಾಸಿಗೊಮ್ಮೆ. ಭುಜಂಗರಾಯರು ಹೋದಂದಿನಿಂದ, ಅಂದರೆ ಈಗ ಸುಮಾರು ಒಂದು ವರ್ಷದ ಮೇಲೆ ಆಗುತ್ತ ಬಂದಿತ್ತು, ಅವಳು ನರಸುವಿನ ಮನೆಗೆ ಸಹ ಹೋಗಿದ್ದಿಲ್ಲ. ನರಸುವಿಗೆ ಮನೆಯ ಕೆಲಸದಲ್ಲಿ ಎಲ್ಲೂ ಹೋಗುವದಾಗುತ್ತಿದ್ದಿಲ್ಲವೆಂಬದೊಂದು. ಮೇಲಾಗಿ ಬಾಬಣ್ಣಾ ಈಗ ಒಂದು ವರ್ಷದಿಂದ ಮಾಸ್ತರ (B. T.) ಪರೀಕ್ಷೆಗಾಗಿ ಕಲಿಯಲಿಕ್ಕೆ

ಹೋದವ ಮುಂಬಯಿಯಲ್ಲಿಯೇ ಮನೆ ಮಾಡಿ ಇರುತ್ತಿದ್ದ. ನೆನ್ನೆ ಮೊನ್ನೆ ಪರೀಕ್ಷೆ ಮುಗಿಸಿಕೊಂಡು ಮರಳಿ ಬಂದಿದ್ದ.

ಅಕ್ಕವ್ವ ಸರಸುವಿನ ಮನೆಗೆಂದು ಹೊರಟಳು. ದಾರಿಯಲ್ಲಿಯೆ ಗುರುಭಟ್ಟರ ರಂಗ-ಮಠ (ರಂಗಣ್ಣ ಸ್ಥಾಪಿಸಿದ ಮಠ ಅಥವಾ ರಂಗ-ದೇವತೆಯ ಮಠ!) ಇತ್ತು. ಈಗ ಅಲ್ಲಿ ಗುರುಭಟ್ಟರು ಮತ್ತು ಒಬ್ಬಿಬ್ಬರು ಆಜೀವ-ಸೇವಕರಷ್ಟೇ ಕುಳಿತಿದ್ದರು.

ಗುರುಭಟ್ಟರು ದೂರದಿಂದ ಅಕ್ಕವ್ವನನ್ನು ನೋಡಿ "ಏ ನುಲ ಕೊಂಡೀರೇನು! ಏಳ್ರಿ. ಯಾರ ಬರತಾರs, ಎಂತ ಬರತಾರs, ನೋಡ ತೀರ್‍ರ್ಯೋ ಇಲ್ಲೋ!" ಸನ್ಯಾಸ್ಥ ಮಠಸ್ಥರೆಲ್ಲರೂ (ಇಬ್ಬರು!) ಬಾಗಿಲಿಗೆ ಬಂದು ನಿಂತರು. "ಯಾರೋ, ಭಟ್ಟಾ!" ಅಕ್ಕವ್ವನ ದೃಷ್ಟಿ ಕೆಳಗೇ ಇತ್ತು.

"ಆ ಬಾಟಲೀಕಾ ಬೂಚನ ಮಸೀಯುವರು."

"ಓಡಿ ಹೋಗ್ಯಾನಂತಲ್ಲೋ, ಭಟ್ಟಾ!"

"ಎಲ್ಲೆ ಓಡಿಹೋಗತಾನ! ಇಲ್ಲೇ ಯಾಪದಾರs ರಂಗ ಮಹಾಲಸ್ಯಾಗ ಅಡಗಿಕೊಂಡಿದ್ದಾನ. ಅಡಗಿಕೋಬೇಕ ಯಾಕೋ! ಆದೇನೋ ಅಂತಾರಲ್ಲ, "ಉಭೌ ತೋ ನ ವಿಜಾನೀತೋ"-ಅಂದರs ಇಬ್ಬರಿಗೂ ತಿಳೀದ ಹಾಂಗs ಮೂರಸೇದಾಕಿನ್ನ ಇಟಕೊಂಡು ಆರಾಮ ಬಾದಶಹಾನ ಹಾಂಗ ಇರೋದು ಬಿಟ್ಟ-ಓಡಿಹೋಗತಾನ-" ಈ ಮುಂದಿನ ಮಾತು ಫಾಲ್ಗುನ-ರಸದ ಪೂರ್ಣಾವತಾರವಾಗಿದ್ದಿರಬೇಕು. ಮಠಸ್ಥರ ಅನುಮತಿಯ ಚೀತ್ಕಾರ ಅಕ್ಕವ್ವನ ಕಿವಿಗೆ ಬಂದು ತಟ್ಟಿತು.

ಊರು ಬಂದ ಕೂಡಲೇ ಅಕ್ಕವ್ವನ ದೃಷ್ಟಿ ತನ್ನಷ್ಟಕ್ಕೆ ತಾನೇ ಕೆಳಗಾಗಿತ್ತು. ಆದರೂ ಗುರುತಿನ ಓಣಿಯಿಂದ ಬರುವಾಗ ಕಣ್ಣುಗಳ ಸಾಲಿಗೆ ಸಾಲೇ ಬೆನ್ನು ಹತ್ತಿರುವದೋ ಏನೋ ಎಂದೆನಿಸಿ ಅವಳ ಮೈಯೆಲ್ಲ ಬೆವರಿತು.

ಸರಸುವಿನ ಮನೆ ಬಂತು. ಅವಳು ಒಮ್ಮೆ ಅತ್ತಿತ್ತ ನೋಡಿ ಚಟ್ಟನೇ ಒಳಹೊಕ್ಕಳು. ಈಗ ಸರಸುವಿನ ಕೂಡ ದ್ವಾರಿ, ತಗ್ಗಿನ ಮನೆ ಜೀವಕ್ಕ, ಗಂಧರ್ವ ಗಂಗಾಬಾಯಿ (ಅವರ ಫ್ಯಾಶನ್ ಮೂಲಕ ಜನರು ಹೀಗೆ ಕರೆಯುತ್ತಿದ್ದರು!) ಮಾತಾಡುತ್ತ ಕುಳಿತಿದ್ದರು. ಅಕ್ಕವ್ವ ಬಂದ ಕೂಡಲೇ ಗಂಗಾಬಾಯಿಯರೇನೋ ನೇತ್ರಸಂಕೇತ ಮಾಡಿದರು. ಆ ಮೂವರ ಮೋರೆಯ ಮೇಲೂ ಒಂದು ಪ್ರಕಾರದ ನಗೆ ಕಾಣುತ್ತಿತ್ತು. ಸರಸು ನೋಡಿಯೂ ನೋಡದಂತೆ ಮಾಡಿದಳು. "ಅಕ್ಕಾ, ಬಾರs" ಎಂದು ಅವಳನ್ನು ಕೈಹಿಡಿದೆಳೆದಳು. ಅಕ್ಕವ್ವ ಮೊದಲೇ ಸೂಕ್ಷ್ಮಮತಿಯವಳು. ಗಂಗಾಬಾಯಿ ಜೀವಕ್ಕಾ ಅವರ ಕುತ್ಸಿತ ಬುದ್ಧಿಗೆ ದ್ವಾರಿಯೂ ಪುಟಕೊಟ್ಟದ್ದನ್ನು ನೋಡಿ ಬಲು ನೊಂದುಕೊಂಡಳು. ಜೀವಕ್ಕ ನಗುತ್ತ "ಯಾಕ ಅಕ್ಕವ್ವಾ, ಭೆಟ್ಟಿ ತುಟ್ಟಿ ಮಾಡಿಬಿಟ್ರಿ! ನಿಮ್ಮ ಅಮರಪುರ ಬಿಟ್ಟ ಬರಬೇಕಂತ ಅನಸಲೇ ಇಲ್ಲೋ ಏನು ಮತ್ತ!" ಎಂದು ಗಂಗಾಬಾಯಿಯ ಕಡೆಗೆ ನೋಡಿದಳು. ದ್ವಾರಿಯ ತೊಡೆಯ ಮೇಲೆ ಈಗೊಂದು ಚೆಲುವಾದ ಮಗು ಇತ್ತು. ಅಕ್ಕವ್ವ ಜೀವಕ್ಕನಿಗೆ ಏನೂ ಉತ್ತರ ಕೊಡದೆ ಆ ಮಗುವನ್ನು ಎತ್ತಿ "ಲುಚ್ಚಾ, ಹೇಳವರಿಗೆ. ನೀ ಬಂದೀಂತ ಗೊತ್ತಿದ್ದರs ನಾ ಯಾವಾಗೂ ಬರತಿದ್ದೆಂತ. ಏ ದ್ವಾರಿ, ಬೆಂಗಳೂರಾಗೇನೋ ಬೇಬೀ ವೀಕದಂತ. ಅಲ್ಲೆ ಕಳಸೋಣ ಈ ಲುಚ್ಚಾನ್ನ. ಕೂಡಲಿ ಕಾಜಿನ ಪೆಟಿಗ್ಯಾಗ ಚೀಟೀ ಹಚಿಗೊಂಡು. ಐದು ದುಡ್ಡಿನ ಟೀಕಿಟ ಹಚ್ಚಿ ಟಪಾಲ ಪೆಟಿಗ್ಯಾಗ ಹಾಕಿದರ ತೀರಿತು!" ಎಂದು ನಗೆಮಾಡಿದಳು. ಕೂಸಿಗೆ "ಟಪಾಲ ಪೆಟಿಗೆ"ಯ ಪ್ರವಾಸದ ಮೋಜು ಅನಿಸಿ ನಕ್ಕಿತು. ಎಲ್ಲರೂ ನಕ್ಕು ಬಿಟ್ಟರು. ಏನೋ ಒಂದು ಕಾರಣದಿಂದ ಮೇಲಕ್ಕೆದ್ದ ರೇವೆಯು ಮತ್ತೆ ತಳಸೇರಿ ಮಾತಿನಲ್ಲಿ ತಿಳಿನೀರು ಹರಿದಾಡಹತ್ತಿತು. ಯಾಕೋ ಏನೋ ಮಾತಿಗೆ ರಂಗು ಬರಲೇ ಇಲ್ಲ. ಗಂಗಾಬಾಯಿ ಜೀವಕ್ಕ ಎದ್ದರು. ಕೂಸಿನ ಕಾಟಕ್ಕಾಗಿ ದ್ವಾರಿಗೂ ಏಳಬೇಕಾಯಿತು. ಎಲ್ಲರೂ

ಎದ್ದರು. ಇನ್ನುಳಿದರು ಇಬ್ಬರೇ. ಅಕ್ಕವ್ವನಿಗೆ ತನ್ನ ದುಃಖ ತೋಡಿ ಕೊಳ್ಳಲಿಕ್ಕೆ ಪೂರಾ ಸ್ವಾತಂತ್ರ್ಯ ಸಿಕ್ಕಂತಾಯಿತು.

"ಅಕ್ಕು, ಏನs ಅನ್ನು, ನಿನ್ನ ಗಂಡ ಶುದ್ಧ ರಾಕ್ಷಸನವ್ವ" ನರಸು ಅಂದಳು. "ಏನೋ ನೊಂದಾಕಿ ಬೆಂದಾಕಿ ಗಂಡನ ಆಸರs ನೂ ಇರಬಾರದs ನಿನ್ನ ಪಾಲಿಗೆ!"

"ಬೇಡೋ, ಬಂದಿಲ್ಲ. ಇನ್ನೆಲ್ಲಿಂದ ಬರಬೇಕು! ನರಸು, ರಾಕ್ಷಸರ್ಯಾರೂ ಅಲ್ಲ. ನಾನs ಇದ್ದೇನಿ ನೋಡು, ದೆವ್ವ ಪಿಶಾಚಿ ರಾಕ್ಷಸಿ– ಎಲ್ಲsನೂ ಇದ್ದೇನಿ."

"ಅಲ್ಲ ತಗಿ. ಇವು ಧರ್ಮಸಾಲೀ ಪ್ಯಾಲಿಸ ಹುಂಚು, ಮುಸಿ ಮ್ಯಾಲ ನಿಂದರಂದರs ಹ್ಯಾಂಗ ನಿಂತಾವು" ಅಕ್ಕವ್ವನಿಗೆ ತನ್ನ ದುಃಖ ದಲ್ಲೂ ನರಸುವಿನ ಈ ಮಾತು ಕೇಳಿ ನಗೆ ಬಂತು. ಮುಂದೆ ಮಾತಾಡುತ್ತ ಮಾತಾಡುತ್ತ ತನ್ನ ಮತ್ತು ಭುಜಂಗರಾಯರ ಪತಿ ಪತ್ನೀತ್ವದ ಸಹವಾಸ ಎಷ್ಟೋ ದಿನಗಳಿಂದ ಇದ್ದಿದ್ದೇ ಇಲ್ಲವೆಂದು ಹೇಳಿದಳು. ನರಸುವಿಗಾಶ್ಚರ್ಯವೆನಿಸಿತು.

"ಹಾಂಗ ಹ್ಯಾಂಗs! ರಾಜ-ಕ್ಕ ಹೊರ್ತ ಎಲ್ಲs!"

"ಹೇಸಿಗಿ ಬಂತವ್ವ ನನಗ. ಇನ್ನು ಈ ಜನ್ಮದಾಗಂತೂ ಶಕ್ಯ ಇಲ್ಲ." ಅಕ್ಕವ್ವ ನಿಶ್ಚಯದ ಸ್ವರದಿಂದ ಅಂದಳು.

"ನಿನ್ನ ಮಾತು ನಿನಗs ಛಂದವ್ವ." ಅಂತು ಅಕ್ಕವ್ವನ ಆಚಾರ ನರಸುವಿಗೆ ಸರಿಬರಲಿಲ್ಲ. ತುಸು ಹೊತ್ತು ಕುಳಿತುಕೊಂಡು ಅಕ್ಕವ್ವ ಮನೆಗೆ ಹೊರಟಳು. ದಾರಿಯಲ್ಲಿ ವಿಚಾರದ್ದೊಂದೇ ಗೊಂದಲ. ಅವಳಿಗೆ ಈ ಎಲ್ಲ ಜನರ ವಿಚಾರ-ಸರಣಿಯೇ ತಿಳಿಯ ದಂತಾಗಿತ್ತು.

ಗಂಡ ಬಿಟ್ಟ ಗೈಯಾಳಿ! ಈ ಸ್ಥಿತಿಯ ಅನುಭವದ ಒಂದೊಂದು ಮಾದರಿಯೂ ಅವಳ ಕಂಣೆದುರಿಗೆ ನಿಂತಿತು. ಗಂಡನನ್ನು ಬಿಟ್ಟು ಓಡಿ ಹೋದವಳು ಜನರ ಆಡಿಕೆಯ ಗಂಟು ಹಿಂದೇ ಬಿಟ್ಟು ಹೋಗು

ವಳು. ಯಾರು ಏನೆಂದರೂ ಅದರ ಚಿಂತೆ ಅವಳಿಗಿಲ್ಲ. ಜನಮರೆಯೋ ಮನಮರೆಯೋ....ಗಂಡ ಸತ್ತವಳಿಗೆ ದೈವದ ಆಧಾರ. ಅಂದರೆ, ಏನೋ ಪಾಪ, ಗಂಡನನ್ನು ಇಟ್ಟುಕೊಂಡು ಸಂಸಾರ ಮಾಡಿಕೊಡಿರುವಷ್ಟು ಪುಣ್ಯ ಪಡಕೊಂಡು ಬಂದಿಲ್ಲವೆಂದು ಜನರೇ ಕನಿಕರ ಮಾಡುವರು. ಏನೋ ಕುಲಾಚಾರ ಕುಲಧರ್ಮ ಸರಿಯಾಗಿ ನಡಿಸಿಕೊಂಡು ಹೋದರಂತೂ ಅವಳು ಏನೂ ಮಾಡಿದರೂ ಜನರು ಕಣ್ಣು ಮುಚ್ಚಿಯೇ ಸಾಗುವರು. ತಾನು....ಗಂಡನು ಬಿಟ್ಟ ಗೈಯಾಳಿ!

ಮನೆಗೆ ಹೋದಾಗ ಅವಳ ಹಣೆ ಕಾಯದ್ದು ಬೆಂಕಿ ಆಗಿತ್ತು. ಆದೇ ದಿನ ರಾತ್ರಿ ಜ್ವರ ಬಂದು ಮೈಮೇಲೆ ಎಚ್ಚರಿಲ್ಲದಂತಾಯಿತು.

---

## ೨೭.

## ಅತ್ಯವಸ್ಥೆ.

ಇದೀಗ ಮೂವತ್ತೊಂದು ದಿನಗಳಾಗಿ ಹೋಗಿದ್ದವು. ಅಕ್ಕವ್ವನ ಮೈಮೇಲೆ ಇನ್ನೂ ಎಚ್ಚರ ಬಂದಿದ್ದಿಲ್ಲ. ಜ್ವರದ ಪ್ರಮಾಣವೂ ಕಡಿಮೆಯಾಗಿದ್ದಿಲ್ಲ. ಅಂಗಾರರಾಯರ ಸಹನಶಕ್ತಿಯು ಮಿತಿ ಮೀರಿತು. ಡಾ. ಶ್ರೀನಿವಾಸರಾಯರದೇ ಔಷಧ ನಡೆದಿತ್ತು.

ಅಂಗಾರರಾಯರು ಒಂದು ದಿನ ಡಾಕ್ಟರರಿಗೆ "ಶೀನು, ಇನ್ನು ಮುಗಿಸು. ಈ ಎರಡೂ ಹೆಣ ಇಟಗೊಂಡು ಆಳಲಾರೆ." ಎಂದು ಹೇಳಿಬಿಟ್ಟರು.

"ಅಂಗಾ, ಅಂಗಾ, ನೀ ಮನುಷ್ಯನೋ ಸೈತಾನನೋ!"

"ನಾ ಮನುಷ್ಯಾಂತನ ಹೇಳತೇನಿ. ಈ ಯಾತನಾನ ನೋಡಲಾರೆ. ಎರಡೂ ನಿಕಾಲೆ ಹೊಡಿಸಿಬಿಡು. ಈಗ ಹದಿನೆಂಟಿಪ್ಪತ್ತು ವರ್ಷಾತು, ಆಕಿ ಇದ್ದ ಹಾಂಗೂ ಅಲ್ಲ, ಸತ್ತ ಹಾಂಗೂ ಅಲ್ಲ, ಬಿದ್ದುಕೊಂಡಾಳ, ಇನ್ನ ಅಕ್ಕೂನೂ ಇದ್ದರ ಏನು ಮಾಡತಾಳ!"

"ಹೌದೋ! ನೀ ಅಂಬೋ ಹಾಂಗಽ ಆಗೇದ." ಆ ಮೇಲೆ ಡಾಕ್ಟರರು ತುಸು ವಿಚಾರ ಮಾಡಿ ಅಂದರು "ಅಂಣಾ ನಾ ಹೇಳಿದ ಹಾಂಗ ಮಾಡತೀಯಾ!"

"ಅದಕ್ಕೆಷ್ಟ್ಯಾಕ ಕೇಳಬೇಕು! ಕುತಗ್ಯಽನಽ ಕೊಟ್ಟೇನಿ ನಿನ್ನ ಕೈಯಾಗ."

"ನಾಲ್ಕೆಂಟು ಕನಡು, ಮರಾಠಿ, ಇಂಗ್ರೇಜಿ ವರ್ತಮಾನ ಪತ್ರದಾಗ ಜಾಹಿರಾತ ಕೊಡು ಭುಜಂಗರಾಯನ ಹೆಸರಲೆ."

"ಆ ಲಫಂಗನ ಹೆಸರ ತಗಿಬ್ಯಾಡಾ." ಅಂಣಾರಾಯರು ಕಿವಿ ಮೇಲೆ ಕೈಯಿಟ್ಟು ಹೇಳಿದರು.

"ಮಗಳ ಬೇಕಾದರಽ ಆ ಲಫಂಗನೂ ಬರಽವನ."

ಎರಡು ತಾಸು ವಾದ ಹಾಕಿ ಕೊನೆಗೊಮ್ಮೆ ಅಂಣಾರಾಯರು ಶ್ರೀನಿವಾಸರಾಯರ ಮಾತಿಗೊಪ್ಪಿದರು. ಶ್ರೀನಿವಾಸರಾಯರೂ ಇದೊಂದು ಔಷಧಯೋಜನೆಯೆಂದೇ ತಿಳಕೊಂಡಿದ್ದರು.

---

## ೨೮.

## ಪುನರಾಗಮನಾಯ ಚ

ಅಂಣಾರಾಯರ ಜಾಹೀರಾತಿಗೆ ಉತ್ತರ ಸಿಗಲಿಲ್ಲ. ಹಿಂದುಸ್ತಾನದ ಅಪಾರ ಜನಸಮುದ್ರದಲ್ಲಿ ಭುಜಂಗರಾಯರಂಥ ಒಂದು ಬಿಂದುಮಾತ್ರವನ್ನು ಹುಡುಕಿ ತೆಗೆದು ಸುದ್ದಿ ಮುಟ್ಟಿಸುವ ಪೋಸ್ಟ್ಮನ್‌ನಾದರೂ ಎಲ್ಲಿದ್ದನು!

ಡಾಕ್ಟರರ ಕೈಗೆ ಯಶಸ್ಸು ಬರಹತ್ತಿತು. ಅಕ್ಕವ್ವನ ಜ್ವರ ಕಡಿಮೆಯಾದವು. ಹಾಸಿಗೆಯಿಂದ ಅತ್ತಿತ್ತ ಸರಿದಾಡುವಷ್ಟು ಸಹ ಶಕ್ತಿ ಉಳಿಯಲಿಲ್ಲ. ಆದರೂ ಮೊದಲಿನಿಂದ ಅಕ್ಕವ್ವನ ಇರುವಿಕೆ

ಸುವ್ಯವಸ್ಥಿತವಾದದ್ದು. ಅವಳ ಪ್ರಸನ್ನಮುಖದ ಸ್ವಾಗತವೇ ಡಾಕ್ಟರರಿಗೆ ಪ್ರತಿದಿನ ಉತ್ಸಾಹ ಕೊಡುತ್ತಿತ್ತು.

ಡಾಕ್ಟರರು “ಸಾಯುಟೋ ಸೀರಮ್” ದ ಇಂಜೆಕ್‌ಶನ್ ಮಾಡಿ ಮುಗಿಸಿದ್ದರು. ಅಕ್ಕವ್ವ ಏನೋ ನಗೆಯಾಡುತ್ತ, “ಶೀನೀ ಕಾಕಾ, ಇನ್ನೆಷ್ಟಂತ ನನ್ನ ಬದುಕಸಬೇಕಂತೀರಿ!” ಎಂದು ಕೇಳಿದಳು. ಡಾಕ್ಟರರು ಬೆಚ್ಚಿ ಬಿದ್ದರು.

“ಹಾಂಗಾರೇನು ಮಾಡಬೇಕಂತಿಽ!”

“ಯಾವದಾರಽ ಔಷಧ ಚುಚ್ಚಿ ಪೂರಾ ಮಲಕೊಂಡು ಬಿಡೋ ಹಾಂಗ ಮಾಡಬಾರದಽ!” ಡಾಕ್ಟರರಿಗಂಗ ಆ ನಗೆಯಲ್ಲಿ ಭಯಾನಕತೆಯು ಕಂಡು ಬಂತು. ಅವರು ಕ್ಷಣಹೊತ್ತು ಶೂನ್ಯ ದೃಷ್ಟಿಯಿಂದ ಅವಳ ಕಡೆಗೆ ನೋಡಿ “ಅಕ್ಕವ್ವಾ, ನಿನ್ನ ಹಾಂಗೊಮ್ಮೆ ಮಲಗಿಸಿದೇಽಂದರಽ ನನ್ನ ಔಷಧ ಯಾರ ಕುಡಬೇಕು ಅವ್ವಾಲೆ!” ಎಂದು ಮೋರೆ ತಿರುವಿದರು. ಕಣ್ಣುಗಳಿಂದ ಎರಡು ಹನಿಗಳು ದುರಿದುವೋ ಏನೋ!

“ಔಷಧ ತೋಗೊಂಬುದೂ ನೆಟ್ಟಗಾಗೋದರ ಸಲಿಂದ. ನನಗ ನೆಟ್ಟಗಾಗಬೇಕಂತ ಅನಸೋದಿಲ್ಲಲ್ಲ!” ಅವಳ ದನಿ ನಡುಗಿತು. ಡಾಕ್ಟರರು “ನಿನ್ನ ಬಾಯಿ ಮುಚ್ಚೋ ಔಷಧ ಕೊಡಬೇಕಾತಿನ್ನ” ಎಂದು ವಿನೋದ ಮಾಡುತ್ತ ಹೊರಟು ಹೋದರು.

ಆ ದಿನ ಅಂಗಾರರಾಯರು ಮಧ್ಯಾಹ್ನದಾಗ ವಾಮಕುಕ್ಷಿ ಮುಗಿಸಿಕೊಂಡು ಅಕ್ಕವ್ವನ ಕೋಣೆಯ ಕಡೆಗೇ ನಡೆದಿದ್ದರು. ಅಷ್ಟರಲ್ಲಿ ಒಬ್ಬ ಕೂಲಿಯವ ತಲೆಯ ಮೇಲೆ ಒಂದು ಹಾಸಿಗೆಯ ಸುರಳಿ, ಒಂದು ಟ್ರಂಕು ತೆಗೆದುಕೊಂಡು ಬಂದ. ಅಂಗಾರರಾಯರು ಊರಿಂದ ಯಾರಾದರೂ ಬಂದಿರಬಹುದೆಂದು ತಿಳಿದು ಏನೋ ಕುತೂಹಲದಿಂದ ನೋಡುತ್ತಾರೆ, ಭುಜಂಗರಾಯರು. ಈಗ ಛಾಯೆ ಮಾತ್ರ. ಆ ಕಣ್ಣುಗಳಲ್ಲಿ ತೇಜವಿದ್ದಿಲ್ಲ. ಆ ದೇಹಕ್ಕೆ ಕಾಂತಿಯಿದ್ದಿಲ್ಲ. ಅವರ ಈ ಸ್ಥಿತಿ ನೋಡಿ ಅಂಗಾರರಾಯರಿಗೂ ಕೆಟ್ಟೆನಿಸಿತು.

"ಈಗ ಹ್ಯಾಂಗಿದೆ!" ಭುಜಂಗರಾಯರು ಕೇಳಿದರು.

"ಇನ್ನೂ ಅಂತೂ ಮುಗಿದಿಲ್ಲ."

ಅಂಗಾರರಾಯರಿಗೆ ಜಾಸ್ತಿ ಮಾತಾಡಬೇಕಾಗಿದ್ದಿಲ್ಲ. ಏನೋ ಬಾಯಿಂದ ಹೊರಟು ಹೋಯಿತು. ಭುಜಂಗರಾಯರು ಏನೂ ಮಾತಾಡದೆ ತಮ್ಮ ಕೋಣೆಯ ಕಡೆಗೆ ನಡೆದರು. ಅಲ್ಲಿಯ ಪ್ರತಿಯೊಂದು ವಸ್ತುವು ಅವರ ಪರಿಚಯದ್ದು. ಅವುಗಳಿಗೆ ಮಾತ್ರ ಇವರ ಪರಿಚಯವಿತ್ತೋ ಇಲ್ಲೋ.

ಮನೆ ಮುಟ್ಟಿದ ಕೂಡಲೆ ಅಕ್ಕವ್ವನನ್ನು ಕಂಡು ಅವಳ ಪ್ರಕೃತಿ ನೋಡಬೇಕೆಂದು ಅವರ ವಿಚಾರವಿತ್ತು. ಆದರೂ ಈಗ ಡಾಕ್ಟರರನ್ನು ಕೇಳದೇ ಏನೂ ಮಾಡಬಾರದೆಂದು ನಿಶ್ಚಯಿಸಿ ಅವರ ದಾರಿ ಕಾಯುತ್ತ ಕುಳಿತುಕೊಂಡರು. ಸಂಜೆಗೆ ಡಾಕ್ಟರರೂ ಬಂದರು. ಅವರಿಗೆ ಭುಜಂಗರಾಯರನ್ನು ಕಂಡು ಆಶ್ಚರ್ಯವೆನಿಸಿದರೂ ಸಮಾಧಾನವೆನಿಸಿತು. "ಭುಜಂಗರಾವ, ಬಂದ್ರಿ ನೆಟ್ಟಗಾತು. ಇನ್ನ ನೀವೇನೋ ನಿಮ್ಮ ಪೇಶಂಟೇನೋ! ನನಗ ಕಾಳಜಿ ಇಲ್ಲಿನ್ನ. You are a doctor and a medicine in one." ಶ್ರೀನಿವಾಸರಾಯರ ನಗೆಯಿಂದ ಮನೆ ಹಾರಿತು. ಈ ವಿನೋದದಿಂದ ಭುಜಂಗರಾಯರ ಮನಸ್ಸಿನ ಮೇಲಿನ ಭಾರ ಕಡಿಮೆಯಾಗಿ ಅವರೂ ಅದರಲ್ಲಿ ಕೂಡಿಕೊಂಡರು. ಅಂಗಾರರಾಯರೂ ಬಂದರು. ಆ ಮೇಲೆ ಆ ಮೂವರೂ ಅಕ್ಕವ್ವನ ಕೋಣೆಯ ಕಡೆಗೆ ನಡೆದರು. ಕೋಣೆಯಲ್ಲಿ ಕಾಲಿಟ್ಟ ಕೂಡಲೆ ಎಂದಿನಂತೆ ಅವರ ಸ್ವಾಗತಕ್ಕೆ ಪ್ರಸನ್ನ ಮುಖವು ಎದುರಾಯಿತು. ಅಕ್ಕವ್ವ ಏನೋ ಮಾತಾಡತಕ್ಕವಳಿದ್ದಳು. ಅಷ್ಟರಲ್ಲಿ ಅವಳ ದೃಷ್ಟಿಗೆ ಭುಜಂಗರಾಯರು ಕಂಡರು. ಅವಳು ಗೋಡೆಯ ಕಡೆಗೆ ಮೋರೆ ತಿರುವಿ ಕಣ್ಣು ಮುಚ್ಚಿ ಮಲಗಿಕೊಂಡು ಬಿಟ್ಟಳು. ಅಂಗಾರರಾಯರೂ ಶ್ರೀನಿವಾಸರಾಯರೂ ಒಬ್ಬರನ್ನೊಬ್ಬರು ಮಿಕಿ ಮಿಕಿ ನೋಡಹತ್ತಿದರು.

ಅದೇ ರಾತ್ರಿಗೆ ಜಡ್ಡು ಮರಕಳಿಸಿತು.

---

## ೨೯.

### “ ನನ್ನ ಬಿಟ್ಟು ಹೋಗಬಾರದು. ”

ತಮ್ಮ ಬಗ್ಗೆ ಅಕ್ಕವ್ವನ ಅಭಿಪ್ರಾಯವೇನಿರುವದೆಂಬದು ಭುಜಂಗರಾಯರಿಗೀಗ ಸಂಪೂರ್ಣವಾಗಿ ಗೊತ್ತಾಗಿತ್ತು. ಆದಷ್ಟು ಅವರು ಅವಳ ದೃಷ್ಟಿಗೇ ಬೀಳುತ್ತಿದ್ದಿಲ್ಲ. ಪಥ್ಯ ಔಷಧಯೋಜನೆ ಇವೆಲ್ಲ ಅವರ ತಂತ್ರದಂತೇ ನಡೆದಿದ್ದುವು. ಏನೋ ಒಮ್ಮೊಮ್ಮೆ ಅಂಣಾರಾಯರಿಗೆ ಸ್ವಲ್ಪ ಆಸರ ಕೊಡುವುದಕ್ಕಾಗಿ ಅವಳ ಹತ್ತಿರ ಕುಳಿತುಕೊಳ್ಳುತ್ತಿದ್ದರಷ್ಟೇ.

ರಾತ್ರಿಯು ೩ ರ ಸುಮಾರಾಗಿರಬಹುದು. ಭುಜಂಗರಾಯರು ಅವಳ ಹತ್ತಿರ ಕುಳಿತಿದ್ದರು. ಅವಳ ಒಂದು ಕೈ ಇವರ ಕೈಯಲ್ಲಿತ್ತು. ದೀಪ ಮಿಣಿಮಿಣಿ ಉರಿಯುತ್ತಿತ್ತು. ಸುತ್ತಲೂ ನಿಃಶಬ್ದ ಶಾಂತತೆ. ಭುಜಂಗರಾಯರ ಮನಸ್ಸಿನಲ್ಲಿ ಮಾತ್ರ ವಿಚಾರದ ಸಂತೆ ನೆರೆದಿತ್ತು.

ಈಗ ಅಗತಿಕಳಾಗಿ ಹೀಗೆ ಇವಳು ತನ್ನ ಕೈ ತಮ್ಮ ಕೈಯಲ್ಲಿ ಕೊಟ್ಟಿರುವಳು. ಒಮ್ಮೆ ಹೀಗೇ ಬುದ್ಧಿಪುರಃಸರವಾಗಿ ಎಲ್ಲರ ಕಂಣಾರೆ ದೇವರನ್ನು ಸಾಕ್ಷಿಯಿಟ್ಟು (!) ಇದೇ ಕೈಯಿಂದ ತಮ್ಮ ಕೈ ಹಿಡಿದಿದ್ದಳು. ಈ ಎರಡು ಪ್ರಸಂಗಗಳ ವಿರೋಧ ಮನಸ್ಸಿನಲ್ಲಿ ಬಂದು ಅವರಿಗೆ ನಗೆ ಬಂತು. ಅವರು ಖಿನ್ನರಾಗಿ ಕಂಣೆದುರಿದ್ದ ಗೋಡೆಯ ಮೇಲೆ ಒಂದರ ಮೇಲೊಂದು ಕಲ್ಪನಾಚಿತ್ರವನ್ನು ಚಿತ್ರಿಸುತ್ತಾ ಕುಳಿತುಕೊಂಡರು.

ಅತ್ಯಂತ ಕ್ಷೀಣವಾದದ್ದೊಂದು ದನಿ ಕೇಳಬಂತು “ ತಿರಿಗಿ ಯಾಕ ಬಂದ್ರಿ! ” ಭುಜಂಗರಾಯರು ಬೆಚ್ಚಿ ಬಿದ್ದು ಕಕ್ಕಾವಿಕ್ಕಿಯಾಗಿ ನೋಡಹತ್ತಿದರು. ಅಕ್ಕವ್ವ ಅವರ ಕೈ ಬಿಗಿಯಾಗಿ ಹಿಡಿದಿದ್ದು ಅವಳ ಮೈಯೆಲ್ಲ ಗದಗದ ನಡುಗುತ್ತಿತ್ತು. ಅವಳಿಗಿದು ‘ ಫಿಟ್ ’ ಬಂತೆಂದೇ ತಿಳಿದು, ದೀವಿಗೆ ಏರಿಸಿ ಅವಳ ಮುಂದೆ ಹಿಡಿದು ನೋಡಿ

ದರು. ಅವಳ ಎರಡೂ ಕಣ್ಣುಗಳಿಂದ ಹಾಗೇ ನೀರು ಸುರಿಯುತ್ತಿದ್ದುವು. ಅವಳು ಮತ್ತೆ ಪ್ರಯಾಸದಿಂದ ಕೇಳಿದಳು. "ತಿರಿಗಿ ಯಾಕ ಬರೋಣ್ಣಾತು!" ಭುಜಂಗರಾಯರಿಗೇನೂ ಉತ್ತರ ತೋಚಲಿಲ್ಲ. ಸ್ವಲ್ಪ ವಿಚಾರ ಮಾಡಿ ಅವರು ಅಂದರು "ನೀ ಮಲಕೋ ನೋಡೋಣ! ನಾ ನಿನ್ನ ಕಂಣೆದುರಿಗೇ ಬ್ಯಾಡಾಂತಿದ್ದರs ನಾಳೇ ಎಲ್ಲ್ಯಾರ ಹೋಗತೇನಿ. ನೀ ನೆಟ್ಟಗಾಗು ಮೊದಲು." ಅವಳ ಆಶಯ ತಿಳಿಯಿತು.

"ಬಸಕ್ಕ ಎಲ್ಲಿದ್ದಾರs!" ಮತ್ತೆ ಕೆದರಿ ಕೇಳಿದಳು.

ಭುಜಂಗರಾಯರ ಕೈಯಲ್ಲಿಯ ದೀವಿಗೆ ತತ್ತರಿಸಹತ್ತಿತು. ಈ ಪ್ರಶ್ನೆ ಅವರಿಗಂತೂ ಅನಪೇಕ್ಷಿತವೇ ಇತ್ತು. ಗಂಡಹೆಂಡಿರ ಮಾತಿನಲ್ಲಿ ಎಂದೂ ಬಾಯಿ ವಿಷಯ ತಪ್ಪಿ ಸಹ ಹೊರಟಿದ್ದಿಲ್ಲ. ಅವರು ಗಡಬಡಿಸಿ "ಆಕಿsನೂ ಬಂದಾಳ" ಎಂದು ಹೇಳಿದರು.

ನಿಜವಾದ ಸಂಗತಿ ಹೀಗಿತ್ತು. ಭುಜಂಗರಾಯರು ತೋಪಿನಿಂದ ಹೊರಟವರು ಮುಂಬಯಿಯಲ್ಲಿ ಕೆಲದಿನ ಇದ್ದು ಉತ್ತರ ಹಿಂದುಸ್ತಾನದ ದಾರಿಯನ್ನೇ ಹಿಡಿದರು. ದಿಲ್ಲಿ, ಆಗ್ರಾ, ಅಜಮೀರ ನೋಡುತ್ತ ಮಾಡುತ್ತ ಹೊರಟಾಗ, ದಾರಿಯಲ್ಲಿಯೇ ಬಾಯಿಯರು ಪ್ರಸೂತರಾದರು. ಪ್ರವಾಸದ ಶ್ರಮ. ಹೊತ್ತಿಗೆ ಯೋಗ್ಯ ಉಪಚಾರದ ಅಭಾವ. ಗೋಳಾಡಿ ಗೋಳಾಡಿ ಕೊನೆಗೊಮ್ಮೆ ಮುಕ್ತರಾದರು. ಮರುದಿನ ಕೂಸೂ ಹೋಯಿತು. ಭುಜಂಗರಾಯರದಂತೂ ಎಲ್ಲ ಪರಿವೆ ಹರಿದಂತಾಯಿತು. ಮುಂದೆ ದಿಕ್ಕು ತಪ್ಪಿ ಊರೂರು ತಿರುಗುತ್ತ ಹೃಷೀಕೇಶಕ್ಕೆ ಬಂದು ಹತ್ತಿದರು. ಅಲ್ಲಿ ಒಂದು ಇಂಗ್ರೇಜಿ ದೈನಿಕದಲ್ಲಿ ಅಂಣಾರಾಯರು ಕೊಟ್ಟ ಜಾಹೀರಾತ ನೋಡಿದರು. ಹಾಗೇ ಸೋಮನಾಥಪುರಕ್ಕೆಂದು ಹೊರಟಿದ್ದು ಬಂದು ಬಿಟ್ಟಿದ್ದರು.

ಮೇಲಿನ ಸಂವಾದವಾದನಂತರ ಅಕ್ಕವ್ವ ಏನೂ ಮಾತಾಡ

ಲಿಲ್ಲ ಭುಜಂಗರಾಯರೂ ಮಾತಾಡಲಿಲ್ಲ. ಅವರಿಬ್ಬರೂ ತಮ್ಮ ತಮ್ಮ ವಿಚಾರದಲ್ಲಿ ಪೂರಾ ಮಗ್ನರಾಗಿ ಹೋಗಿದ್ದರು. ಬೆಳಗು ಹರಿಯುವಾಗ ಅಕ್ಕವ್ವನೇ "ನನ್ನ ಬಿಟ್ಟು ಹೋಗಬಾರದು" ಎಂದು ಅವರ ಕೈಹಿಡಿದಳು. ಭುಜಂಗರಾಯರು ಸಂಮೂಢರಾದಂತೆ "ಹಾಂಗs ಮಾಡೋಣ. ನೀ ಈಗ ಮಲಕೋ ಸ್ವಸ್ಥ" ಎಂದು ಅಂದರು. ಅಕ್ಕವ್ವನಿಗೆ ತುಸು ಹೊತ್ತಿನಲ್ಲಿ ಗಾಢ ನಿದ್ರೆ ಹತ್ತಿತು. ಭುಜಂಗರಾಯರು ಅವಳ ಹಣೆಯ ಮೇಲೆ ಕೈಯಿಟ್ಟು ಪೂರಾ ಬೆಳಗಾಗುವ ವರೆಗೆ ಹಾಗೇ ಕುಳಿತುಕೊಂಡಿದ್ದರು.

---

## ೩೦

## "ನೀಗಿದ್ಲೊಮ್ಮ!"

ಅಕ್ಕವ್ವ ಈಗ ತನ್ನ ಕೋಣೆಯಲ್ಲಿಯೇ ಓಡಾಡಿಕೊಂಡಿರುವಷ್ಟು ನೆಟ್ಟಗಾಗಿದ್ದಳು. ಭುಜಂಗರಾಯರು ಎಂದಿನಂತೆ ತಮ್ಮ ದವಾಖಾನೆಗೆ ಹೋಗಹತ್ತಿದ್ದರು. ರಾಧಾಬಾಯರು ಮಾತ್ರ ದಿನ ದಿನಕ್ಕೆ ಸೋಲುತ್ತ ನಡೆದಿದ್ದರು.

ಒಂದು ದಿನ ಅಕ್ಕವ್ವ ಮುಂಜಾನೆ ತನ್ನ ಕೋಣೆಯಲ್ಲಿ ಕೂದಲ ಹಿಕ್ಕಿ ಕಟ್ಟಿಕೊಳ್ಳುತ್ತಿದ್ದಳು. ಪದ್ದಕ್ಕ ಗಾಬರಿ ಗಾಬರಿಯಾಗಿ ಬಂದು ಹೇಳತೊಡಗಿದಳು. "ನಡ್ರಿ, ನಡ್ರಿ, ಈವೊತ್ತಿನ ಲಕ್ಷಣಾನs ಬ್ಯಾರೇ ಕಾಣಸ್ತಾವs" ಎಂದು ಹೇಳಿ ಗಡಿಬಿಡಿಯಿಂದ ರಾಧಾಬಾಯರ ಕೋಣೆಯ ಕಡೆಗೆ ನಡೆದಳು. ಅಕ್ಕವ್ವನೂ ಹಾಗೇ ಕೂದಲ ಮುದುಡಿಕೊಂಡು ಅವಳ ಬೆನ್ನು ಹತ್ತಿದಳು. ಕೋಣೆಯ ಬಾಗಿಲು ಮುಂದೆ ಮಾಡಿತ್ತು. ಅವಳು ದುಮುಕಿ ಒಳಗೆ ಹೋದಳು. "ಅವ್ವಾs—ಅವ್ವಾs— ಮಾತಾಡs, ನಾ ಬಂದೇನಿ—" ರಾಧಾಬಾಯರು

ಕಣ್ಣು ಮುಚ್ಚಿ ಮಚ್ಚಿನಲ್ಲಿ ಮಲಗಿಕೊಂಡಿದ್ದರು. ಆ ದೇಹದಲ್ಲಿ ಈಗ ಏನೂ ಉಳಿದಿದ್ದಿಲ್ಲ. ಕಣ್ಣು ಒಳಸಟ್ಟಿದ್ದವು. ಗಲ್ಲ ಸೇದಿಕೊಂಡಿದ್ದವು. ತುಟಿ ಕಪ್ಪುಕಾಡಿಗೆಯಾಗಿದ್ದವು. ಅವರ ಸ್ಥಿತಿಯನ್ನು ನೋಡಿ ಅಕ್ಕವ್ವನಿಗೆ ತುಂಬಿಯೇ ಬಂತು.

ಪದ್ದಕ್ಕ ಒದರಿ ಹೇಳಿದಳು. "ಅಕ್ಕವ್ವ ಬಂದಾರ್ರಿ." ರಾಧಾಬಾಯರು ಕಣ್ಣು ತೆರೆದು ತಮ್ಮ ಮಗಳನ್ನು ಒಮ್ಮೆ ಕಣ್ಣುತುಂಬ ನೋಡಿಕೊಂಡರು. ಮಾತಾಡಲಿಕ್ಕೆ ಯತ್ನಿಸಿದರು. ನಾಲಿಗೆ ಹೊರಳಲಿಲ್ಲ.

"ಅಕ್ಕು, ಅಳಬ್ಯಾಡಾ. ಹೊರಗಿನಿಂದ ಬಂದಿದ್ದರ್ರಿ ಕಳಿಸಿ ಕೊಡಿಲ್ಲೆ!" ರಾಧಾಬಾಯರ ಕಣ್ಣು ಮತ್ತೆ ಮುಚ್ಚಿದವು.

ಅಕ್ಕವ್ವನ ಮನಸ್ಸಿನಲ್ಲಿ ಅಲ್ಲಿಂದ ಎಲ್ಲಿಯೂ ಸರಿದಾಡಬಾರದೆಂದೇ ಇತ್ತು. ಆದರೂ ರಾಧಾಬಾಯರ ಸ್ಥಿತಿ ನೋಡಿ ಇದು ಅವರ ಕೊನೆಯ ಇಚ್ಛೆ ಎಂದು ತಿಳಿದು ಅಂಣಾರಾಯರ ಕೋಣೆಗೆ ಹೋದಳು. ಅವರೂ ಹಾದಿ ಕಾಯುತ್ತಿದ್ದರೋ ಏನೋ. ಅಕ್ಕವ್ವ ಅಳುತ್ತ ಎಲ್ಲ ಸಂಗತಿ ಹೇಳಿದಳು. "ಅಂಣಾ, ಈಗ ಅಲ್ಲೇನುಳಿದಿಲ್ಲ- ಅವ್ವಂತೂ ನಡದಬಿಟ್ಟಳು." ಅಂಣಾರಾಯರಿಗೆ ಈಗ ಮೂರು ದಿನಗಳಿಂದ ತಮ್ಮ ಹೆಂಡತಿ ಇನ್ನು ಕೈಗೆ ಹತ್ತುವುದಿಲ್ಲೆಂದೆನಿಸುತ್ತಿತ್ತು. ಅವರು ಹೊರಟೇ ಬಿಟ್ಟರು.

ರಾಧಾಬಾಯರ ಕಣ್ಣು ಅವರ ದಾರಿಯ ಕಡೆಗೇ ಇತ್ತು. ಅವರು ಬಂದಕೂಡಲೆ ಪದ್ದಕ್ಕ ಹೊರಗೆ ಹೋದಳು. ಗಂಡಹೆಂಡಿರಿಬ್ಬರೇ ಉಳಿದರು.

ಅಂಣಾರಾಯರನ್ನು ನೋಡಿದ ಕೂಡಲೇ ರಾಧಾಬಾಯರ ಮನೋಭಾವನೆಗಳು,— ಇದುವರೆಗೆ ಬಚ್ಚಿಟ್ಟ ಮನೋಭಾವನೆಗಳು ಹೊರವುಕ್ಕಿ ಚೆಲ್ಲಹತ್ತಿದುವು. ಅಂಣಾರಾಯರೂ ಆ ಪ್ರೇಮ

ಸಮಾಧಿಯಲ್ಲಿ ಬೆರೆತು, ಹತ್ತಿರ ಹೋಗಿ, ಸತೃಷ್ಣದೃಷ್ಟಿಯಿಂದ ನೋಡುತ್ತ, ಅವರ ಮೋರೆಯ ಮೇಲೆ ಕೈಯಾಡಿಸಿದರು. ರಾಧಾಬಾಯರು ನಸುನಕ್ಕು ಅಂದರು "ನನ್ನಿಂದ ನಿಮಗ ಸುಖ ಇದ್ದಿಲ್ಲ. ನಾ ಹೋಗಿದ್ದರs ನೆಟ್ಟಗಾಗತಿತ್ತು. ಬರತಿದ್ಲು ಯಾವಾಕ್ಯಾರೆs-ಕಾಲಕಡಗದಾಕಿಲ್ಲs-ಪೈಜಣದಾಕಿ."

"ಮಲಕೋ ನೋಡೋಣ."

"ಅದ ಆವs ಅಲ್ಲ ಹುತ್ತs. ಅದ ಹಾತ್ರ ಕಡsದು!"

"ನಿನಗೇನಾಗೇದಿವತ್ತs!"

"ರಾಧಾಬಾಯರು ಅಂಣಾರಾಯರನ್ನು ಬಿಗಿದಪ್ಪಿಕೊಂಡರು. ಅಂಣಾರಾಯರು ಕ್ಷಣಹೊತ್ತು ಮೈಮರೆತರು. ತಮ್ಮ ತುಟಿಗಳಿಗೆದುರಾದ ತುಟಿಗಳನ್ನು ಚುಂಬಿಸಿದರು. ಈ ತಂದ್ರೆಯು ಅವರನ್ನು ಮರುಳುಗೊಳಿಸಿತು. ಎಚ್ಚತ್ತು ನೋಡುತ್ತಾರೆ, ಆ ತುಟಿಗಳ ಮೇಲೆ ಸ್ಪಂದನವಿನ್ನೂ ನಡೆದಿತ್ತು. ಗಲ್ಲದ ಮೇಲಿನ ಕೆಂಪು ಇಳಿದಿದ್ದಿಲ್ಲ. ದೀಪ ಆರಿತ್ತು.

"ನೀಗಿ ಹೋದ್ಳೆಮ್ಮ!" ಅಂಣಾರಾಯರು ಜಡಹೃದಯದಿಂದ ಕೋಣೆ ಬಿಟ್ಟು ಹೊರಗೆ ಬಂದರು.

———

## ೩೧

## ಓಂ ಸ್ವಸ್ತಿ !

ಅಕ್ಕಮ್ಮನಿಗೀಗೊಂದು ಮಗು ಹುಟ್ಟಿರುವುದು. ಅವಳ ಈ ಶಿಶುಕಾವ್ಯವನ್ನು ನೋಡಿ ಮುಗ್ಧರಾಗದ ರಸಿಕರಿಲ್ಲ. ಅವಳಿಗೂ ಈಗ ಇತರ ಕೆಲಸದ ಕಡೆಗೆ ಲಕ್ಷ್ಯ ಹತ್ತುವುದೇ ಇಲ್ಲ. ಮನೆಯಲ್ಲಿ ಎಲ್ಲದಕ್ಕೂ ಪದ್ಮಕ್ಕ ಬೇಕೇಬೇಕಾಗುತ್ತಿದ್ದಳು.

ಭುಜಂಗರಾಯರಿಗೆ ಒಮ್ಮೊಮ್ಮೆ ಬಾಯರ ನೆನಪಾಗಿ ಅವರು ಖಿನ್ನರಾಗುವರು. ಆ ನೆನಪು ಎಂದೂ ಅಳಿಯಲಾರದೇ ?

---